ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 15 | ಸಂಚಿಕೆ 27 | ಜೂನ್ 28–ಜುಲೈ 4, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಸಿ.ಎಂ. ಕುರ್ಚಿಯ ಮೇಲೆ ಎಲ್ಲರ ಕಣ್ಣು?!





ಬಳ್ಳಾರಿ ಗಣಿಗಾರಿಕೆ: ಪರಿಸರ ವಿನಾಶ– ಅದರ ಪುನಶ್ಚೇತನ





ಶ್ರಮಜೀವಿಗಳು ಮತ್ತು ತುರ್ತು ಪರಿಸ್ಥಿತಿ



ನಾಲ್ಕು ವರ್ಷಗಳ ಪದವಿ ಶಿಕ್ಷಣ: ಬೆಂಕಿಯಿಂದ ಬಾಣಲೆಗೆ





ಜೀವ ಹಿಂಡುವ ಬೆಲೆ ಏರಿಕೆ

ಕೊವಿಡ್‌ಗೆ ಬಲಿಯಾದವರ ಕುಟುಂಬಗಳಿಗೆ ವಿಪತ್ತು ನಿರ್ವಹಣಾ ಕಾಯ್ದೆಯ ಪ್ರಕಾರ ಪರಿಹಾರ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಕೇಂದ್ರ ಸರಕಾರ ಕೊವಿಡ್ ಮಹಾಸೋಂಕನ್ನು ನಿಭಾಯಿಸಲು ವಿಪತ್ತು ನಿರ್ವಹಣಾ ಕಾಯ್ದೆಯ ಮೊರೆ ಹೋಗಿದೆ. ಈ ಕಾಯ್ದೆಯ ಪ್ರಕಾರ ಒಂದು ವಿಪತ್ತಿಗೆ ಬಲಿಯಾದವರಿಗೆ ಪರಿಹಾರ ಒದಗಿಸಬೇಕು. ಆದರೆ ಈ ರೀತಿ ಅನುಕಂಪದ ಪಾವತಿಗಳು ಸರಕಾರದ ಹಣಕಾಸಿನ ಮೇಲೆ ತೀವ್ರ ಒತ್ತಡಗಳನ್ನು ತರುತ್ತವೆ ಎಂದು ಅದು ಹೇಳುತ್ತಿದೆ. ಕೇಂದ್ರ ಸರಕಾರದ ಈ ತಿಳುವಳಿಕೆಯನ್ನು ತಿರಸ್ಕರಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ಮಹಾಸೋಂಕಿಗೆ ಬಲಿಯಾದವರ ಕುಟುಂಬಗಳಿಗೆ ಅನುಕಂಪದ ಮೇಲೆ ಪರಿಹಾರ ಕೊಡುವುದು ಒಂದು ಮೂಲ ಮಾನವೀಯ ಅಗತ್ಯ ಎಂದು ಅದು ಹೇಳಿದೆ.

ಇದು ಸರಕಾರದ ಹಣಕಾಸಿನ ಮೇಲೆ ತೀವ್ರ ಒತ್ತಡಗಳನ್ನು ಉಂಟು ಮಾಡುತ್ತದೆ ಎಂದು ಮೇಲ್ನೋಟಕ್ಕೆ ಸರಿಯೆನಿಸಬಹುದಾದ ತರ್ಕ. ಆದರೆ ಸರಕಾರ ವಿತ್ತೀಯ ಕೊರತೆಯ ಮಟ್ಟಗಳನ್ನು ಸದಾ ಕಾಪಾಡಿಕೊಳ್ಳಬೇಕೆಂಬ ತನ್ನ ಖಯಾಲಿಗೆ ಅಂಟಿಕೊಳ್ಳುವುದನ್ನು ಇಂತಹ ದೊಡ್ಡ ಪ್ರಮಾಣದ ಬಿಕ್ಕಟ್ಟಿನ ಸಮಯದಲ್ಲಾದರೂ ಕೈಬಿಡುವುದಾದರೆ, ಈ ಪರಿಹಾರಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಎತ್ತುವುದು ಸಾಧ್ಯವಿದೆ. ಇಂತಹ ಮಹಾ ಅನಾಹುತದ ಸಮಯದಲ್ಲಿ ಇಂತಹ ಹಣಕಾಸು ಮೂಲಭೂತವಾದಕ್ಕೆ ಯಾವುದೇ ಅರ್ಥವಿಲ್ಲ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಕಳೆದ ಒಂದು ವರ್ಷದಲ್ಲಿ ಕೋಟ್ಯಂತರ ಜನಗಳು ತಮ್ಮ ಜೀವನಾಧಾರಗಳನ್ನು ಕಳಕೊಂಡಿದ್ದಾರೆ, ಬದುಕುಳಿಯಲು ಹೆಣಗುತ್ತಿದ್ದಾರೆ. ಅವರಿಗೆ ಅತ್ಯಂತ ಅಸಮರ್ಪಕವಾದ ಆರೋಗ್ಯ ಸೌಕರ್ಯಗಳು, ಜೀವ ಉಳಿಸುವ ಔಷಧಿಗಳ ಕೊರತೆ ಮುಂತಾದವುಗಳೊಂದಿಗೆ ಈ ಮಹಾಸೋಂಕಿನೊಂದಿಗೆ ಸೆಣಸುವಲ್ಲಿಯೂ ಸಿಗುತ್ತಿರುವ ನೆರವು ಅತ್ಯಲ್ಪವೇ. ಕೋಟ್ಯಂತರ ದಿನಗೂಲಿ ಕಾರ್ಮಿಕರು ಬದುಕುಳಿಯಲು ಆಧಾರವಾಗಿರುವ ಅನೌಪಚಾರಿಕ ವಲಯ ಸಂಪೂರ್ಣವಾಗಿ ಧ್ವಂಸವಾಗಿದೆಯೆಂದೇ ಹೇಳಬೇಕಾಗುತ್ತದೆ. ಈ ಹಿಂದೆ ನೋಟುರದ್ದತಿ ಮತ್ತು ಜಿಎಸ್‌ಟಿ ಯಿಂದ ಆರಂಭವಾಗಿದ್ದ ಈ ವಲಯದ ಅಳಿವಿನ ಮೇಲೆ ಈಗ ಈ ಮಹಾಸೋಂಕು ಬಂದೆರಗಿದೆ.

ಇಂತಹ ಸನ್ನಿವೇಶದಲ್ಲಿ, ಈ ಮಹಾಸೋಂಕಿಗೆ ಬಲಿಯಾದವರ ಕುಟುಂಬಗಳಿಗೆ ಅನುಕಂಪದ ಮೇಲೆ ಪರಿಹಾರ ಕೊಡುವುದು ಒಂದು ಮೂಲ ಮಾನವೀಯ ಅಗತ್ಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಪತ್ತು ನಿರ್ವಹಣಾ ಕಾಯ್ದೆಯ ಉಪಬಂಧಗಳ ಪ್ರಕಾರ ಕೊವಿಡ್ ಮಹಾಸೋಂಕಿಗೆ ಬಲಿಯಾಗಿ ಜೀವ ಕಳಕೊಂಡವರ ಕುಟುಂಬಗಳಿಗೆ ಅನುಕಂಪದ ಪರಿಹಾರವನ್ನು ಕೊಡಬೇಕು ಎಂದು ಸರಕಾರವನ್ನು ಆಗ್ರಹಿಸಿದೆ.

ಯುದ್ಧಸಾಮಗ್ರಿಗಳ ಇಲಾಖೆಯ ಕಾರ್ಪೊರೇಟೀಕರಣ– ಬಿಜೆಪಿ ಸರಕಾರದ ವಿನಾಶಕಾರೀ ನಿರ್ಧಾರ: ಸಿಐಟಿಯು ಖಂಡನೆ: ರಕ್ಷಣಾ ವಲಯದ ಕಾರ್ಮಿಕರ ಐಕ್ಯ ಹೋರಾಟಕ್ಕೆ ಬೆಂಬಲ ಮತ್ತು ಸೌಹಾರ್ದ

ರಕ್ಷಣಾ ಇಲಾಖೆಯ ಅಡಿಯಲ್ಲಿರುವ 44 ಯುದ್ಧಸಾಮಗ್ರಿಗಳ ಕಾರ್ಖಾನೆಗಳನ್ನು ಏಳು ಭಾಗಗಳಾಗಿ ಮಾಡಿ ಅವನ್ನು ಕಂಪನಿಗಳ ಕಾಯ್ದೆಯ ಅಡಿಯಲ್ಲಿ ಕಂಪನಿಗಳಾಗಿ ಪರಿವರ್ತಿಸಲು ಬಿಜೆಪಿ ಸರಕಾರ ನಿರ್ಧರಿಸಿದೆ.ಇದೊಂದು ವಿನಾಶಕಾರೀ ನಿರ್ಧಾರ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ.

ಯುದ್ಧಸಾಮಗ್ರಿಗಳ ಜಾಲ ಮತ್ತು ಕೆಲವು ಸಾರ್ವಜನಿಕ ವಲಯದ ರಕ್ಷಣಾ ಉದ್ದಿಮೆಗಳು ದೇಶದ ರಕ್ಷಣಾ ಸನ್ನದ್ಧತೆಗೆ ದಕ್ಷತೆಯಿಂದ ಕೆಲಸ ಮಾಡುತ್ತಿವೆ, ಅಲ್ಲದೆ ರಕ್ಷಣೆಯ ಮೂಲ ಅಗತ್ಯಗಳಾದ ಸೈನಿಕರ ಸಮವಸ್ತ್ರಗಳು, ಉತ್ತಮ ಗುಣಮಟ್ಟದ ಕವಚಗಳು, ಮದ್ದುಗುಂಡುಗಳು, ವಾಹನಗಳು , ಸಣ್ಣ ಶಸ್ತ್ರಾಸ್ತ್ರಗಳು ಮತ್ತಿತರ ಯುದ್ಧಸಾಮಗ್ರಿಗಳನ್ನು ಪೂರೈಸುತ್ತಿವೆ. ನಮ್ಮ ರಕ್ಷಣಾ ಪಡೆಗಳ 75%ದಷ್ಟು ಅಗತ್ಯಗಳನ್ನು ಅವು ದಕ್ಷತೆಯಿಂದ ಉತ್ತಮ ಗುಣಮಟ್ಟಗಳನ್ನು ಕಾಪಾಡಿಕೊಂಡೇ ಪೂರೈಸುತ್ತಿವೆ. ಈಗ ಈ ಸರಕಾರ ಬಹುವಾಗಿ ಪ್ರಚಾರ ಮಾಡುತ್ತಿರುವ “ಆತ್ಮನಿರ್ಭರ್”ನ ಪ್ರಶ್ನಾತೀತ ಉದಾಹರಣೆಗಳಿವು. ಆದ್ದರಿಂದ ಈಗಿರುವ ಯುದ್ಧಸಾಮಗ್ರಿಗಳ ಕಾರ್ಖಾನೆಗಳ ವ್ಯವಸ್ಥೆಯನ್ನು ಬದಲಿಸುವ ಅಗತ್ಯವೇನೂ ಇಲ್ಲ.

ಇದನ್ನೀಗ ಬದಲಿಸಲು ಹೊರಟಿರುವ ಏಕೈಕ ಉದ್ದೇಶವೆಂದರೆ ಇವನ್ನು ಹಂತ-ಹಂತವಾಗಿ ಖಾಸಗೀಕರಿಸಲು ಅನುಕೂಲ ಕಲ್ಪಿಸಿಕೊಳ್ಳುವುದು ಮಾತ್ರ ಎಮದು ಸಿಐಟಿಯು ಅಭಿಪ್ರಾಯ ಪಟ್ಟಿದೆ. ಇದು ಈ ಸರಕಾರದ ವಿವಿಧ ನೀತಿ ಪ್ರಕಟಣೆಗಳಲ್ಲಿ ಈಗಾಗಲೇ ಕಂಡು ಬಂದಿದೆ. ಇದು ಖಾಸಗೀಕರಣವಷ್ಟೇ ಅಲ್ಲ, ವಿವಿಧ ಮಾರ್ಗಗಳ ಮೂಲಕ ವಿದೇಶೀ ಕಾರ್ಪೊರೇಟ್‌ಗಳ ಪ್ರಾಬಲ್ಯಕ್ಕೆ ದಾರಿ ಮಾಡಿ ಕೊಡುವ ಕ್ರಮ ಕೂಡಾ ಆಗಿದೆ. ಈ ಹಿಂದೆಯೂ ಹಲವು ಸರಕಾರಗಳು ಯುದ್ಧ ಸಾಮಗ್ರಿಗಳುತ್ಪಾದನೆಯ ಕೆಲವು ಭಾಗಗಳನ್ನು ಹೊರಗುತ್ತಿಗೆ ಕೊಡಲು ಪ್ರಯತ್ನಿಸಿವೆ. ಆದರೆ ಭಾರತದ ಖಾಸಗಿ ಉತ್ಪಾದಕರು ಗುಣಮಟ್ಟದ ಉತ್ಪನ್ನಗಳನ್ನು ಕೊಡಲು ವಿಫಲರಾಗಿದ್ದಾರೆ. ಆದರೆ ಈಗ ರಕ್ಷಣಾ ಉತ್ಪಾದನೆಯಲ್ಲೂ ಖಾಸಗಿ ಭಾಗವಹಿಸುವಿಕೆಯನ್ನು ಪ್ರತಿಪಾದಿಸುವ ಧೋರಣೆಗಳನ್ನು ಪ್ರಕಟಿಸಿರುವ ಈ ಸರಕಾರ ಈ ಕ್ಷೇತ್ರದಲ್ಲಿ ವಿದೇಶಿ ಕಂಪನಿಗಳ ಪ್ರವೇಶಕ್ಕೆ ಹೀಗೆ ಕಾರ್ಪೊರೇಟೀಕರಣದ ಮೂಲಕ ಪ್ರಯತ್ನ ನಡೆಸುತ್ತಿದೆ ಎಂದು ಸಂದೇಹ ಪಡದಿರಲು ಕಾರಣವಿಲ್ಲ ಎಂದು ಸಿಐಟಿಯು ಹೇಳಿದೆ.

ರಕ್ಷಣಾ ಕಾರ್ಮಿಕರ ಸಂಘಗಳು ಮತ್ತು ಒಕ್ಕೂಟಗಳು ಇಂತಹ ವಿನಾಶಕಾರೀ ಪ್ರಯತ್ನಗಳನ್ನು ವಿರೋಧಿಸುತ್ತಲೇ ಬಂದಿವೆ. ಈ ಸರಕಾರದ ವಿರುದ್ಧವೂ ಕಳೆದ ವರ್ಷ ಅಕ್ಟೋಬರ್ 12ರಿಂದ ಅನಿರ್ದಿಷ್ಟ ಕಾಲದ ಮುಷ್ಕರದ ನಿರ್ಧಾರವನ್ನು ಪ್ರಕಟಿಸಿದಾಗ ಈ ಬಗ್ಗೆ ಆಶ್ವಾಸನೆ ನೀಡಿದ್ದ ಸರಕಾರ ಈಗ ಮಹಾಸೋಂಕಿನ ಎರಡನೇ ಅಲೆಯ ಬಿಕ್ಕಟ್ಟಿನ ಸಮಯದಲ್ಲಿ ಅದನ್ನು ಮುರಿಯಲು ಮುಂದಾಗಿದೆ ಎಂದು ಸಿಐಟಿಯು ಟೀಕಿಸಿದೆ.

ಬಿಜೆಪಿ ಸರಕಾರದ ಈ ವಿನಾಶಕಾರೀ ನಿರ್ಧಾರಕ್ಕೆ ತಕ್ಷಣವೇ ರಕ್ಷಣಾ ಕಾರ್ಮಿಕರ ಒಕ್ಕೂಟಗಳ ಐಕ್ಯ ವೇದಿಕೆ ಜೂನ್ 19 ರಂದು “ಪ್ರತಿಕೃತಿ ದಹನ” ಕಾರ್ಯಾಚರಣೆಯ ಮೂಲಕ ಪ್ರತಿಕ್ರಿಯಿಸಿರುವುದಕ್ಕೆ ಸಿಐಟಿಯು ಅವರನ್ನು ಅಭಿನಂದಿಸಿರುವ ಸಿಐಟಿಯು, ಇದು ರಾಷ್ಟ್ರೀಯ ಹಿತಗಳ ರಕ್ಷಣೆಗಾಗಿ ನಡೆಸುವ ಮುಂದಿನ ಐಕ್ಯ ಕಾರ್ಯಾಚರಣೆಗಳ ಮುನ್ನುಡಿ ಎಂಬ ಆಶಯವನ್ನು ವ್ಯಕ್ತಪಡಿಸಿದೆ. ಕಾರ್ಪೊರೇಟೀಕರಣದ ಮೂಲಕ ಖಾಸಗೀಕರಣದ ಈ ವಿನಾಶಕಾರೀ ಪ್ರಯತ್ನದ ವಿರುದ್ಧ ರಕ್ಷಣಾ ವಲಯದ ಕಾರ್ಮಿಕರ ಹೋರಾಟಗಳಿಗೆ ದೇಶದ ಸಮಸ್ತ ಕಾರ್ಮಿಕ ವರ್ಗ ಸೌಹಾರ್ದವನ್ನು ವ್ಯಕ್ತಪಡಿಸುತ್ತದೆ ಎಂದು ಸಿಐಟಿಯು ಹೇಳಿದೆ.

ಇತರ ಕೇಂದ್ರ ಕಾರ್ಮಿಕ ಸಂಘಟನೆಗಳೂ ರಕ್ಷಣಾ ವಲಯದ ಕಾರ್ಮಿಕರಿಗೆ ತಮ್ಮ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿವೆ.



ಜುಲೈ 19ರಿಂದ ಅನಿರ್ದಿಷ್ಟ ಕಾಲದ ಮುಷ್ಕರ
ರಕ್ಷಣಾ ವಲಯದ ಕಾರ್ಮಿಕರ ಒಕ್ಕೂಟಗಳ ನಿರ್ಧಾರ

ಅಖಿಲ ಭಾರತ ರಕ್ಷಣಾ ನೌಕರರ ಒಕ್ಕೂಟ (ಎಐಡಿಇಎಫ್), ರಾಷ್ಟ್ರೀಯ ರಕ್ಷಣಾ ಕಾರ್ಮಿಕರ ಒಕ್ಕೂಟ(ಎನ್‌ಡಿಡಬ್ಲ್ಯುಎಫ್) ಮತ್ತು ಭಾರತೀಯ ಪ್ರತಿರಕ್ಷಾ ಮಜ್ದೂರ್ ಸಂಘ(ಬಿಪಿಎಂಎಸ್) ಜೂನ್ 20ರಂದು ಸಭೆ ಸೇರಿ ಕೇಂದ್ರ ಸರಕಾರದ ಕಾರ್ಪೊರೇಟೀಕರಣ ನಿರ್ಧಾರದ ವಿರುದ್ಧ ಜುಲೈ 19ರಿದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ನಿರ್ಧರಿಸಿವೆ. ಜೂನ್ 23 ರಂದು ಸರಕಾರಕ್ಕೆ ತಮ್ಮ ನಿರ್ಧಾರವನ್ನು ತಿಳಿಸಿ ಜುಲೈ 1 ರಂದು ಮುಷ್ಕರದ ನೋಟೀಸು ನೀಡಲು ಅವು ನಿರ್ಧರಿಸಿವೆ.

ಒಂದು ಜಂಟಿ ಹೇಳಿಕೆಯನ್ನು ನೀಡಿ ದೇಶದ ಸಾಮರಿಕ ಮತ್ತು ರಕ್ಷಣಾ ಹಿತಗಳಿಗೆ ದೊಡ್ಡ ಪ್ರಮಾಣದಲ್ಲಿ ಮಾರಕವಾಗುವ ಈ ನಡೆಯ ವಿರುದ್ಧ ಪ್ರತಿಭಟಿಸಬೇಕು ಎಂದು ದೇಶದ ಜನತೆಗೆ ಮನವಿ ಮಾಡಿಕೊಂಡಿವೆ.

ಆಸಿಫ್ ಹತ್ಯೆ: ಆರೋಪಿಗಳನ್ನು ಮತ್ತು ದ್ವೇಷ ಭಾಷಣ ಮಾಡಿದವರನ್ನು ಬಂಧಿಸಿ
–ಹರ್ಯಾಣ ಮುಖ್ಯಮಂತ್ರಿಗೆ ಬೃಂದಾ ಕಾರಟ್ ಪತ್ರ

ಹರ್ಯಾಣದ ಖೇರ ಖಲೀಲ್‌ಪುರ ಗ್ರಾಮದಲ್ಲಿ ಮೇ 16ರಂದು 28 ವರ್ಷದ ಆಸಿಫ್ ಎಂಬವರನ್ನು ಕ್ರಿಮಿನಲ್ ಪಡೆಯೊಂದು ಅಮಾನುಷವಾಗಿ ಕೊಂದು ಹಾಕಿತು. ಈ ಬಗ್ಗೆ ಹೆಚ್ಚಿನ ವಿಷಯ ತಿಳಿಯಲು ಸಿಪಿಐ(ಎಂ) ಮತ್ತು ಸಿಪಿಐನ ನಿಯೋಗವೊಂದು ಈ ಗ್ರಾಮಕ್ಕೆ ಭೇಟಿ ನೀಡಿ ಆಸಿಫ್‌ನ ಕುಟುಂಬದವರನ್ನು ಮತ್ತು ನುಹ್ ಜಿಲ್ಲಾಧಿಕಾರಿಯನ್ನೂ ಭೇಟಿ ಮಾಡಿತು. ಈ ಭೇಟಿಯ ನಂತರ ನಿಯೋಗದ ಮುಖಂಡತ್ವ ವಹಿಸಿದ್ದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹರ್ಯಾಣದ ಮುಖ್ಯಮಂತ್ರಿ ಖಟ್ಟರ್ ಅವರಿಗೆ ಪತ್ರ ಬರೆದು ಆಸಿಫ್‌ನ ಹತ್ಯೆಯ ಆರೋಪಿಗಳನ್ನು ಮತ್ತು ಕೋಮುವಾದಿ ದ್ವೇಷ ಭಾಷಣಗಳನ್ನು ಮಾಡಿ ಪರಿಸ್ಥಿತಿಯನ್ನು ಕೋಮು ಗ್ರಸ್ತಗೊಳಿಸಿರುವವರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ. ಆಸಿಫ್‌ಗೆ ಕೇವಲ 28ವರ್ಷವಾಗಿದ್ದು ಪತ್ನಿ ಮತ್ತು ಮೂವರು ಚಿಕ್ಕ ಮಕ್ಕಳಿದ್ದಾರೆ, ಅವರಲ್ಲಿ ಕೊನೆಯದ್ದು ಕೇವಲ 5 ತಿಂಗಳ ಮಗು. ಈ ಕುಟುಂಬಕ್ಕೆ ಪರಿಹಾರ ಮತ್ತು ಹಣಕಾಸು ನೆರವನ್ನು ಒದಗಿಸಬೇಕು ಎಂದೂ ಬೃಂದಾ ಅವರು ಮುಖ್ಯಮಂತ್ರಿಗಳನ್ನು ಕೋರಿದ್ದಾರೆ.

ಆಸಿಫ್ ತನ್ನ ಊರಿನಲ್ಲಿನ ಎಲ್ಲ ಸಮುದಾಯಗಳ ಜನಗಳಿಗೂ ಸಹಾಯ ಮಾಡುತ್ತಿದ್ದ ವ್ಯಕ್ತಿ. ಆದ್ದರಿಂದ ಈ ಆರೋಪಿಗಳ ಕ್ರಿಮಿನಲ್ ಚಟುವಟಿಕೆಗಳನ್ನು ವಿರೋಧಿಸುತ್ತಿದ್ದ. ಇವರಲ್ಲಿ ಕೆಲವರ ಮೇಲೆ ಸ್ಥಳೀಯ ಪೋಲೀಸ್ ಠಾಣೆಯಲ್ಲಿ ಹಲವು ಕೇಸುಗಳು ಈ ಮೊದಲೇ ಇದ್ದವು ಎಂದು ತಿಳಿದು ಬಂದಿದೆ. ಅವರು ಆಸಿಫ್ ಮೇಲೆ ಗುರಿಯಿಟ್ಟಿದ್ದರು. ಆತ, ತನ್ನ ಸೋದರ ಸಂಬಂಧಿ ರಶೀದ್ ಜತೆ ಬರುವಾಗ ಈ ಹಂತಕರು, ಹೊರಗಡೆಯಿಂದ ಕರೆಸಿದ ಗೂಂಡಾಗಳ ಜತೆಗೂಡಿ ಆಸಿಫ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು ಎಂದು ತಿಳಿದು ಬಂದಿದೆ. ರಶೀದ್ ಮೇಲೂ ಹಲ್ಲೆ ನಡೆಸಿದರು. ರಶೀದ್ ಕೂಡ ಸತ್ತನೆಂದು ಭಾವಿಸಿ ಅವರು ಹೊರಟು ಹೋದರು. ರಶೀದ್ ಈಗ ಈ ಹಲ್ಲೆಯ ಮುಖ್ಯ ಸಾಕ್ಷಿಯಾಗಿದ್ದು ಹಲ್ಲೆಕೋರರಲ್ಲಿ ಹಲವರನ್ನು ಗುರುತಿಸಿದ್ದಾನೆ.

ಮೊದಲಿಗೆ ಪೋಲೀಸರು ಕಾರ್ಯಾಚರಣೆ ನಡೆಸಿ 12 ಮಂದಿಯನ್ನು ಬಂಧಿಸಿದರು. ಇದು ಕುಟುಂಬದವರಲ್ಲಿ ವಿಶ್ವಾಸ ಮೂಡಿಸಿತು. ಆದರೆ ಮೇ 30ರಂದು ಪರಿಸ್ಥಿತಿ ಬದಲಾಯಿತು. ಒಂದು ತಿಂಗಳಿಂದ ಕೊವಿಡ್ ನಂದಾಗಿ ಹಾಕಿದ್ದ ಸೆಕ್ಷನ್ 144ನ್ನು ಉಲ್ಲಂಘಿಸಿ ಇಂದ್ರಿ ಎಂಬ ಸಮೀಪದ ಹಳ್ಳಿಯಲ್ಲಿ ಒಂದು ‘ಹಿಂದು ಮಹಾಪಂಚಾಯತ್’ ಎಂಬುದು ನಡೆಯಿತು. ಇದನ್ನು ಕರ್ಣಿ ಸೇನಾ ಅದರ ಅಧ್ಯಕ್ಷ ಸೂರಜ್ ಪಾಲ್ ಅಮ್ಮು ನೇತೃತ್ವದಲ್ಲಿ ಸಂಘಟಿಸಿತು ಎಂದು ತಿಳಿದು ಬಂದಿದೆ. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪಸರಿಸಿದ ಪೋಸ್ಟರಿನಲ್ಲಿ “ಮೊದಲು ಧರ್ಮವನ್ನು ಉಳಿಸಬೇಕು-ನಂತರ ಜಾತಿಗಳನ್ನು ತಂತಾನೇ ಉಳಿಸಬಹುದು” ಎಂಬ ಸಂದೇಶವಿತ್ತು. ಅಂದರೆ ಕೆಲವರ ಕ್ರಿಮಿನಲ್ ಚಟುವಟಿಕೆಗಳಿಗೆ ಕೋಮು ಬಣ್ಣವನ್ನು ಹಚ್ಚಿ ಅವರನ್ನು ರಕ್ಷಿಸುವ ಪ್ರಯತ್ನ ಇದಾಗಿತ್ತು. ಸಾವಿರಾರು ಮಂದಿ ಭಾಗವಹಿಸಿದ್ದ ಈ ಸಮಾರಂಭದಲ್ಲಿ ಭಾಷಣಕಾರರು ಒಬ್ಬರಾದ ಮೇಲೆ ಒಬ್ಬರಂತೆ ಅಲ್ಪಸಂಖ್ಯಾತ ಸಮುದಾಯದ ಮೇಲೆ ದ್ವೇಷ ಕಾರುವ ಉದ್ರೇಕಕಾರಿ ಭಾಷಣಗಳನ್ನು ಮಾಡಿ ಕ್ರಿಮಿನಲ್‌ಗಳು ಮಾಡಿದ ಕೊಲೆ ಕೃತ್ಯಗಳನ್ನು ಸಮರ್ಥಿಸಿಕೊಂಡರು, ಮತ್ತು ಬಂಧಿತ ಆರೋಪಿಗಳನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿದರು.

ಕಳೆದ ವರ್ಷ ಜುನೈದನ್ನು ಬಡಿದು ಸಾಯಿಸಿದ ಪ್ರಕರಣದ ಪ್ರಮುಖ ಆರೋಪಿ, ಜಾಮೀನಿನ ಮೇಲೆ ಹೊರಬಂದಿದ್ದ ನರೇಶ್ ಕುಮಾರ್ ಎಂಬಾತ ಮತ್ತು ಆಳುವ ಪಕ್ಷದ ಸ್ಥಳೀಯ ಮುಖಂಡರೂ ಈ ‘ಮಹಾಪಂಚಾಯತ್’ನಲ್ಲಿ ಭಾಗವಹಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ನಾಲ್ವರು ಬಂಧಿತರ ಬಿಡುಗಡೆಯಾಗಿದೆ. ಇದು ಈ ‘ಮಹಾಪಂಚಾಯತು’ ಹೇರಿದ ಒತ್ತಡದ ಪರಿಣಾಮ ಎಂಬುದು ಸ್ಪಷ್ಟ ಎಂದು ಈ ಘಟನೆಗಳನ್ನು ಪ್ರಸ್ತಾಪಿಸುತ್ತ ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹರ್ಯಾಣದ ಮುಖ್ಯಮಂತ್ರಿಗಳಿಗೆ ತಿಳಿಸಿದ್ದಾರೆ.

ಇಲ್ಲಿರುವ ಪ್ರಶ್ನೆ ಸೆಕ್ಷನ್ 144 ಇರುವಾಗ ಈ ‘ಮಹಾಪಂಚಾಯತ್’ಗೆ ಅವಕಾಶ ಹೇಗೆ ನೀಡಲಾಯಿತು ಎಂಬುದು. ಎರಡನೆಯದಾಗಿ, ದ್ವೇಷ ಭಾಷಣಗಳನ್ನು ಮಾಡಿದವರಲ್ಲಿ ಯಾರನ್ನೂ ಬಂಧಿಸಿಲ್ಲ. ಮೂರನೆಯದಾಗಿ, ಪೋಲಿಸ್ ಕೂಡಲೇ ನರೇಶ್ ಕುಮಾರನ ಜಾಮೀನು ರದ್ದು ಮಾಡಿ, ಅವನ ಮೇಲೆ ಹೊಸ ಕೇಸ್ ಹಾಕಿ ಬಂಧಿಸಲಿಲ್ಲವೇಕೆ? ನಾಲ್ಕನೆಯದಾಗಿ, ಪ್ರತ್ಯಕ್ಷ ಸಾಕ್ಷಿ ನೇರವಾಗಿ ಗುರುತಿಸಿದ್ದರೂ ನಾಲ್ವರು ಆರೋಪಿಗಳನ್ನು ಬಿಡುಗಡೆ ಮಾಡಿದ್ದೇಕೆ? ಐದನೆಯದಾಗಿ, ಈ ಹತ್ಯೆಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಮಂದಿ ಇದ್ದಿದ್ದರೂ ಅವರನ್ನು ಬಂಧಿಸಿಲ್ಲವೇಕೆ ಎಂದು ಬೃಂದಾ ಅವರು ತಮ್ಮ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

ಈ ಎಲ್ಲ ಪ್ರಶ್ನೆಗಳ ಮೇಲೆ ಅಗತ್ಯ ಮತ್ತು ಸೂಕ್ತ ಕ್ರಮಗಳನ್ನು ಮುಖ್ಯಮಂತ್ರಿಗಳು ಕೈಗೊಳ್ಳುತ್ತಾರೆ ಎಂಬ ಆಶಯವನ್ನು ವ್ಯಕ್ತಪಡಿಸಿರುವ ಬೃಂದಾ ಕಾರಟ್, ಆಸಿಫ್‌ನ ಕುಟುಂಬಕ್ಕೆ ಪರಿಹಾರ ಮತ್ತು ಹಣಕಾಸು ನೆರವನ್ನು ಒದಗಿಸಬೇಕು ಎಂದೂ ಮುಖ್ಯಮಂತ್ರಿಗಳನ್ನು ಕೋರಿದ್ದಾರೆ.

ಸಂಪಾದಕೀಯ

ಹೆಚ್ಚುತ್ತಿರುವ ಯುವ ಪ್ರೇಮಿಗಳ ಹತ್ಯೆಗಳು

ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಬರಗೂರು ಗ್ರಾಮದಲ್ಲಿ ಅಂತರ್ಜಾತಿ ಯುವತಿಯನ್ನು ಪ್ರೀತಿಸುತ್ತಿದ್ದ ದಲಿತ ಯುವಕನನ್ನು ಹತ್ಯೆ ಮಾಡಲಾಗಿದೆ. ದಾನಪ್ಪ ಮಾದರ್ ಹತ್ಯೆಗೀಡಾದ ಯುವಕ. ಆತನಿಗೆ ಕೇವಲ 22 ವಯಸ್ಸು. ಗ್ರಾಮದ ಬಳಿಯ ಮುಸ್ಟೂರು ರಸ್ತೆಯಲ್ಲಿ ಮೃತ ಯುವಕ ಶವವಾಗಿ ಪತ್ತೆಯಾಗಿದ್ದ.

ದಾನಪ್ಪ ಕುರುಬ ಸಮುದಾಯದ ಹುಡುಗಿಯನ್ನು ಪ್ರೀತಿಸುತ್ತಿದ್ದ. ಹಿಂದೆ ಈ ಸಂಬಂಧ ಜಗಳವಾಗಿ ದಲಿತ ಸಮುದಾಯದವರನ್ನು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಲಾಗಿತ್ತು. ಕೊಲೆ ಬೆದರಿಕೆ ಹಾಕಲಾಗಿತ್ತು. ಒಂದು ವಾರದ ಬಳಿಕ ಯುವಕನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಮೃತ ಯುವಕನ ತಂದೆ ಕರಿಹನುಮಂತಪ್ಪ ಮಾದರ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದನು. ಘಟನೆಗೆ ಸಂಬಂಧಪಟ್ಟಂತೆ ಕೆಲವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ತಿಳಿದುಬಂದಿದೆ.

ಇಂತಹ ಆಘಾತಕಾರಿ ಪ್ರಕರಣಗಳು ಇಂದು ಗ್ರಾಮೀಣ ಪ್ರದೇಶಗಳಲ್ಲಿಯೂ ಹೆಚ್ಚುತ್ತಿದೆ. ಇಂತಹ ಪ್ರಕರಣಗಳಲ್ಲಿ ದಲಿತ ಯುವಕರು ಬಳಕೆಯಾಗುತ್ತಿರುವುದೇ ಹೆಚ್ಚು. ಅವರಲ್ಲಿ ಮರ್ಯಾದಾ ಹತ್ಯೆಗಳ ಹೆಸರಿನಲ್ಲಿ ತಮ್ಮ ಕರುಳಿನ ಕುಡಿಗಳನ್ನೇ ಕಡಿದು ಹಾಕುವ ಭೀಕರ ಪ್ರಕರಣಗಳು ನಡೆಯುತ್ತಲೇ ಇವೆ. ಇತ್ತೀಚೆಗೆ ದಲಿತ ಯುವಕನೊಬ್ಬ ಮುಸ್ಲಿಂ ಹುಡುಗಿಯೊಬ್ಬಳನ್ನು ಮದುವೆಯಾದ ತಪ್ಪಿಗೆ ಅವರಿಬ್ಬರನ್ನು ಕೊಚ್ಚಿ ಕೊಲೆ ಮಾಡಿದ ಘಟನೆ ವರದಿಯಾಗಿದೆ. ಹೀಗೆ ಯುವ ಪ್ರೇಮಿಗಳು ತಮ್ಮ ಸ್ವಂತ ತಂದೆ ತಾಯಿಯವರ ಕೈಯಲ್ಲಿ ಹತ್ಯೆಯಾಗುತ್ತಿದ್ದಾರೆ. ಇಲ್ಲಿ ಗೋಹತ್ಯೆಯನ್ನು ತಡೆಯಲು ಕಾನೂನುಗಳಿವೆ. ಆದರೆ ಮನುಷ್ಯ ಹತ್ಯೆಯನ್ನು ತಡೆಯಲು ಕಾನೂನುಗಳಿಲ್ಲ.

ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿದ್ದಳು ಎಂಬ ಕಾರಣಕ್ಕಾಗಿ ಮೈಸೂರಿನ ಪಿರಿಯಾಪಟ್ಟಣದಲ್ಲಿ ತಂದೆಯೇ ಮಗಳನ್ನು ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದ್ದನು. ಕೆಳ ಜಾತಿ ಯುವಕನನ್ನು ಪ್ರೀತಿಸಿದ ಕಾರಣಕ್ಕೆ ಹಲವು ಹೆಣ್ಣು ಮಕ್ಕಳ ಪ್ರಾಣ ತೆತ್ತಿದ್ದಾರೆ. 2012 ರಲ್ಲಿ ನಡೆದ ಉಪನ್ಯಾಸಕಿ ಶ್ರುತಿ ಕೊಲೆ ಪ್ರಕರಣ, 2017 ರಲ್ಲಿ ಎಚ್.ಡಿ. ಕೋಟೆಯ ಮುಳ್ಳೂರಿನಲ್ಲಿ ನಡೆದ ಶೋಭಾ ಕೊಲೆ, 2018 ರಲ್ಲಿ ಎಚ್.ಡಿ. ಕೋಟೆಯಲ್ಲಿ ನಡೆದ ಸುಶ್ಮಿತಾ ಪ್ರಕರಣ, ಪಿರಿಯಾಪಟ್ಟಣದಲ್ಲಿ ನಡೆದ ಗಾಯತ್ರಿ ಕೊಲೆ ಪ್ರಕರಣ ಇವು ಇತ್ತೀಚಿನ ಕೆಲವು ಪ್ರಕರಣಗಳು.

ಇಂತಹ ಘಟನೆಗಳನ್ನು ನೋಡಿ ನಮ್ಮ ಸಮಾಜ ಮರಗುವುದಿಲ್ಲ. ಮಠಾಧೀಶರು ತಮ್ಮ ಪ್ರವಚನಗಳಲ್ಲಿ ಪ್ರಸ್ತಾಪಿಸುವುದಿಲ್ಲ. ವಿವಾಹವಾಗುವುದು, ತಮ್ಮ ಬಾಳಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಯಾರು ವಿವಾಹವಾಗಲು ಹೊರಟಿದ್ದಾರೋ ಅವರಿಗೆ ಸೇರಿದ ಆಯ್ಕೆ. ತಾಯಿ ತಂದೆಯರಿಗೆ ಈ ವಿಷಯದಲ್ಲಿ ಯಾವುದೇ ಪಾತ್ರವಿಲ್ಲ. ತಮ್ಮ ಮಕ್ಕಳು ಮಾಡಿಕೊಳ್ಳುವ ಆಯ್ಕೆ ಯೋಗ್ಯವಾಗಿರುವಂತೆ ಕಾಳಜಿ ವಹಿಸುವುದು ಪಾಲಕರ ಜವಾಬ್ದಾರಿ. ಆದರೆ ಆಕೆಯ ಸ್ವಾತ್ರಂತ್ಯ ಸಂಪೂರ್ಣವಾಗಿ ವಧು ಮತ್ತು ವರರಿಗೆ ಸೇರದ್ದದ್ದು. ಇಲ್ಲಿ ಜಾತಿ, ಮತ ಭಾಷೆ, ಬಣ್ಣ ಯಾವುದೂ ಅಡ್ಡಿಯಾಗಬಾರದು. ಇಂತಹ ಎಲ್ಲ ಪ್ರಕರಣಗಳಲ್ಲಿ ಕೊಲೆಗೆಡುಕರನ್ನು ಮತ್ತು ಅವರಿಗೆ ನೆರವಾದವರನ್ನು ತಪ್ಪದೆ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡುವಂತೆ ಎಫ್.ಐ.ಆರ್. ರಚಿಸಬೇಕು. ಯಾವ ಕಾರಣಕ್ಕೂ ರಾಜಿ ಮಾಡಿಕೊಳ್ಳಬಾರದು.

ಪದವಿ ವ್ಯಾಸಂಗ ಪೂರೈಸಲು ಶಿಕ್ಷಣದ ಅವಧಿಯನ್ನು ನಾಲ್ಕು ವರ್ಷಗಳಿಗೆ ವಿಸ್ತರಣೆ ಮಾಡಿರುವುದನ್ನು ಮತ್ತು ಕನ್ನಡ ಸಾಹಿತ್ಯ ಹಾಗೂ ಸಂಸ್ಕ್ರತಿಯ ಕಲಿಕೆಯನ್ನು ಮೊಟಕುಮಾಡಿರುವುದನ್ನು ವಾಪಾಸು ಪಡೆದು ಈ ಹಿಂದಿನ ರೀತಿಯಲ್ಲಿ ಮುಂದುವರೆಸಲು ಒತ್ತಾಯ

ಕರ್ನಾಟಕ ರಾಜ್ಯ ಸರಕಾರ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸುತ್ತಿರುವ ಭಾಗವಾಗಿ, ಪದವಿ ವ್ಯಾಸಂಗವನ್ನು ಮೂರು ವರ್ಷಗಳಿಂದ ನಾಲ್ಕು ವರ್ಷಗಳಿಗೆ ವಿಸ್ತರಿಸಲಾಗಿದೆ ಮತ್ತು ಮೂರು ವರ್ಷಗಳ ಪದವಿ ವ್ಯಾಸಂಗದ ಸಂದರ್ಭದಲ್ಲಿದ್ದ ನಾಲ್ಕು ಸೆಮಿಸ್ಟರ್ ಗಳ ಕನ್ನಡ ಭಾಷಾ ವ್ಯಾಸಂಗವನ್ನು ಎರಡು ಸೆಮಿಸ್ಟರ್ ಗಳಿಗೆ ಮೊಟಕುಗೊಳಿಸಲಾಗಿದೆ. ರಾಜ್ಯ ಸರಕಾರದ ಈ ಎರಡು ಕ್ರಮಗಳು ವಿದ್ಯಾರ್ಥಿ ಹಾಗೂ ಕನ್ನಡ ವಿರೋಧಿ ಮತ್ತು ರಾಜ್ಯದ ಅಭಿವೃದ್ಧಿ ವಿರೋಧಿ ಕ್ರಮಗಳಾಗಿವೆಯೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ತಕ್ಷಣವೇ ಆ ಎರಡು ಜನ ವಿರೋಧಿ ಕ್ರಮಗಳನ್ನು ವಾಪಾಸು ಪಡೆಯುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಪದವಿ ವ್ಯಾಸಂಗವನ್ನು ನಾಲ್ಕು ವರ್ಷಗಳಿಗೆ ವಿಸ್ತರಿಸಿರುವುದು ಕೇವಲ ಮೂರು ವರ್ಷಗಳಲ್ಲೆ ಪದವಿ ವ್ಯಾಸಂಗ ಮುಗಿಸಿ, ನಿರುದ್ಯೋಗ ಸೈನ್ಯ ಸೇರುವವರನ್ನು ಕನಿಷ್ಠ ಒಂದು ವರ್ಷ ನಿಯಂತ್ರಿಸುವ ದುಷ್ಟ ಯೋಚನೆಯಾಗಿದೆ ಮತ್ತು ವಿದ್ಯಾರ್ಥಿ ಹಾಗೂ ಆತನ ಪೋಷಕರು ಮತ್ತೊಂದು ವರ್ಷದ ವ್ಯಾಸಂಗಕ್ಕೆ ದುಬಾರಿ ಶುಲ್ಕ ಮತ್ತಿತರೇ ವೆಚ್ಚ ಭರಿಸುವ ಹೊರೆಯನ್ನು ಹೇರುವ ಮತ್ತು ಆ ಮೂಲಕ ಖಾಸಗೀ ಶಿಕ್ಷಣ ಸಂಸ್ಥೆಗಳ ಲೂಟಿಯ ಹರಿವನ್ನು ವಿಸ್ಥರಿಸುವ ಸಂಚಾಗಿದೆ.

ಅದೇ ರೀತಿ, ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಕಲಿಯುವ ಅವಕಾಶವನ್ನು ನಾಲ್ಕು ಸೆಮಿಸ್ಟರ್ ಗಳ ಅವಧಿಗಳಿಂದ ಎರಡು ಸೆಮಿಸ್ಟರ್ ಗಳ ಅವಧಿಗೆ ಮೊಟಕು ಮಾಡಿರುವುದು ಕನ್ನಡ ಸಾಹಿತ್ಯ ಹಾಗೂ ಸಂಸ್ಕ್ಋತಿಯ ಕಲಿಕೆಯನ್ನು ಮೊಟಕು ಮಾಡುವ ಮತ್ತು ಆ ಮೂಲಕ ಕನ್ನಡ ಸಾಹಿತ್ಯ ಹಾಗೂ ಸಂಸ್ಕ್ಋತಿಯ ಅರಿವನ್ನು ಮೊಟಕು ಮಾಡಿದಂತಾಗಿದೆ. ಆ ಮೂಲಕ ಅದು ಕನ್ನಡ ವಿರೋಧಿಯಾಗಿದೆ ಎಂದಿದೆ.

ಆತಂಕದಿಂದ ಕೋವಿಡ್ ಲಸಿಕೆಯನ್ನು ಪಡೆಯಲು ವಿರೋಧಿಸುತ್ತಿರುವವರ ಮನ ಒಲಿಸಲು ಕ್ರಮವಹಿಸಬೇಕೇ ಹೊರತು ದಂಡನೆಯ ಕ್ರಮ ಸಲ್ಲದು

ಲಸಿಕೆಯ ಕುರಿತು ಪ್ರಚಲಿತವಿರುವ ಆತಂಕಗಳಿಂದಾಗಿ ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳಲು ಗ್ರಾಮೀಣ ಪ್ರದೇಶದಲ್ಲಿ ವಿರೋಧ ವ್ಯಾಪಕವಾಗಿದ್ದು, ಸದರಿ ಆತಂಕ ನಿವಾರಿಸಲು ಮತ್ತು ಅಂತಹ ಆತಂಕಿತರ ಮನವೊಲಿಸಲು ಅಗತ್ಯ ಕ್ರಮಗಳನ್ನು ರಾಜ್ಯ ಸರಕಾರ ತಕ್ಷಣವೇ ಕೈಗೊಳ್ಳಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಮನವಿ ಮಾಡಿದೆ.

ಆದರೇ ಕೆಳಗಡೆ ಅಂತಹ ಪ್ರಯತ್ನಗಳನ್ನು ಮತ್ತಷ್ಟು ವಿಸ್ತರಿಸಿ ಮನ ಒಲಿಸುವ ಬದಲು ಆತಂಕಿತರನ್ನು ದಂಡಿಸುವ ಕ್ರಮಗಳನ್ನು ಜಾರಿಗೊಳಿಸುತ್ತಿರುವುದು ತೀವ್ರ ಖಂಡನೀಯವಾಗಿದೆ.

ರಾಯಚೂರು ಜಿಲ್ಲೆಯಲ್ಲಿ ಇಂತಹ ಜನ ವಿರೋಧಿ ಹಾಗೂ ಆತಂಕ ನಿವಾರಿಸಲು ಕ್ರಮವಹಿಸದೇ ಬಲವಂತ ಮಾಡುವ ಮತ್ತು ಅದಕ್ಕಾಗಿ ದಂಡಿಸುವ ಕ್ರಮಗಳು ನಡೆದಿರುವುದು ಆತಂಕಕಾರಿ ಬೆಳವಣಿಗೆಗಳಾಗಿವೆ.

ರಾಯಚೂರು ತಾಲೂಕಿನ ದುಗನೂರು ಗ್ರಾಮದಲ್ಲಿ 17.06.2021 ರಂದು ಆರೋಗ್ಯ ಕಾರ್ಯಪಡೆ ನೇತೃತ್ವದಲ್ಲಿ ಆರೋಗ್ಯ ಗಣತಿ ಹಾಗೂ ಲಸಿಕೆ ಅಭಿಯಾನ ಕಾರ್ಯಕ್ರಮದಲ್ಲಿ ತೊಡಗಿದ್ದಾಗ ಅಲ್ಲಿನ ದಲಿತ ಕುಟುಂಬದವರೊಬ್ಬರು ತಮಗಿರುವ ಆತಂಕದಿಂದಾಗಿ ಲಸಿಕೆಯನ್ನು ತಿರಸ್ಕರಿಸಿದ್ದು ವಿವಾದವಾಗಿದೆ. ಆರೋಗ್ಯ ಕಾರ್ಯಕರ್ತರನ್ನು ನಿಂದಿಸಿರುವುದು ನಡೆದಿದೆಯೆನ್ನಲಾಗಿದೆ. ಈ ರೀತಿಯಲ್ಲಿ ಆರೋಗ್ಯ ಕಾರ್ಯಕರ್ತರನ್ನು ನಿಂದಿಸಿ ಕರ್ತವ್ಯಕ್ಕೆ ತೊಂದರೆ ಕೊಡುವುದು ಖಂಡನೀಯವೇ ಆಗಿದೆ.

ಆದರೇ, ಜಿಲ್ಲಾಡಳಿತ ಸದರಿ ನಿಂದನೆ ಮಾಡಿದ ಕುಟುಂಬದ ಮೇಲೆ ಕ್ರಮವಹಿಸಿ, ಆ ಕುಟುಂಬದ ಪಡಿತರ ಚೀಟಿಯನ್ನು ಮತ್ತು ವಿದ್ಯುತ್ ಸಂಪರ್ಕ ಕಡಿತ ಮಾಡಿರುವುದು ಇದು ಅದಕ್ಕಿಂತಲೂ ಅಮಾನವೀಯವಾಗಿದೆ. ಇಂತಹ ಜನ ವಿರೋಧಿ ಕ್ರಮಗಳನ್ನು ತಕ್ಷಣವೇ ವಾಪಾಸು ಪಡೆಯುವಂತೆ ರಾಜ್ಯ ಸರಕಾರ ರಾಯಚೂರು ಜಿಲ್ಲಾ ಆಡಳಿತಕ್ಕೆ ಆದೇಶ ನೀಡಬೇಕು.

ಜನತೆಗೆ ಲಸಿಕೆಯ ಬಗೆಗಿರುವ ಮತ್ತು ಆರೋಗ್ಯ ನಿರ್ವಹಣೆಯಲ್ಲಿರುವ ಆತಂಕಗಳನ್ನು ನಿವಾರಿಸಲು ಮತ್ತು ಅಂತಹ ಆತಂಕಿತರ ವಿಶ್ವಾಸಕ್ಕಾಗಿ ಮನ ಒಲಿಸುವ ಕ್ರಮಗಳಿಗೆ ಜಿಲ್ಲಾ ಆಡಳಿತಗಳು ಕ್ರಮವಹಿಸಬೇಕೇ ಹೊರತು, ಈ ರೀತಿ ಮಾನ ಹಕ್ಕುಗಳ ಉಲ್ಲಂಘನೆಗೆ ಕ್ರಮವಹಿಸಬಾರದು. ಆ ರೀತಿಯ ಕ್ರಮಗಳು ಜನಗಳು ಕೋವಿಡ್ ಎದುರಿಸಲು ಸಹಕಾರಿಯಾಗಲಾರವು. ಬಲವಂತವು, ಅವರನ್ನು ಮತ್ತಷ್ಟು ಆತಂಕಕ್ಕೀಡು ಮಾಡಿ ಅಪಾಯ ಉಂಟು ಮಾಡುವ ಸಂಭವಗಳಿವೆ. ಯಾರಾದರೂ ಕರ್ತವ್ಯ ನಿರ್ವಹಣೆಗೆ ಗಂಭೀರವಾಗಿ ಅಡ್ಡಿ ಪಡಿಸಿದಲ್ಲಿ ಅಂತಹವರ ಮೇಲೆ ಬೇರೇ ರೀತಿಯ ಕ್ರಮಗಳನ್ನು ವಹಿಸಬಹುದಾಗಿದೆಯೇ ಹೊರತು, ಈ ನಡೆ ಸರಿಯಾದ ಕ್ರಮವಾಗಿಲ್ಲ. ಇಂತಹ ಕ್ರಮಗಳಿಂದ ಆತಂಕಿತ ಕುಟುಂಬಗಳು ಕೋವಿಡ್ ಹಾಗೂ ಲಾಕ್ ಡೌನ್ ಸಂದರ್ಭಗಳಲ್ಲಿ ಮತ್ತಷ್ಟು ತೊಂದರೆಗೀಡಾಗಲಿವೆಯೆಂಬುದನ್ನು ಗಮನಿಸಬೇಕು.

ಇಂತಹದ್ದೆ ಹಲವು ಕ್ರಮಗಳನ್ನು ಹಲವೆಡೆ ಕೈಗೊಂಡಿರುವ ವರದಿಗಳಿವೆ.

ಆದ್ದರಿಂದ ಕೂಡಲೇ, ರಾಜ್ಯ ಸರಕಾರ ಮಧ್ಯ ಪ್ರವೇಶಿಸಿ ಜನತೆಯ ಮನ ಒಲಿಸುವ ಕಾರ್ಯಕ್ಕೆ ಆದ್ಯತೆ ನೀಡುವಂತೆ ಕ್ರಮವಹಿಸಲು ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ/ ತಾಲೂಕಾ ಆಡಳಿತಗಳಿಗೆ ಸೂಚಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಒತ್ತಾಯಿಸಿದೆ.

ಆದ್ದರಿಂದ, ಈ ಎರಡು ಜನವಿರೋಧಿ ಕ್ರಮಗಳನ್ನು ರಾಜ್ಯ ಸರಕಾರ ಕೂಡಲೇ ವಾಪಾಸು ಪಡೆದು ಈ ಮುನ್ನಿನಂತೆಯೇ ಮುನ್ನಡೆಸಲು ವಿನಂತಿಸಿದೆ.



ಮೂರು ತಿಂಗಳ ಅವಧಿಯ ವಿದ್ಯುತ್ ಬಿಲ್ಲು, ನೀರಿನ ಬಿಲ್ಲು ಮನ್ನಾ ಮಾಡಬೇಕು – ಡಿವೈಎಫ್ಐ ಪ್ರತಿಭಟನೆ

ಕೊರೋನಾ ಕಾಲದ ಈ ಎರಡನೇ ಅಲೆಯಲ್ಲಿ ಸರಕಾರ ಘೋಷಿಸಿದ ಲಾಕ್ಡೌನ್ ನ ಈ ಸಂಕಷ್ಟದ ಕಾಲದಲ್ಲಿ ಜನರಿಗೆ ಉದ್ಯೋಗ ಇಲ್ಲದೆ ಅನ್ನ, ನೀರಿಗೂ ಕೂಡಾ ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ. ಸರಕಾರದ ಈ ಲಾಕ್ ಡೌನ್ ಅವಧಿಯಲ್ಲಿ ಜನ ಸಾಮಾನ್ಯರಿಗೆ ಅನ್ನ ಕೊಡಲಿಲ್ಲ, ಅಕ್ಕಿ ಕೊಡಲಿಲ್ಲ, ಬೇಳೆ ಕೊಡಲಿಲ್ಲ, ನಮ್ಮ ಮಕ್ಕಳ ಶಾಲಾ ಫೀಸು ಕೊಡಲಿಲ್ಲ, ಬ್ಯಾಂಕಿಗೆ ಕಟ್ಟಬೇಕಾದ ಸಾಲದ ಕಂತನ್ನು ಬಿಡದೆ ವಸೂಲಿ ಮಾಡಿದಿರಿ, ಈಗ ಕನಿಷ್ಠ ಈ ಮೂರು ತಿಂಗಳ ಅವಧಿಯ ವಿದ್ಯುತ್ ಬಿಲ್, ನೀರಿನ ಬಿಲ್ಲನ್ನಾದರೂ ಮನ್ನ ಮಾಡಬೇಕೆಂದು ಡಿವೈಎಫ್ಐ ರಾಜ್ಯಾದ್ಯಕ್ಷರಾದ ಮುನೀರ್ ಕಾಟಿಪಳ್ಳ ನಿನ್ನೆ ಡಿವೈಎಫ್ಐ ರಾಜ್ಯಾದ್ಯಂತ ವಿದ್ಯುತ್ ದರ ಏರಿಕೆಯನ್ನು ವಿರೋಧಿಸಿ ಹಾಗೂ ಮೂರು ತಿಂಗಳ ಅವಧಿಯ ವಿದ್ಯುತ್ ಬಿಲ್ ಮನ್ನಾ ಮಾಡಬೇಕೆಂದು ಒತ್ತಾಯಿಸಿ ಕರೆ ನೀಡಿದ ಪ್ರತಿಭಟನೆಯ ಭಾಗವಾಗಿ ಜೂನ್ 22, 2021 ಕುಳಾಯಿಯಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮುನೀರ್ ಕಾಟಿಪಳ್ಳ ಮಾತನಾಡಿದರು.

ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿಯು ಕರ್ನಾಟಕ ರಾಜ್ಯ ಸರಕಾರ ಕೋವಿಡ್ ಕಾಲದಲ್ಲಿ ವಿದ್ಯುತ್ ದರ ಏರಿಕೆ ಮಾಡಿದ ಕ್ರಮವನ್ನು ವಿರೋಧಿಸಿ ಹಾಗೂ ಈ ಲಾಕ್ಡೌನ್ ಅವಧಿಯ ಮೂರು ತಿಂಗಳ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿ "ಕತ್ತಲೆಯತ್ತ ಕರ್ನಾಟಕ" ಘೋಷಣೆಯಡಿಯಲ್ಲಿ ದೊಂದಿ, ಲ್ಯಾಟೀನ್, ಚಿಮಣಿ, ದೀವಟಿಗೆ ಮುಂತಾದ ಹಳೆ ಪರಿಕರಗಳನ್ನು ಹಿಡಿದು ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ, ಗ್ರಾಮ, ಹಳ್ಳಿಗಳಲ್ಲಿ ಪ್ರತಿಭಟನೆಯನ್ನು ನಡೆಸಲು ಕರೆ ನೀಡಿದ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಳ್ಳಾಲ, ಬಂಟ್ವಾಳ, ಪುತ್ತೂರು, ಮೂಡಬಿದಿರೆ, ಬೆಳ್ತಂಗಡಿಯ ಸುಮಾರು 50 ಕಡೆಗಳಲ್ಲಿ ಒಟ್ಟು ರಾಜ್ಯದ ಇತರೆ ಮುನ್ನೂರಕ್ಕೂ ಅಧಿಕ ಪ್ರದೇಶಗಳಲ್ಲಿ ದೊಂದಿ, ಚಿಮಣಿ, ಗ್ಯಾಸ್ ಲೈಟುಗಳನ್ನು ಹಿಡಿದು ಡಿವೈಎಫ್ಐ ಕಾರ್ಯಕರ್ತರು ಪ್ರತಿಭಟಿಸಿದ್ದಾರೆ.



ಪೆಟ್ರೋಲ್, ಡೀಸೆಲ್, ಗ್ಯಾಸ್, ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಸಿಪಿಐಎಂ ಪ್ರತಿಭಟನೆ

ಕಳೆದ ಒಂದೂವರೆ ವರ್ಷದಿಂದ ದೇಶದ ಜನತೆ ತೀವ್ರ ರೀತಿಯ ಕೋವಿಡ್ ಸಂಕಷ್ಟ ಎದುರಿಸುತ್ತಿರುವಾಗಲೇ ಅವರ ಸಂಕಟ ನಿವಾರಣೆಗೆ ಕ್ರಮ ವಹಿಸುವ ಬದಲು ಅವರ ಮೇಲೆ ಭಾರೀ ಬೆಲೆ ಏರಿಕೆಯ ಹೊರೆ ಹೇರುವ ಕ್ರೌರ್ಯವನ್ನು ಕೇಂದ್ರ ಸರ್ಕಾರ ಮೆರೆಯುತ್ತಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಪೆಟ್ರೋಲ್ ಬೆಲೆಯು 25 ರೂ. ಗಳಷ್ಟು ಹೆಚ್ಚಳಗೊಂಡಿದೆ. ಕಳೆದ ಒಂದು ತಿಂಗಳಲ್ಲಿ 16 ಬಾರಿ ಬೆಲೆ ಏರಿಸಲಾಗಿದೆ. ಈಗದು 100 ರೂ.ಗಳನ್ನು ದಾಟಿದೆ. ಡೀಸೆಲ್ ಬೆಲೆಯು 100 ರೂ.ಗಳಿಗೆ ಹತ್ತಿರವಾಗಿದೆ. ಅಡುಗೆ ಅನಿಲವೂ ಭಾರಿ ಏರಿಕೆ ಕಂಡಿದ್ದು ಇದರಿಂದ ಜನಸಾಮಾನ್ಯರು ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಆರೋಪಿಸಿದರು.

ನಗರದ ಹೇಮಾವತಿ ಪ್ರತಿಮೆಯ ಮುಂಬಾಗ ಸಿಪಿಐಎಂ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿದಿ ಮಾತನಾಡುತ್ತಾ ಇದು ಅತ್ಯಂತ ಅಸಹನೀಯವಾಗಿದೆ ಎಂದು ಸಿಪಿಐಎಂ ಕೇಂದ್ರ ಸರಕಾರದ ಈ ಜನವಿರೋಧಿ ಹಾಗೂ ಲೂಟಿಕೋರ ನೀತಿಯನ್ನು ಬಲವಾಗಿ ಖಂಡಿಸುತ್ತದೆ. ಇದು ಸಹಜವಾಗಿಯೇ ಎಲ್ಲ ಅಗತ್ಯ ವಸ್ತುಗಳ ಬೆಲೆಗಳ ಏರಿಕೆಗೆ ಕಾರಣವಾಗಿದೆ. ಜಾಗತಿಕವಾಗಿ ಕಚ್ಛಾ ತೈಲದಲ್ಲಿ ಯಾವುದೇ ಬೆಲೆ ಏರಿಕೆ ಆಗದಿದ್ದರೂ ದೇಶದಲ್ಲಿ ಈ ಪ್ರಮಾಣದಲ್ಲಿ ಇವುಗಳ ಬೆಲೆಗಳು ಏರಿಕೆಯಾಗಲೂ ಕೇಂದ್ರ ಸರಕಾರವೇ ನೇರ ಹೊಣೆಗಾರನಾಗಿದೆ. ಇದು ಜನತೆಯನ್ನು ದೊಡ್ಡ ಪ್ರಮಾಣದಲ್ಲಿ ಲೂಟಿಗೊಳಪಡಿಸುವ ವಿಚಾರವಾಗಿದ್ದು ಇದನ್ನು ಕೇಂದ್ರ ಸರ್ಕಾರ ಕೂಡಲೇ ವಾಪಸ್ ಪಡೆಯಬೇಕೆಂದು ಆಗ್ರಹಿಸಲಾಯಿತು.



ಪ್ರತಿಭಟನೆಯಲ್ಲಿ ಸಿಪಿಐಎಂ ಹಾಸನ ಸ್ಥಳೀಯ ಸಮಿತಿ ಕಾರ್ಯದರ್ಶಿ ಎಚ್.ಆರ್. ನವೀನ್ ಕುಮಾರ್, ಮುಖಂಡರುಗಳಾದ ವಸಂತ್ ಕುಮಾರ, ಪೃಥ್ವಿ ಎಂ.ಜಿ, ಪುಷ್ಪ ಇನ್ನಿತರರು ಉಪಸ್ಥಿತರಿದ್ದರು.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕೆಲಸಗಾರರಿಗೆ ಜಾತಿ ಸಮುದಾಯಗಳ ಗುಂಪುಗಳ ಆಧಾರದಲ್ಲಿ ವೇತನ ನೀಡಲು ಅಗತ್ಯ ಕ್ರಮವಹಿಸುವ ಭಾರತ ಸರಕಾರದ ಸಲಹೆಯ ಆದೇಶವನ್ನು ರಾಜ್ಯದಲ್ಲಿ ಜಾರಿಗೊಳಿಸದಂತೆ ತಡೆಯಲು ಮತ್ತು

ಭಾರತ ಸರಕಾರದ ಸಲಹೆಯನ್ನು ತಿರಸ್ಕರಿಸಲು ಒತ್ತಾಯಿಸಿ ಮನವಿ

ಭಾರತ ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ವಿಭಾಗವು ಎಲ್ಲಾ ರಾಜ್ಯಗಳಿಗೆ ಉಲ್ಲೇಖದಂತೆ ಸುತ್ತೋಲೆ ಹೊರಡಿಸಿದೆ.

ಸದರಿ ಸುತ್ತೋಲೆಯು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಇದುವರೆಗೆ ವೇತನ ಪಾವತಿಸಲಾಗುತ್ತಿದ್ದ ಮಾರ್ಗ ಸೂಚಿಯನ್ನು ಬದಲಾಯಿಸಿದೆ. ಉದ್ಯೋಗ ಖಾತ್ರಿ ಕೆಲಸಗಾರರು ಅವರು ಯಾವುದೇ ಜನ ಸಮುದಾಯಕ್ಕೆ ಸೇರಿದ್ದರೂ ಇದುವರೆಗೆ ಅವರೆಲ್ಲರೂ ಒಟ್ಟಾಗಿ ಒಂದೇ ಮಾರ್ಗದಲ್ಲಿ ವೇತನ ಪಡೆಯುತ್ತಿದ್ದರು. ವೇತನ ಪಡೆಯುವಾಗ ಯಾವುದೇ ಜಾತಿ ಸಮುದಾಯ ಆಧರಸಿ ವೇತನ ಪಡೆಯುತ್ತಿರಲಿಲ್ಲ. ಈ ರೀತಿಯ ವ್ಯವಸ್ಥೆಯಿದ್ದದನ್ನು ಈಗ ಬದಲಾಯಿಸಿ, ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನತೆ ಮತ್ತು ಹಿಂದುಳಿದ ವರ್ಗದ ಜನತೆಗಳು ಪ್ರತ್ಯೇಕ ಪ್ರತ್ಯೇಕವಾಗಿ ವೇತನ ಪಡೆಯುವಂತೆ ಕ್ರಮವಹಿಸಲಾಗಿದೆ ಆ ಕುರಿತು, ಅಗತ್ಯ ಕ್ರಮವಹಿಸಲು ರಾಜ್ಯಗಳಿಗೆ ಸೂಚಿಸಲಾಗಿದೆ.

ಸದರಿ ಸುತ್ತೋಲೆಯು ಮುಂದುವರೆದು ಸದರಿ ಸೂಚನೆಯನ್ನು ಭಾರತ ಸರಕಾರವು, ಇನ್ನು ಮುಂದೆ ಪರಿಶಿಷ್ಠ ಜಾತಿ ಹಾಗೂ ಪಂಗಡಗಳಿಗೆ ಪ್ರತ್ಯೇಕವಾದ ಉದ್ಯೋಗ ಖಾತ್ರಿ ಅನುದಾನ ಒದಗಿಸಲಿರುವುದರಿಂದ ಈ ಕ್ರಮ ವಹಿಸಲಾಗಿದೆ ಎನ್ನುತ್ತದೆ.

ಇಡೀ ದೇಶವೇ ಕೋವಿಡ್ – 19 ರ ಮತ್ತು ಲಾಕ್ ಡೌನ್ ಸಂಕಷ್ಠದಲ್ಲಿರುವಾಗ, ಜನತೆಯು ಉದ್ಯೋಗ ಖಾತ್ರಿ ಯೋಜನೆಯ ಅನುದಾನ ದುಪ್ಪಟ್ಟುಗೊಳಿಸಲು ಮತ್ತು ತಲಾ ಕುಟುಂಬಗಳಿಗೆ ಕನಿಷ್ಠ 200 ದಿನಗಳ ಮತ್ತು ಕೂಲಿಯನ್ನು 600 ರೂಗಳಿಗೆ ಹೆಚ್ಚಿಸಲು ಕೇಳುತ್ತಿರುವಾಗ, ಇವರ ಉದ್ಯೋಗ ಸಂಕಷ್ಟ ನಿವಾರಣೆಗೆ ನೆರವಾಗ ಬೇಕಾದ ಭಾರತ ಸರಕಾರ, ಇಂತಹ ಜನಪರ ನೆರವು ನೀಡುವ ಯೋಚನೆಯನ್ನು ಮಾಡದೇ ನಿರಾಕರಿಸಿ, ಇವರಾರು ಕೇಳದ ಈ ಹೊಸ ನೀತಿಯನ್ನು ಜಾರಿಗೊಳಿಸಲು ಉತ್ಸುಕವಾಗಿರುವುದು ಆಶ್ಚರ್ಯ ಮತ್ತು ತೀವ್ರ ಆತಂಕಕಾರಿಯಾಗಿದೆ.

ಇದು ಜನತೆಯ ಮೇಲೆ ಎರಡು ರೀತಿಯ ಪರಿಣಾಮಗಳನ್ನು ಬೀರಲಿದೆ.

ಸುತ್ತೋಲೆ ಹೇಳುವಂತೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳು ಮತ್ತು ಇತರೇ ಹಿಂದುಳಿದ ಜನಸಮುದಾಯಗಳು ಇನ್ನು ಮುಂದೆ ಪ್ರತ್ಯೇಕ ಪ್ರತ್ಯೇಕವಾಗಿ ವೇತನ ಪಡೆಯಬೇಕಾಗುತ್ತದೆ ಮಾತ್ರವಲ್ಲಾ, ಜನ ಸಮುದಾಯಗಳ ಇದೇ ಮಾರ್ಗದಲ್ಲಿ ಉದ್ಯೋಗಕ್ಕಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಒತ್ತಾಯಿಸುತ್ತದೆ. ಇದು ಈ ಹಿಂದಿನಂತೆ ಎಲ್ಲರೂ ಒಟ್ಟಾಗಿ ಉದ್ಯೋಗ ಖಾತರಿ ಕೆಲಸದಲ್ಲಿ ತೊಡಗುತ್ತಿದ್ದ ಒಗ್ಗೂಡಿ ಕಾರ್ಯ ನಿರ್ವಹಿಸುವ ಮತ್ತು ಆ ಮೂಲಕ ಜಾತಿ ತಾರತಮ್ಯ ನಿವಾರಣೆಗೆ ಅನುವಾಗುವ ಅವಕಾಶ ಹೊಂದಿದ್ದರು. ಇಂತಹ ಜಾತ್ಯಾತೀತೆಯ ಸ್ವರೂಪಕ್ಕೆ ಮತ್ತು ಅದರ ಬಲಗೊಳಿಕೆಯನ್ನು ಇದು ದುರ್ಬಲ ಗೊಳಿಸುತ್ತದೆ ಮಾತ್ರವಲ್ಲಾ, ಅವರು ಬೇರೆ, ನಾವೇ ಬೇರೆ ಎಂಬ ಜಾತಿಭಾವನೆಯನ್ನು ಎಚ್ಚರಿಸಿ ಬಲಗೊಳಿಸುತ್ತದೆ.

ಎರಡನೆಯದಾಗಿ ಕೇಂದ್ರ ಸರಕಾರ ಪರಿಶಿಷ್ಠ ಜಾತಿ ಹಾಗೂ ಪಂಗಡದ ಜನತೆಗೆ ಪ್ರತ್ಯೇಕ ಉದ್ಯೋಗ ಖಾತ್ರಿ ಅನುದಾನ ಒದಗಿಸುವ ಇಂಗಿತದ ಮೂಲಕ ಈಗಾಗಲೇ ಇವರ ಜನಸಂಖ್ಯೆಗೆ ಅನುಗುಣವಾಗಿ ಒದಗಿಸುವ ವಿಶೇಷ ಘಟಕ ಯೋಜನೆಯ ಹಣವನ್ನು ಈ ಕಡೆ ಹರಿಸಿ ಉದ್ಯೋಗ ಖಾತ್ರಿಗೆ ನೀಡಲಾಗುವ ಪ್ರತ್ಯೇಕ ಅನುದಾನವನ್ನು ಕೈ ಬಿಡುವ ಸಂಚನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಅದೇ ರೀತಿ, ಹಿಂದುಳಿದ ಜನ ಸಮುದಾಯಗಳಿಗೆ ಉದ್ಯೋಗ ಖಾತ್ರಿ ಮೊತ್ತವನ್ನು ನಿಧಾನವಾಗಿ ಇಲ್ಲದಂತೆ ಮಾಡುವ ವಾಸನೆಯು ಇದರಲ್ಲಡಗಿರುವುದು ಕಂಡುಬರುತ್ತಿದೆ. ಆ ಮೂಲಕ ಈ ಎಲ್ಲಾ ಬಡ ಸಮುದಾಯಗಳ ನಡುವೆ ಕಂದರವನ್ನು ಸೃಷ್ಠಿಸುವ ಮತ್ತು ದ್ವೇಷವನ್ನು ಬೆಳೆಸುವ ಅಡಿಪಾಯವಾಗಿ ಕಂಡು ಬರುತ್ತಿದೆ. ಹೀಗಾಗಿ ಇದು ಭಾರತ ಸಂವಿಧಾನ ವಿರೋಧಿ ದುಷ್ಕೃತ್ಯವಾಗಿದೆ.

ಅದೇ ರೀತಿ, ಇದು, ಸಂಘ ಪರಿವಾರದ ಒಡೆದಾಳುವ ನೀತಿಯನ್ನು ಉದ್ಯೋಗ ಖಾತ್ರಿ ಯೋಜನೆಯ ಬಡ ಜನಗಳ ನಡುವೆ ಜಾರಿಗೊಳಿಸುವ ದುರುಳ ಸಂಚಿನ ಭಾಗವಾಗಿ ಬಂದಿರುವುದು ಸ್ಪಷ್ಠವಾಗಿ ಕಂಡು ಬರುತ್ತದೆ. ಮಾತ್ರವಲ್ಲಾ, ಪರಿಶಿಷ್ಟ ಜನ ಸಮುದಾಯಗಳಿಗೆ ನೀಡಬೇಕಾದ ಜನ ಸಂಖ್ಯೆಗನುಗುಣವಾದ ಅನುದಾನವನ್ನು ಕಡಿತ ಮಾಡುವ ಮತ್ತು ಇತರೆ ಹಿಂದುಳಿದ ಜನ ಸಮುದಾಯಗಳನ್ನು ಉದ್ಯೋಗ ಖಾತ್ರಿ ಯೋಜನೆಯಿಂದ ಹೊರದೂಡುವ ದುಷ್ಟ ಕ್ರಮವಾಗಿದೆ.

ಉಲ್ಲೇಖದಂತೆ ಜನರನ್ನು ವಿಭಜಿಸಿ ಆಳುವ ಸುತ್ತೋಲೆ ಹೊರಡಿಸಿರುವ ಭಾರತ ಸರಕಾರದ ದುಷ್ಠ ಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸುತ್ತದೆ. ಸದರಿ ಸೂಚನೆಯನ್ನು ರಾಜ್ಯದಲ್ಲಿ ಜಾರಿಗೊಳಿಸದಂತೆ ತಡೆ ಹಿಡಿಯಲು ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ. ಮಾತ್ರವಲ್ಲಾ ಅಂತಹ ಸೂಚನೆಯನ್ನು ಹಿಂಪಡೆಯುವಂತೆ ಭಾರತ ಸರಕಾರವನ್ನು ಒತ್ತಾಯಿಸಿ ಪತ್ರ ಬರೆಯಲು ವಿನಂತಿಸಿದೆ.

ಇದು ಬಡಜನತೆಯ ನಡುವೆ ಜಾತಿ ಭಾವನೆಗಳನ್ನು ಗಟ್ಟಿಗೊಳಿಸುವ ಸಂವಿಧಾನ ಬಾಹಿರ ಕ್ರಮವಾಗಿದೆ.

ಬಡವರ ಬದುಕಿಗೆ ನೆರವಾಗುವ ಪ್ರತ್ಯೇಕ ಅನುದಾನವನ್ನು ಕಿತ್ತುಕೊಳ್ಳುವ ವಿಚಾರವಾಗಿದೆ.

ಸಿಎಂ ಖುರ್ಚಿಯ ಮೇಲೆ ಎಲ್ಲರ ಕಣ್ಣು?!

ಬಿಜೆಪಿಯಲ್ಲಿ ಹೊಗೆಯಾಡುತ್ತಿರುವ ನಾಯಕತ್ವ ಬದಲಾವಣೆ ಕೂಗಿಗೆ ತುಪ್ಪ ಸುರಿಯಲು ಪ್ರಯತ್ನಿಸಿ ಮನಸ್ಸಿನಲ್ಲಿ ಮಂಡಿಗೆ ಮೇಯ್ದು ತುಂಬಾ ಖುಷಿಯಾಗಿದ್ದ ಕಾಂಗ್ರೆಸ್ ಪಕ್ಷದಲ್ಲೂ ಸಿಎಂ ವಿಚಾರಕ್ಕೆ ಜಟಾಪಟಿ ಶುರುವಾಗಿದೆ. ಆ ಮೂಲಕ ಕಾಂಗ್ರೆಸ್‌ನ "ಭಿನಾಭಿಪ್ರಾಯ ಸಂಸ್ಕೃತಿ" ಇಂದು ಮತ್ತೊಮ್ಮೆ ಹೊರಬಿದ್ದಿದೆ. ವಿಪಕ್ಷ ನಾಯಕ ಸಿದ್ಧರಾಮಯ್ಯ ಸಿಎಂ ವಿಚಾರದ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಡಿ ಎಂದು ಹೇಳುತ್ತಿದ್ದರೆ, ಅತ್ತ ಡಿ.ಕೆ ಶಿವಕುಮಾರ್, ಜಮೀರ್ ಹೇಳಿಕೆಗೆ ಕೆಂಡಾಮಂಡಲವಾಗಿದ್ದಾರೆ. ನಾನು ಮುಂದಿನ ಸಿಎಂ ಎನ್ನಬೇಡಿ ಅದು ನನಗೆ ಡೇಂಜರ್ ಎಂದು ಡಾ. ಜಿ. ಪರಮೇಶ್ವರ್ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಅಂದ ಹಾಗೆ ಕಾಂಗ್ರೆಸ್ ನಲ್ಲಿ ಸಿಎಂ ವಿಚಾರದ ರಾಜಕೀಯ ಕಿಡಿಯನ್ನು ಹೊತ್ತಿಸಿದ್ದು ಶಾಸಕ ಬಿ.ಝಡ್ ಜಮೀರ್ ಅಹ್ಮದ್ ಖಾನ್.

ಗುರುರಾಜ್ ದೇಸಾಯಿ

ರಾಜ್ಯದಲ್ಲಿ ನಡೆಯುತಿದ್ದ ನಾಯಕತ್ವ ಬದಲಾವಣೆಯ ಚರ್ಚೆ ಸದ್ಯ ಸ್ವಲ್ಪ ಮಟ್ಟಿಗೆ ತಣ್ಣಗಾಗಿದೆ. ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಆಗಮಿಸಿ ಸಾಲು ಸಾಲು ಸಭೆಗಳನ್ನು ನಡೆಸಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ತೂಗುಕತ್ತಿಯಿಂದ ಪಾರು ಮಾಡಿದ್ದಾರೆ. ನಾಯಕತ್ವ ಬದಲಾವಣೆ ಇವತ್ತೆ ಅಂತ್ಯವಾಗಬೇಕು, ಬಹಿರಂಗವಾಗಿ ಯಾರೂ ಮಾತನಾಡಬಾರದು ಎಂದು ಖಡಕ್ ಸೂಚನೆಯ ನಡುವೆಯೂ ವಿಧಾನ ಪರಿಷತ್ ಸದಸ್ಯ ಎಚ್ ವಿಶ್ವನಾಥ್ ಅರ್ಧ ಘಂಟೆಯ ನಂತರ "ಯಡಿಯೂರಪ್ಪಗೆ ವಯಸ್ಸಾಯ್ತು ನಾಯಕತ್ವ ಬದಲಾಗಬೇಕು" ಎಂದು ಮಾಧ್ಯಮದ ಮುಂದೆ ಬಹಿರಂಗವಾಗಿ ಹೇಳಿದರು. ಅತ್ತ ಅರುಣ್ ಸಿಂಗ್ ವಿಮಾನದ ಮೂಲಕ ದೆಹಲಿಗೆ ಹಾರಿದರು. ಈಗಲೂ ದೆಹಲಿ ನಾಯಕರ ಜೊತೆ ಶಾಸಕ ಅರವಿಂದ್ ಬೆಲ್ಲದ ಸಂಪರ್ಕದಲ್ಲಿ ಇದ್ದಾರೆ ಅವರನ್ನು ಸಿಎಂ ಮಾಡುವಂತೆ ಅವರು ಹೈಕಮಾಂಡ್ ಹಿಂದೆ ಬಿದ್ದಿದ್ದಾರೆ. ಆಗಸ್ಟ್ ನಲ್ಲಿ ಯಡಿಯೂರಪ್ಪ ಆಂದ್ರಪ್ರದೇಶದ ರಾಜ್ಯಪಾಲರಾಗಲಿದ್ದಾರೆ ಎಂಬ ಚರ್ಚೆಗಳು ಬಿಜೆಪಿಯಿಂದಲೇ ಕೇಳಿ ಬರುತ್ತಿವೆ. ತೆಲುಗು ಮಾಧ್ಯಮಗಳಲ್ಲಿ "ರಾಜ್ಯಪಾಲ" ವಿಚಾರ ಜೋರಾಗಿ ಸದ್ದು ಮಾಡಿತ್ತು. ಹಾಗಾಗಿ ನಾಯಕತ್ವದ ಬದಲವಾಣೆ ಬಿಜೆಪಿಯೊಳಗೆ ಬೂದಿಮುಚ್ಚಿದ ಕೆಂಡದಂತಿದೆ. ಆ ಕಿಡಿ ಯಾವಾಗ ಬೇಕಾದರೂ ಹೊತ್ತಿಕೊಳ್ಳಬಹುದು.

ಇತ್ತೀಚೆಗೆ ಕೊಪ್ಪಳದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಆಹಾರದ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಜಮೀರ್ ರವರು "ನಮ್ಮ ಭಾವಿ ಮುಖ್ಯಮಂತ್ರಿ ಸಿದ್ದರಾಮಯ್ಯ. ಜನ ಹಾರೈಸಿದರೆ ಪಕ್ಷದ ಹೈಮಾಂಡ್‌ನಿಂದ ಕೂಡ ಅವರನ್ನು ಮುಖ್ಯಮಂತ್ರಿ ಆಗುವುದರಿಂದ ತಡೆಯಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ತನ್ನದೆ ಪಕ್ಷದ ನಾಯಕರೇ ಹುಬ್ಬೆರಿಸುವಂತೆ ಮಾಡಿದ್ದರು. ಇದಕ್ಕೆ ನನ್ನ ಬೆಂಬಲವೂ ಇದೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ತಲೆ ಅಲ್ಲಾಡಿಸಿದ್ದರು. ಈ ಚರ್ಚೆ ನಡೆದದ್ದು ಮಾಜಿ ಸಿಎಂ ಸಿದ್ದಾರಾಮಯ್ಯನವರ ಸಮ್ಮುಖದಲ್ಲಿ ಎಂಬುದು ವಿಶೇಷ.

ಜಮೀರ್ ಸ್ಫೋಟಿಸಿದ ಹೇಳಿಕೆ ಮಾಧ್ಯಮದಲ್ಲಿ ವರದಿಯಾಗುತ್ತಿದಂತೆ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕೆಂಡಾಮಂಡಲವಾಗಿದ್ದರೆ. "ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಮೇಲ್ನೋಟಕ್ಕೆ ಡಿಕೆಶಿ ಜಮೀರ್ ರವರಿಗೆ ನೀಡಿದ ಹೇಳಿಕೆ ಎಂದು ಅನಿಸಿದರೂ ಕರ್ನಾಟಕದ ರಾಜಕೀಯವನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಇದು ಸಿದ್ಧರಾಮಯ್ಯ ವರ್ಸಸ್ ಡಿಕೆ ಶಿವಕುಮಾರ್ ನಡುವಿನ ಗುದ್ದಾಟ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈಗ ಕಾಂಗ್ರೆಸ್ ನಿಂದ ಗೆದ್ದಿರುವ ಶಾಸಕರಲ್ಲಿ ಬಹುತೇಕರ ಸಿದ್ಧರಾಮಯ್ಯನವರ ಮಿತ್ರಮಂಡಳಿಯವರು. ಸಿದ್ದು ಹೇಳಿದ್ದಕ್ಕೆಲ್ಲ ಎಸ್ ಅನ್ನೋದು ಅವರ ಕೆಲಸ. ಮುಖ್ಯಮಂತ್ರಿ ಹೆಸರು ಪ್ರಸ್ತಾಪ ಶಾಸಕರ ವೈಯಕ್ತಿಕ ಅಭಿಪ್ರಾಯ ಎಂದು ಸಿದ್ದು ಮೇಲ್ನೋಟಕ್ಕೆ ಹೇಳುತ್ತಿದ್ದಾರೆ. ಜಮೀರ್ ಅಹ್ಮದ್ ಸಿದ್ದುನ ಆಪ್ತರಲ್ಲಿ ಆಪ್ತರು. ಇನ್ನೂ ರಾಘವೇಂದ್ರ ಹಿಟ್ನಾಳ ಸಿದ್ದರಾಮಯ್ಯನವರ ಭಕ್ತ, ಸ್ವಜಾತಿ ಎಂಬುದು ಬಲವಾದ ಕಾರಣ. ಅವರಿಗಾಗಿ ಕ್ಷೇತ್ರವನ್ನೆ ಬಿಟ್ಟುಕೊಡಲು ಸಿದ್ಧವಿದ್ದಾರೆ ಹಿಟ್ನಾಳ. ಹಾಗಾಗಿ ಇವರ ಬಾಯಲ್ಲಿ ಮುಂದಿನ "ಮುಖ್ಯಮಂತ್ರಿ" ಹೆಸರು ಪ್ರಸ್ತಾಪವಾಗಿದೆ ಎಂದರೆ ಅದರ ಹಿಂದೆ ಮುಂದೆ ಯಾರಿದ್ದಾರೆ ಎಂಬುದು ಸುಲಭವಾಗಿ ಗೊತ್ತಾಗುವ ವಿಚಾರ.

ಕಾಂಗ್ರೆಸ್ ನಲ್ಲಿ ಮುಖ್ಯಮಂತ್ರಿ ವಿಚಾರ ಮುನ್ನಲೆಗೆ ಬರಲು ಕಾರಣವೇನು:

ಮುಂದಿನ ವಿಧಾನಸಭಾ ಚುನಾವಣೆಗೆ ಇನ್ನೂ 23 ತಿಂಗಳು ಬಾಕಿ ಇರುವಾಗಲೇ ಕಾಂಗ್ರೆಸ್ ನಲ್ಲಿ ಸಿಎಂ ಖುರ್ಚಿಗೆ ಟವಲ್ ಹಾಕಲು ಕಾರಣ ಏನು ಎಂಬುದು ತಿಳಿಯಲು ಹೊರಟಾಗ ಸಿಗುವ ಅಂಶಗಳು ಅಚ್ಚರಿ ಎನಿಸುತ್ತಿವೆ. ಈಗಿರುವ ಶಾಸಕರಲ್ಲಿ ಸಿದ್ದು ಆಪ್ತರೆ ಹೆಚ್ಚಿದ್ದು ಮುಂದಿನ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ತಪ್ಪಿಸಲು ಡಿಕೆಶಿ ತಂತ್ರ ಹೆಣೆದಿದ್ದಾರೆ ಎಂಬ ಅಂಶ, ಸಿಎಂ ಖುರ್ಚಿ ಚರ್ಚೆಯಿಂದ ಬಯಲಾಗಿದೆ. ಕಾಂಗ್ರೆಸ್ ಮೂಲಗಳ ಪ್ರಕಾರ ಡಿಕೆಶಿ ತನ್ನ ಬೆಂಬಲಿಗರಿಗೆ ಟಿಕೆಟ್ ಖಾತ್ರಿ ಪಡಿಸಿದ್ದಾರಂತೆ. ಅದು ಬರೋಬ್ಬರಿ 50 ಜನರಿಗೆ! ಅವರೆಲ್ಲ ಗೆದ್ದರೆ ನನ್ನ ಸಿಎಂ ದಾರಿ ಸುಲಭ ಎನ್ನುವುದು ಡಿಕೆ ಶಿವಕುಮಾರ್ ಲೆಕ್ಕಾಚಾರ. ಇದು ಸಿದ್ದುಗೆ ಕಸಿವಿಸಿ ಮೂಡಿಸಿದ್ದು ಅವರು ಈ ರೀತಿಯ ಬಹಿರಂಗ ತಂತ್ರವನ್ನು ಅವರ ಬೆಂಬಲಿಗರ ಮೂಲಕ ಹಾಕುತ್ತಿದ್ದಾರೆ ಎನ್ನುವುದು ನೂರಕ್ಕೆ ನೂರರಷ್ಟು ಸತ್ಯ!

ಇನ್ನೂ ಇದೇವೇಳೆ ದಲಿತ ಸಿಎಂ ವಿಚಾರವೂ ಈಗ ಮುನ್ನಲೆಗೆ ಬಂದಿದೆ. ಪ್ರತಿಬಾರಿಯೂ ಅದು ಚರ್ಚೆಗೆ ಬಂದರೂ "ಪ್ರಭಲ" ಮನಸ್ಥಿತಿಗಳ ನಡುವೆ ಅದು ಮಾಯವಾಗುತ್ತಿದೆ. ದಲಿತ ಸಿಎಂ ವಿಚಾರ ಚರ್ಚೆಗೆ ಬಂದಿದ್ದೆ ತಡ "ಈ ಆಟಕ್ಕೆ ನನ್ನನ್ನು ತಳ್ಳಬೇಡಿ ಸಿಎಂ ಪದವೇ ನನಗೆ ಡೇಂಜರ್ ಎಂದು ಶಾಸಕ ಡಾ. ಜಿ. ಪರಮೇಶ್ವರ್ ಅಸಹಾಯಕತೆಯನ್ನು ಹೊರಹಾಕಿದ್ದಾರೆ." ಕರ್ನಾಟಕದ ರಾಜಕಾರಣದಲ್ಲಿ ದಲಿತ ಸಮುದಾಯಕ್ಕೆ ಸೇರಿದವರು ಸಚಿವರಾಗಿದ್ದಾರೆ, ಅದರಲ್ಲಿ ಕೆಲವರು ಒಂದಿಷ್ಟು ಉತ್ತಮ ಎನ್ನಬಹುದಾದ ಕೆಲಸಗಳನ್ನು ಮಾಡಿದ್ದಾರೆ. ಆದರೆ ಅದನ್ನು ಸಮರ್ಥಿಸಿಕೊಳ್ಳಲು ಬಲವಾದ ಧ್ವನಿ ಇಲ್ಲದ ಕಾರಣ ಈ ಚರ್ಚೆ ಹಿಂದಕ್ಕೆ ಸರಿಯಲು ಕಾರಣ ಇರಬಹುದು. ಮಲ್ಲಿಕಾರ್ಜುನ್ ಖರ್ಗೆಯವರ ಪ್ರಭಾವ ಇತ್ತೀಚೆಗೆ ಕುಸಿತ ಕಂಡಿದೆ. ಕೆ.ಎಚ್ ಮುನಿಯಪ್ಪ ಸ್ಪರ್ಧೆ ಒಡ್ಡುವ ಪ್ರಯತ್ನ ನಡೆಸುತ್ತೀದ್ದಾರಾದರೂ ಅದು ಸುಲಭದ ಕೆಲಸವಲ್ಲ. ಇನ್ನೂ ಸಚಿವರಾದವರು, ಶಾಸಕರಾದವರು ಆ ಸಮುದಾಯದ ಜೊತೆ ನಿಂತು ಅವರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಲಪಡಿಸುವ ಕೆಲಸ ಮಾಡಿದ್ದರೆ ಇವತ್ತು ದಲಿತ ಸಮುದಾಯಕ್ಕೆ ರಾಜಕಾರಣದಲ್ಲಿ ಸೋಲಾಗುತ್ತಿರಲಿಲ್ಲ. ಈಗಲೂ ದಲಿತ ಸಮುದಾಯದ ಶಾಸಕರು ತಮ್ಮ ಹಿಂದಿರುವ ಒಂದಿಷ್ಟು ಜನರಿಗೆ ಸಹಾಯವಾಗುವ ಕೆಲಸ ಮಾಡಿದ್ದು ಬಿಟ್ಟರೆ ಸಮುದಾಯಕ್ಕೆ ಸಾರ್ಥಕವಾಗುವ ಕೆಲಸ ಮಾಡಿಲ್ಲ.

ಸಧ್ಯ ರಾಜ್ಯದಲ್ಲಿ ಕೋವಿಡ್ ಆರ್ಭಟ ಇನ್ನೂ ನಿಂತಿಲ್ಲ, ಜನ ಸಂಕಷ್ಟದಲ್ಲಿರುವಾಗ ಈ ರಾಜಕಾರಣಿಗಳಿಗೆ ಸಿಎಂ ಖುರ್ಚಿಯ ಚಿಂತೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ನಾಯಕತ್ವ ಬದಲಾವಣೆ ವಿಚಾರ ಬಂದಾಗ ಕಾಂಗ್ರೆಸ್ ಬಿಜೆಪಿ ಗೆ ಪಾಠ ಮಾಡಿತ್ತು. ಕೋವಿಡ್ ಕಾಲದಲ್ಲಿ ದುರಾಡಳಿತ ಸರಕಾರ ನೋಡುವಂತಾದೆವಲ್ಲ ಎಂದು ಕ್ಲಾಸ್ ಹಾಕಿತ್ತು. ಈಗ ತಾನೇ ಸಿಎಂ ಖುರ್ಚಿಯ ಬಿಸಿ ಬಾಣಲಿಗೆ ಬಿದ್ದಿದೆ. ಕೋವಿಡ್ ಎರಡನೇ ಅಲೇ ಇನ್ನೂ ತಗ್ಗಿಲ್ಲ, ಮೂರನೇ ಅಲೆ ಇನ್ನೇನು ಬಂದು ಬಿಡುತ್ತದೆ ಎಂದು ತಜ್ಞರು ಹೇಳುತ್ತಿದ್ದಾರೆ. ಸರಕಾರ, ಸಚಿವರು, ಶಾಸಕರು ಇನ್ನಾದರೂ ಜಾಗ್ರತೆ ವಹಿಸದೆ ಇದ್ದರೆ ಇನ್ನಷ್ಟು ಸಂಕಷ್ಟಗಳನ್ನು ಕರ್ನಾಟಕ ನೋಡಬೇಕಾಗುತ್ತದೆ. ಸಿಎಂ ಚರ್ಚೆಯ ವಿಚಾರವನ್ನು ಬದಿಗಿಟ್ಟು ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರು ಜನರ ಕಲ್ಯಾಣದ ಕಡೆ ಗಮನ ಕೊಡಬೇಕಿದೆ.








ಕೃಪೆ: ಸತೀಶ್ ಆಚಾರ್ಯ

ಕಾರ್ಮಿಕರಿಗೆ ಆಹಾರ ಕಿಟ್ ಹಂಚಿಕೆಯಲ್ಲಿ ಭ್ರಷ್ಟಾಚಾರ: ತನಿಖೆಗೆ ಸಿಐಟಿಯು ಆಗ್ರಹ

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯು ವಲಸೆ ಕಟ್ಟಡ ಕಾರ್ಮಿಕರಿಗೆ ಆಹಾರದ ಕಿಟ್ ವಿತರಿಸುತ್ತಿದೆ. ಆದರೆ, ವಿತರಿಸಲಾಗುವ ಆಹಾರ ಕಿಟ್ ಗಳ ಗುಣಮಟ್ಟ ಮತ್ತು ಖರೀದಿಸಲಾದ ಆಹಾರ ಕಿಟ್‌ಗಳಲ್ಲಿ ನಡೆದಿರಬಹುದಾದ ಭ್ರಷ್ಟಚಾರ ಮತ್ತು ಇಡೀ ಆಹಾರ ಕಿಟ್ ವಿತರಣೆಯ ವ್ಯವಹಾರವನ್ನು ಸಂಪೂರ್ಣ ತನಿಖೆಗೆ ಒಳಪಡಿಸಬೇಕು ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ರಾಜ್ಯ ಸಮಿತಿ ಆಗ್ರಹಿಸಿದೆ.

ಈ ಬಗ್ಗೆ ಹೇಳಿಕೆಯನ್ನು ನೀಡಿರುವ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್ ವರಲಕ್ಷ್ಮಿ ಅವರು "ಕೋವಿಡ್ ಎರಡನೇ ಸೋಂಕಿನಲ್ಲಿ ಸಂಕಷ್ಟಕ್ಕೀಡಾಗಿದ್ದ ಕಾರ್ಮಿಕರಿಗೆ ಮಂಡಳಿಯು ಆಹಾರ ಕಿಟ್ ವಿತರಿಸುತ್ತದೆ. ಇದರಲ್ಲಿ ಭ್ರಷ್ಟಾಚಾರ ನಡೆದಿರುವ ಆರೋಪಗಳು ಕೇಳಿಬರುತ್ತಿವೆ. ಒಂದು ವೇಳೆ ಆರೋಪ ಸಾಬೀತಾದರೆ ಅಪರಾಧಿಗಳನ್ನು ಶಿಕ್ಷೆಗೊಳಪಡಿಸಬೇಕು" ಎಂದು ಆಗ್ರಹಿಸಿದ್ದಾರೆ.



ಸಿಐಟಿಯು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಅವರು "ಜೂನ್ 9 ರಂದು ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಮಂಡಳಿಯಲ್ಲಿ ನಡೆದ ಕಾರ್ಮಿಕ ಸಂಘಗಳ ಸಭೆಯಲ್ಲಿ ಎಲ್ಲ ಕಾರ್ಮಿಕ ಸಂಘಗಳು ಕೋವಿಡ್ ಸೋಂಕು ವ್ಯಾಪಕವಾಗಿ ಹರಡಿರುವ ಈ ಸನ್ನಿವೇಶದಲ್ಲಿ ಆಹಾರ ಕಿಟ್‌ಗಳನ್ನು ವಿತರಿಸುವ ಪ್ರಸ್ತಾಪ ಕೈ ಬಿಟ್ಟು ನೋಂದಾಯಿತ ಪ್ರತಿ ಕಾರ್ಮಿಕನಿಗೆ ಮಾಸಿಕ ರೂ. 10 ಸಾವಿರ ಹಣವನ್ನು ನೇರವಾಗಿ ಖಾತೆಗೆ ವರ್ಗಾಹಿಸಬೇಕೆಂದು ಆಗ್ರಹಿಸಿದ್ದವು. ಅಲ್ಲದೆ ಕಲ್ಯಾಣ ಮಂಡಳಿ ಹಣದಲ್ಲಿ ಶಾಸಕರಿಗೆ ಆಹಾರ ಕಿಟ್ ಗಳನ್ನು ನೀಡುವ ಕ್ರಮವನ್ನು ವಿರೋಧಿಸಿದ್ದವು" ಎಂದು ತಿಳಿಸಿದ್ದಾರೆ.

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ಸಂಗ್ರಹವಾಗಿರುವ ಹಣವನ್ನು ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆಗಳಿಗೆ ಮಾತ್ರ ಉಪಯೋಗಿಸಬೇಕೆಂಬ ಸರ್ವೋಚ್ಚನ್ಯಾಯಾಲಯದ ಆದೇಶ ಇರುವುದನ್ನು ಮಂಡಳಿಯ ಗಮನಕ್ಕೆ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ತಂದಿದ್ದರು.

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ಸಂಗ್ರಹವಾಗಿರುವ ಹಣವನ್ನು ಸರಕಾರಿ ಯೋಜನೆಗಳಿಗೆ ಹಾಗು ಇತರೆ ರಾಜಕೀಯ ಪ್ರೇರಿತ ಉದ್ದೇಶಗಳಿಗೆ ಹಾಗು ಹಣವನ್ನು ಇನ್ಯಾವುದೋ ಯೋಜನೆಗಳ ಹೆಸರಲ್ಲಿ ರಾಜಕಾರಣಿಗಳು ಹಾಗು ಪ್ರಭಾವಿ ವ್ಯಕ್ತಿಗಳು ಲೂಟಿ ಮಾಡುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಅಂತಹದೇ ಲೂಟಿಯ ಪ್ರಯತ್ನವನ್ನು ಕೋವಿಡ್ ಪರಿಹಾರದ ಹೆಸರಲ್ಲಿ ಮಾಡಲಾಗುತ್ತದೆ ಎಂದು ಸಿಐಟಿಯು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಹಾಗು ಈ ಅಕ್ರಮ ಹಣದ ಲೂಟಿಯನ್ನು ಖಂಡಿಸುತ್ತದೆ. ಸಮರ್ಪಕ ತಣಿಕೆಯಾಗ ಬೇಕೆಂದು ಸಿಐಟಿಯು ಸಂಘಟನೆಯು ಒತ್ತಾಯಿಸಿದೆ.

ಆದರೆ ಕಾರ್ಮಿಕ ಸಚಿವರು ಕಟ್ಟಡ ಕಾರ್ಮಿಕ ಸಂಘಗಳು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಧಿಕ್ಕರಿಸಿ ಏಕಪಕ್ಷೀಯವಾಗಿ ಆಹಾರ ಕಿಟ್ ವಿತರಿಸುವ ನಿರ್ಧಾರ ಕೈಗೊಂಡಿದ್ದರು. ಈಗ ವಿತಸಲಾಗುತ್ತಿರುವ ಆಹಾರದ ಗುಣಮಟ್ಟ ಹಾಗೂ ಖರೀದಿಯಲ್ಲೂ ಹತ್ತಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರವಾಗಿರುವ ಸಾಧ್ಯತೆಗಳ ಎಂಬುದು ಬೆಳಕಿಗೆ ಬರುತ್ತಿವೆ.

ಈ ಹಿನ್ನೆಲೆಯಲ್ಲಿ ಕೊರೊನಾ ನೆಪದಲ್ಲಿ ಕಾರ್ಮಿಕರಿಗೆ ಆಹಾರ ಕಿಟ್ ವಿತರಿಸುವ ನೆಪದಲ್ಲಿ ಕಾರ್ಮಿಕ ಸಚಿವಾಲಯ ಹಾಗೂ ಕಲ್ಯಾಣ ಮಂಡಳಿಯಲ್ಲಿ ಈ ನಿರ್ಧಾರವನ್ನು ಕೂಡಲೇ ತನಿಖೆಗೆ ಒಳಪಡಿಸಬೇಕೆಂದು ಸಿಐಟಿಯು ಆಗ್ರಹಿಸಿದೆ.



ಬಳ್ಳಾರಿ ಗಣಿಗಾರಿಕೆ: ಪರಿಸರ ವಿನಾಶ–ಅದರ ಪುನಶ್ಚೇತನ



ಪ್ರೊ.ಟಿ.ಆರ್. ಚಂದ್ರಶೇಖರ್

ಸರ್ವೋಚ್ಚ ನ್ಯಾಯಾಲಯವು ಸಿಈಸಿ ವರದಿಯ ಆಧಾರದ ಮೇಲೆ ಕರ್ನಾಟಕದಲ್ಲಿ ಗಣಿಗಾರಿಕೆ ಪ್ರದೇಶದಲ್ಲಿ 'ಗಣಿಗಾರಿಕೆ ಪರಿಣಾಮದ ವಲಯದಲ್ಲಿ ಸಮಗ್ರ ಪರಿಸರ ಯೋಜನೆ'ಯಲ್ಲಿ ಪರಿಸರ ಪುನಶ್ಚೇತನಕ್ಕೆ ಅಮೂಲ್ಯವಾದ ಶಿಫಾರಸ್ಸು ನೀಡಿದೆ. ಪರಿಸರದ ಪುನಶ್ಚೇತನಕ್ಕೆ ಅಗತ್ಯವಾದ ಸಂಪನ್ಮೂಲವನ್ನು ಅಕ್ರಮದಲ್ಲಿ ತೊಡಗಿದ್ದ ಗಣಿಗಳಿಂದ ದಂಡದ ರೂಪದಲ್ಲಿ, ಪರಿಹಾರದ ರೂಪದಲ್ಲಿ, ವಶಪಡಿಸಿಕೊಂಡ ಅದಿರಿನ ಹರಾಜಿನಿಂದ ಬಂದ ಹಣ, ಗಣಿ ಕಂಪನಿಗಳಿಂದ ಪ್ರತಿ ಟನ್ ಅದಿರಿಗೆ ಇಷ್ಟು ಎಂದು ಶುಲ್ಕ ಮುಂತಾದ ರೀತಿಯಲ್ಲಿ ಸಂಪನ್ಮೂಲ ಸಂಗ್ರಹಿಸಲು ಸರ್ವೋಚ್ಚ ನ್ಯಾಯಾಲಯ ಶಿಫಾರಸ್ಸು ಮಾಡಿದೆ. ಇದರಂತೆ ಕರ್ನಾಟಕ ಸರ್ಕಾರವು 'ಸ್ಪೆಶನ್ ಪರ್ಪಸ್ ವೆಹಿಕಲ್' ರಚಿಸಿದೆ. ಇದರ ಅನುಷ್ಠಾನಕ್ಕೆ 'ಕನಾಟಕ ಮೈನಿಂಗ್ ಎನ್‌ವೈರ್‌ಮೆಂಟಲ್ ರೆಸ್ಟೋರೇಸನ್ ಕಾರ್ಪೋರೇಶನ್' ಎಂಬ ನೊಂದಾಯಿತ ಸಂಸ್ಥೆಯನ್ನು 2013ರಲ್ಲಿ ಸ್ಥಾಪಿಸಿದೆ. ಇತ್ತೀಚಿಗಿನ ವರದಿ ಪ್ರಕಾರ ಈ 'ಸ್ಪೆಶಲ್ ಪರ್ಪಸ್ ವೆಹಿಕಲ್' ನಲ್ಲಿರುವ ಹಣ ರೂ. 16,058 ಕೋಟಿ. ಇದರ ಅನುಷ್ಠಾನದಲ್ಲಿ ಸಾಕಷ್ಟು ವಿಳಂಬವಾಗಿದೆ. ಪರಿಸರ ಪುನಶ್ಚೇತನ ಕಾರ್ಯಕ್ರಮಕ್ಕೆ 2014ರಲ್ಲಿಯೇ ಅನುಮೋದನೆ ದೊರೆತ್ತಿದ್ದರೂ ಇದರ ಕೆಲಸ 2021ರಲ್ಲಿಯೂ ಆರಂಭವಾಗಿಲ್ಲ. ಈ ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನವು ಹೇಗೆ ನಡೆಯಬೇಕು ಎಂಬುದರ ಬಗ್ಗೆ ಕಳೆದ 6 ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಪರಿಸರ ಪುನಶ್ಚೇತನ ಕಾರ್ಯಕ್ರಮವು ಜನರ ಸಹಭಾಗಿತ್ವದಲ್ಲಿ ನಡೆಯುವಂತಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಇದರಲ್ಲಿ ಗಣಿ ಬಾಧಿತ ಪ್ರದೇಶದಲ್ಲಿನ ಜನರ ಮೂಲ ಅಗತ್ಯಗಳಿಗೆ ಆದ್ಯತೆ ಇರಬೇಕು. ಈ ಕಾರ್ಯಯೋಜನೆಯ ಅನುಷ್ಠಾನದಲ್ಲಿ ಗಣಿ ಬಾಧಿತ ಪ್ರದೇಶದ ಗ್ರಾಮ ಪಂಚಾಯತಿ ಸದಸ್ಯರ ಮೇಲ್ವಿಚರಣಾ ಸಮಿತಿಗಳನ್ನು ರಚಿಸಬೇಕು.

ಪಾಟೀಲ್ ಪುಟ್ಟಪ್ಪನವರು ಬಳ್ಳಾರಿ ಜಿಲ್ಲೆ ಕುರಿತು 'ಹಂಪಿ ಒಂದು ಪರಂಪರೆಯಾದರೆ ತುಂಗಭದ್ರಾ ಅಣೆಕಟ್ಟು ಒಂದು ಪ್ರಾರಬ್ಧ' ಎಂದು ಹೇಳುತ್ತಿದ್ದರು. ಆದರೆ ಈ ನಾಣ್ಣುಡಿಯನ್ನು ಇಂದು ಬಳ್ಳಾರಿ ಜಿಲ್ಲೆಗೆ 'ಹಂಪೆ ಒಂದು ಪರಂಪರೆಯಾದರೆ ಗಣಿಗಾರಿಕೆ ಒಂದು ಪ್ರಾರಬ್ಧ' ಎಂಬುದಾಗಿ ಬದಲಾಯಿಸಬೇಕಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ 2006 ರಿಂದ 2011ರವರೆಗೆ ನಡೆದ ಗಣಿ ಲೂಟಿಯ ವಿವರವನ್ನು ಕರ್ನಾಟಕ ಲೋಕಾಯುಕ್ತರ ವರದಿಗಳು (2008ರ ಮೊದಲನೆಯ ವರದಿ, 2012ರ ಎರಡನೆಯ ವರದಿ) ಬಹಿರಂಗ ಪಡಿಸಿವೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಲ್ಲಿ ಸಿ.ಈ.ಸಿ ನಡೆಸಿದ ತನಿಖೆಯಲ್ಲಿಯೂ ಇದರ ವಿವರಗಳಿವೆ. ಅಕ್ರಮ ಗಣಿಗಾರಿಕೆಯ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಪ್ರಕರಣ ದಾಖಲೆ ಮಾಡಿ ಗಣಿ ಲೂಟಿಯು ಬಹಿರಂಗವಾಗುವುದಕ್ಕೆ ಕಾರಣ ಕರ್ತರಾದ ಎಸ್. ಆರ್. ಹಿರೇಮಠ್ ಅವರ 'ಸಮಾಜ ಪರಿವರ್ತನ ಸಮುದಾಯ'ದಲ್ಲಿಯೂ ಇದರ ಬಗ್ಗೆ ದಾಖಲೆಗಳಿವೆ. 'ಇಂಡಿಯನ್ ಕೌನ್ಸಿಲ್ ಆಫ್ ಫಾರೆಸ್ಟ್ ರೀಸರ್ಚ್ ಅಂಡ್ ಎಜುಕೇಶನ್' ಸಂಸ್ಥೆಯು ಜಿಲ್ಲೆಯಲ್ಲಿ ನಡೆಸಿದ ಗಣಿಗಾರಿಕೆಯಿಂದ ಪರಿಸರದ ಮೇಲೆ ಉಂಟುಮಾಡಿರುವ ಪರಿಣಾಮದ ಮೌಲ್ಯಮಾಪನ ವರದಿಯಿದೆ. ಅಂತಾರಾಷ್ಟ್ರೀಯವಾಗಿ 'ಹ್ಯೂಮನ್ ರೈಟ್ಸ್ ವಾಚ್' ಸಂಸ್ಥೆಯೂ ಇದರ ಬಗ್ಗೆ ಒಂದು ವರದಿಯನ್ನು ಪ್ರಕಟಿಸಿದೆ. ಗಣಿಗಾರಿಕೆಗೆ ಬಳ್ಳಾರಿಯು ಹೆಸರುವಾಸಿಯಾಗಿತ್ತು. ಆದರೆ ಇಂದು ಗಣಿಗಾರಿಕೆಯು ಬಳ್ಳಾರಿ ಚರಿತ್ರೆಯಲ್ಲಿ ಒಂದು ಕಳಂಕದ ಅಧ್ಯಾಯವಾಗಿದೆ. ಗಣಿ ಧಣಿಗಳು ಇದನ್ನು 'ರಿಪಬ್ಲಿಕ್ ಆಫ್ ಬಳ್ಳಾರಿ'ಯನ್ನಾಗಿ ಮಾಡಿಬಿಟ್ಟರು.

ಈ ಅಕ್ರಮ ಗಣಿಗಾರಿಕೆ, ಪರಿಸರದ ಮೇಲಿನ ದುರಾಕ್ರಮಣ, ಕಾಯಿದೆಗಳ ಉಲ್ಲಂಘನೆ ಮುಂತಾದವುಗಳಿಗೆ ಗಣಿ ಧಣಿಗಳನ್ನು ಮಾತ್ರ ದೂರಿದರೆ ತಪ್ಪಾಗುತ್ತದೆ. ಏಕೆಂದರೆ ಅಕ್ರಮ ಗಣಿಗಾರಿಕೆಯು ಕರ್ನಾಟಕ ಸರ್ಕಾರದ ಬೆಂಬಲವಿಲ್ಲದೆ, ಸರ್ಕಾರಿ ಅಧಿಕಾರಿಗಳ ಶಾಮೀಲಿಲ್ಲದೆ ನಡೆದಿತ್ತು ಎಂದು ಭಾವಿಸುವುದು ಮೂರ್ಖತನವಾದೀತು. ಉದಾ: ಅಕ್ರಮ ಗಣಿಗಾರಿಕೆಯ ಎಲ್ಲ ವಿವರಗಳನ್ನು ಕರ್ನಾಟಕ ಲೋಕಾಯುಕ್ತರು 2008ರಲ್ಲಿ ನೀಡಿದ ತನಿಖಾ ವರದಿಯಲ್ಲಿ ಬಹುರಂಗ ಪಡಿಸಿದರು. ಆದರೆ 2008 ರಿಂದ 2011ರವರೆಗೆ ಹೇಗೆ ಅಕ್ರಮ ಗಣಿಗಾರಿಕೆ ಅತ್ಯಧಿಕ ರೀತಿಯಲ್ಲಿ ನಡೆಯಿತು? ಸರ್ಕಾರವು ಅಕ್ರಮ ಗಣಿಗಾರಿಕೆ ಮೇಲೆ ಯಾವುದೇ ಕಟ್ಟುನಿಟ್ಟಿನ ಕ್ರಮಗಳನ್ನು 2008ರ ನಂತರ ತೆಗೆದುಕೊಂಡಿಲ್ಲ ಎಂದು, 2008ರ ನಂತರ ಅಕ್ರಮ ಗಣಿಗಾರಿಕೆ ಹೆಚ್ಚಾಗಿದೆ ಎಂದು ಕರ್ನಾಟಕ ಲೋಕಾಯುಕ್ತರು ತಮ್ಮ 2011ರ ಎರಡನೆಯ ವರದಿಯಲ್ಲಿ ಹೇಳಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ 2006 ರಿಂದ 2011ರ ಅವಧಿಯಲ್ಲಿ ನಡೆದ ಗಣಿ ಲೂಟಿಗೆ ಹೋಲಿಸಬಹುದಾದ ಮತ್ತೊಂದು ಅಕ್ರಮ ಭಾರತದಲ್ಲಿ ನಮಗೆ ದೊರೆಯುವುದಿಲ್ಲ ಎನ್ನಲಾಗಿದೆ.

ಚಕ್ರಾಧಿಪತ್ಯ ಕಟ್ಟಲು ಹೊರಟ 'ರಿಪಬ್ಲಿಕ್ ಆಫ್ ಬಳ್ಳಾರಿ'ಯ ಅರಸರು ಇಂದು ಬಳ್ಳಾರಿ ಪ್ರವೇಶದ ಮೇಲೆ ನಿಷೇಧವನ್ನು ಎದುರಿಸುತ್ತಿದ್ದಾರೆ. ಸೆರೆಮನೆವಾಸ ಅನುಭವಿಸಿದರು. ರಿಪಬ್ಲಿಕ್ ಆಫ್ ಬಳ್ಳಾರಿ ಇಂದು ಭಣಗುಡುತ್ತಿದೆ. ಜಾಗನೂರ ಮಲ್ಲಿಕಾರ್ಜುನ ರೆಡ್ಡಿಯಂತಹ ಸಾಮಾಜಿಕ ಹೋರಾಟಗಾರರ ಪರಿಶ್ರಮದಿಂದಾಗಿ, ಚಕ್ರವರ್ತಿಗಳು ವಿಮಾನ ನಿಲ್ದಾಣಕ್ಕೆ ವಶಪಡಿಸಿಕೊಂಡ 1213 ಎಕರೆ ಜಮೀನು ನ್ಯಾಯಾಲಯದ ಕ್ರಮದಿಂದಾಗಿ ರೈತರ ವಶಕ್ಕೆ ವಾಪಸ್ಸಾಗಿದೆ. ಸಾಮಾನ್ಯ ಸನ್ನಿವೇಶದಲ್ಲಿ ಗಣಿಗಾರಿಕೆಯಿಂದ ಏನನ್ನು ಸಂಪಾದಿಸಬಹುದಿತ್ತೋ, ಅದರ 50–100 ಪಟ್ಟು ಸಂಪತ್ತನ್ನು ಕೇವಲ ಮೂರು ವರ್ಷಗಳಲ್ಲಿ ಗಣಿ ಧಣಿಗಳು ಗುಡ್ಡೆ ಹಾಕಿಕೊಂಡರು. ಜಿಲ್ಲೆಯಲ್ಲಿ ಕಬ್ಬಿಣ ಅದಿರಿನ ಉತ್ಪಾದನಾ ವೆಚ್ಚ ಪ್ರತಿ ಟನ್ನಿಗೆ ರೂ. 150 ರಿಂದ 190ರಷ್ಟಿತ್ತು. ಆದರೆ ಕಬ್ಬಿಣ ಅದಿರಿನ ಬೆಲೆಯು 2001–2 ರಲ್ಲಿ ಪ್ರತಿ ಟನ್ನಿಗೆ ರೂ. 184 ರಷ್ಟಿದ್ದುದು 2005–06ರಲ್ಲಿ ರೂ.2052 ರಷ್ಟಾಯಿತು. ಅಂದರೆ ಗಣಿ ಕಂಪನಿಗಳು ಎಷ್ಟು ಲಾಭ ಮಾಡಿಕೊಂಡಿರಬಹುದು ಎಂಬುದನ್ನು ಯಾರೂ ಊಹಿಸಿಕೊಳ್ಳಬಹುದು. ಲೋಕಾಯುಕ್ತರ ವರದಿಯ ಪ್ರಕಾರ 2006 ರಿಂದ 2010ರ ಅವಧಿಯಲ್ಲಿ ಕಬ್ಬಿಣ ಅದಿರಿನ ಅಕ್ರಮ ರಫ್ತುವಿನಿಂದ ರಾಜ್ಯ ಕಳೆದುಕೊಂಡ ಸಂಪತ್ತು ರೂ. 12,228 ಕೋಟಿ ಎಂದು ಅಂದಾಜು ಮಾಡಲಾಗಿದೆ. ಗಣಿ ಕಂಪನಿಗಳು ಗಣಿ ತ್ಯಾಜ್ಯವನ್ನು ಸುರಿಯಲು, ಅದಿರನ್ನು ಗುಡ್ಡೆ ಹಾಕಲು, ಗಣಿಗಳಿಗೆ ರಸ್ತೆ ನಿರ್ಮಿಸಲು – ಹೀಗೆ ಬೇರೆ ಬೇರೆ ಉದ್ದೇಶಗಳಿಗೆ ಒತ್ತುವರಿ–ಅತಿಕ್ರಮಣ ಮಾಡಿಕೊಂಡ ಜಮೀನು 2008ರಲ್ಲಿ 1114.08 ಹೆಕ್ಟೇರುಗಳಾಗಿದ್ದರೆ, 2011ರಲ್ಲಿ ಇದು 1723 ಹೆಕ್ಟೇರಿಗೇರಿದ್ದನ್ನು ಲೋಕಾಯುಕ್ತ ವರದಿ ಬಹಿರಂಗ ಪಡಿಸಿದೆ. ಲೋಕಾಯುಕ್ತದ ಅಧಿಕಾರಿಗಳು ನಡೆಸಿದ 166 ಗಣಿ ಗುತ್ತಿಗೆಗಳ ಸಮೀಕ್ಷೆಯಲ್ಲಿ 123 ಗಣಿ ಕಂಪನಿಗಳು (ಶೇ.74.09) ಅಕ್ರಮದಲ್ಲಿ ತೊಡಗಿದ್ದವು ಎಂಬುದನ್ನು ಬಹಿರಂಗವಾಗಿದೆ.

ಪರಿಸರಕ್ಕೆ ಸಂಬಂಧಿಸಿದ ಅಧ್ಯಯನಗಳು ದಾಖಲಿಸಿರುವಂತೆ ಗಣಿ ಪ್ರದೇಶದ ತಾಲ್ಲೂಕುಗಳಲ್ಲಿ ನೀರು ವಿಷಯುಕ್ತವಾಗಿದೆ, ಗಾಳಿ ವಿಷಪೂರಿತವಾಗಿದೆ, ಅದಿರಿನ ಸೂಕ್ಷ್ಮ (ಫೈನ್ಸ್) ಕಣಗಳ ಹುಡಿಯಿಂದ ಕೃಷಿ ಬೆಳೆಗಳು ನಾಶವಾಗಿವೆ, ಮರಗಿಡಗಳ ಎಲೆಗಳ ಮೇಲೆ ಅದಿರಿನ ಪುಡಿ ಕುಳಿತಿರುವುದರಿಮದ ಅವುಗಳ ಬೆಳವಣಿಗೆ ಕುಂಠಿತಗೊಂಡಿದೆ. ಭೂ ಮೇಲ್ಮೈ ತನ್ನ ರೂಪವನ್ನೇ ಕಳೆದುಕೊಂಡಿದೆ. ಗಣಿ ಪ್ರದೇಶದಲ್ಲಿ ಧ್ಯುತಿಸಂಶ್ಲೇಷಣ ಕ್ರಿಯೆಯೇ ನಡೆಯದಂತಾಗಿದೆ.

ಸಮಾಜ ಪರಿವರ್ತನ ಸಮುದಾಯದ ಪಾತ್ರ

ಈ ಎಲ್ಲ ಗಣಿ ಲೂಟಿ, ಪರಿಸರ ವಿನಾಶ, ಅಕ್ರಮ ಸಂಪತ್ತಿನ ಸಂಗ್ರಹ, ಚಕ್ರವರ್ತಿಗಳ ಅಟ್ಟಹಾಸ, ಅಧಿಕಾರಿಗಳ ನಿರ್ಲಕ್ಷ್ಯ ಮುಂತಾದವುಗಳೆಲ್ಲ ಬಹಿರಂಗವಾಗುವುದಕ್ಕೆ ಕಾರಣಕರ್ತರೆಂದರೆ ಸಮಾಜ ಪರಿವರ್ತನ ಸಮುದಾಯದ ಶ್ರೀ ಎಸ್. ಆರ್. ಹಿರೇಮಠ್. ಇವರು ವಿಸ್ತೃತ ಸಂಶೋಧನೆ ನಡೆಸಿ ಗಣಿ ಅಕ್ರಮಗಳ ದಾಖಲೆಗಳನ್ನು ಸಂಗ್ರಹಿಸಿ, ವೈಜ್ಞಾನಿಕವಾಗಿ 2009ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ದಾಖಲಿಸಿದ ಪರಿಣಾಮವಾಗಿ ಅಕ್ರಮಗಳ ಮಹಾ ಆಸ್ಫೋಟ ಹೊರಗೆ ಬಂತು. ಸರ್ವೋಚ್ಚ ನ್ಯಾಯಾಲಯವು ನೇಮಿಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿಯ ಎದುರಿಗೆ ಎಸ್. ಆರ್. ಹಿರೇಮಠ್ ವಾದ ಮಂಡಿಸಿದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಅವರನ್ನು ಪ್ರತಿನಿಧಿಸುತ್ತಿದ್ದ ಶ್ರೀ ಪ್ರಶಾಂತ್ ಭೂಷಣ್ ವಾದ ಮಂಡಿಸಿದರು. ಈ ಎಲ್ಲ ಬೆಳವಣಿಗೆ ಪರಿಣಾಮವಾಗಿ ಅಂದಿನ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕಾಯಿತು. ರಿಪಬ್ಲಿಕ್ ಆಫ್ ಬಳ್ಳಾರಿ ಚಕ್ರವರ್ತಿ ಜೈಲು ಸೇರುವಂತಾಯಿತು. ಗಣಿ ಅಕ್ರಮಗಳಿಗೆ ಕಡಿವಾಣ ಹಾಕಲು ಸರ್ವೋಚ್ಚ ನ್ಯಾಯಾಲಯವು ಅಕ್ರಮಗಳಲ್ಲಿ ತೊಡಗಿದ್ದ ಗಣಿ ಕಂಪನಿಗಳ ಮೇಲೆ ಗಣಿಗಾರಿಕೆ ನಿಷೇಧ ಹೇರಿತು. ಅಕ್ರಮಗಳಿಗೆ ದಂಡವನ್ನು ವಿಧಿಸಿತು. ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದವರಿಗೆ ಶಿಕ್ಷೆಯಾಗಿದ್ದರೆ, ಗಣಿ ಅಕ್ರಮಗಳಿಗೆ ತಡೆ ಬಿದ್ದಿದ್ದರೆ ಅದರ ಕೀರ್ತಿ ಶ್ರೀ ಎಸ್.ಆರ್. ಹಿರೇಮಠ್ ಅವರಿಗೆ ಮತ್ತು ಅವರು ಸ್ಥಾಪಿಸಿರುವ ಸಮಾಜ ಪರಿವರ್ತನ ಸಮುದಾಯಕ್ಕೆ ಸಲ್ಲಬೇಕು.

ವಿನಾಶವಾದ ಗಣಿ ಪ್ರದೇಶದಲ್ಲಿನ ಪರಿಸರದ ಪುನಶ್ಚೇತನ

ಹೇಳಿಕೇಳಿ ಬಳ್ಳಾರಿ ಜಿಲ್ಲೆಯು ಆರ್ಥಿಕವಾಗಿ ಶ್ರೀಮಂತವಾದ ಸಾಮಾಜಿಕವಾಗಿ ಮತ್ತು ಮಾನವ ಅಭಿವೃದ್ಧಿಯಲ್ಲಿ ತೀವ್ರ ದುಸ್ಥಿತಿಯಲ್ಲಿರುವ ಜಿಲ್ಲೆಯಾಗಿದೆ. ಉದಾ. ತಲಾ ವರಮಾನದಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯು 2020–2021ರಲ್ಲಿ ಬಳ್ಳಾರಿ ಜಿಲ್ಲೆಯ ಸ್ಥಾನ 12. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಇದರ ಸ್ಥಾನ 26(2012). ಅದೇ ರೀತಿಯಲ್ಲಿ ಸಾಕ್ಷರತೆಯಲ್ಲಿ ಜಿಲ್ಲೆಯ ಸ್ಥಾನ 24.(2011). ಲಿಂಗಸಂಬಂಧಿ ಅಸಮಾನತೆ ಸೂಚ್ಯಂಕದಲ್ಲಿ ಇದರ ಸ್ಥಾನ 29. ಜನರ ಆರೋಗ್ಯ ಮತ್ತು ಶಿಕ್ಷಣದ ಸ್ಥಿತಿಗತಿಯ ಅತ್ಯಂತ ಹೀನಾಯವಾಗಿದೆ. ಈ ಹಿನ್ನೆಲೆಯಲ್ಲಿ ಅಕ್ರಮ ಗಣಗಾರಿಕೆಯ ಬ್ರಹ್ಮರಾಕ್ಷಸ ಸ್ವರೂಪಿ ಆಸ್ಫೋಟವನ್ನು ನೋಡಿದಾಗ ಜನರ ಬದುಕು ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿರುವುದು ಸ್ಪಷ್ಟವಾಗುತ್ತದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 (2019–2020)ರ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ 6 ರಿಂದ 59 ತಿಂಗಳು ವಯೋಮಾನದ ಒಟ್ಟು ಮಕ್ಕಳಲ್ಲಿ ಅನಿಮಿಯ ಎದುರಿಸುತ್ತಿರುವ ಮಕ್ಕಳ ಪ್ರಮಾಣ ಶೇ. 67.5. ಮತ್ತು 15 ರಿಂದ 49 ವರ್ಷಗಳ ವಯೋಮಾನದ ಒಟ್ಟು ಮಹಿಳೆಯರಲ್ಲಿ ಅನಿಮಿಯ ಎದುರಿಸುತ್ತಿರುವ ಮಹಿಳೆಯರ ಪ್ರಮಾಣ 2015–16ರಲ್ಲಿ ಶೇ. 49.9 ರಷ್ಟಿದ್ದುದು 2019–2020ರಲ್ಲಿ ಇದು ಶೇ,. 58.10ಕ್ಕೇರಿದೆ.

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯು ಪರಿಸರದ ಮೇಲೆ ಉಂಟು ಮಾಡಿರುವ ಪರಿಣಾಮಗಳ ಮೌಲ್ಯಮಾಪನವನ್ನು ಇಂಡಿಯನ್ ಕೌನ್ಸಿಲ್ ಫಾರ್ ಫಾರೆಸ್ಟ್ ರೀಸರ್ಚ್ ಅಂಡ್ ಎಡುಕೇಶನ್ ನಡೆಸಿತು. ಇದರ ಪ್ರಕಾರ ಪರಿಸರಕ್ಕೆ ಸಂಬಂಧಿಸಿದ ಯಾವುದೇ ಸಂರಕ್ಷಣಾ ಮಾರ್ಗಸೂಚಿಗಳನ್ನಾಗಲಿ, ಮಾನದಂಡಗಳನ್ನಾಗಲಿ ಗಣಿಕಂಪನಿಗಳು ಅನುಸರಿಸಿಲ್ಲ. ಮೇಲ್ಮೈ ಮತ್ತು ಅಂತರ್ ಜಲದ ಗುಣಮಟ್ಟ ಕುಸಿದಿದೆ. ಸಸ್‌ಪೆಂಡೆಡ್ ಪಾರ್ಟಿಕಲ್ ಮ್ಯಾಟರ್ ಮತ್ತು ರೆಸ್ಪಿರೇಟರಿ ಪಾರ್ಟಿಕಲ್ ಮ್ಯಾಟರ್ ಅಪಾಯಕಾರಿ ಮಟ್ಟವನ್ನು ಮೀರಿ ಏರಿಕೆಯಾಗಿದೆ.

ಸಮಾಜ ಪರಿವರ್ತನ ಸಮುದಾಯದ ವಿನಂತಿ ಮೇರೆಗೆ ಹೈದರಾಬಾದ್‌ನ ಸೆರೆನಾ ಫೌಂಡೇಶನ್ ಸಂಸ್ಥೆಯು ನಡೆಸಿದ ಅಧ್ಯಯನದ ಪ್ರಕಾರ, ಗಣಿಗಾರಿಕೆಯಿಂದ ಸಂಡೂರು ತಾಲ್ಲೂಕಿನ ಕೃಷಿಯಲ್ಲಿ ಉಂಟಾದ ನಷ್ಟ ವಾರ್ಷಿಕ ರೂ 200 ಕೋಟಿ. ಅಸ್ತಮಾ ರೋಗದ ಪ್ರಮಾಣ ಮಕ್ಕಳಲ್ಲಿ ಶೇ 25 ರಷ್ಟಿದ್ದರೆ ಒಟ್ಟು ಜನಸಂಖ್ಯೆಯಲ್ಲಿ ಶೇ. 20. ಹೀಗೆ ಅನೇಕ ಸಂಸ್ಥೆಗಳು ನಡೆಸಿದ ಅಧ್ಯಯನಗಳಿಂದ ಗಣಿ ಕಂಪನಿಗಳು ಪರಿಸರ ಸಂರಕ್ಷಣೆಯ ಯಾವುದೇ ನಿಯಮವನ್ನು ಪಾಲಿಸಿಲ್ಲ, ಗಣಿ ಪ್ರದೇಶದಲ್ಲಿನ ಜನರ ಆರೋಗ್ಯ ಹದಗೆಟ್ಟಿದೆ, ಕೃಷಿಯು ಅತ್ಯಧಿಕ ಹಾನಿಯನ್ನು ಅನುಭವಿಸಿದೆ. ಸೆರೆನಾ ಅಧ್ಯಯನದ ಪ್ರಕಾರ ಸರಾಸರಿ ಪ್ರತಿ ಕುಂಟುಂಬಕ್ಕೆ ಉಂಟಾದ ನಷ್ಟ ವಾರ್ಷಿಕ ರೂ. 50,000.

ಪರಿಸರ ಪುನಶ್ಚೇತನ ಮತ್ತು ಪುನರ್ವಸತಿ ಕಾರ್ಯಕ್ರಮ

ಸರ್ವೋಚ್ಚ ನ್ಯಾಯಾಲಯವು ಸಿಈಸಿ ವರದಿಯ ಆಧಾರದ ಮೇಲೆ ಕರ್ನಾಟಕದಲ್ಲಿ ಗಣಿಗಾರಿಕೆ ಪ್ರದೇಶದಲ್ಲಿ 'ಕಾಂಪ್ರಹೆನ್ಸಿವ್ ಎನ್‌ವೈರ್‌ಮೆಂಟಲ್ ಪ್ಲಾನ್ ಫಾರ್ ಮೈನಿಂಗ್ ಇಂಪ್ಯಾಕ್ಟ್ ಜೋನ್' (ಗಣಿಗಾರಿಕೆ ಪರಿಣಾಮದ ವಲಯದಲ್ಲಿ ಸಮಗ್ರ ಪರಿಸರ ಯೋಜನೆ) ಯಲ್ಲಿ ಪರಿಸರ ಪುನಶ್ಚೇತನಕ್ಕೆ ಅಮೂಲ್ಯವಾದ ಶಿಫಾರಸ್ಸು ನೀಡಿದೆ. ಪರಿಸರದ ಪುನಶ್ಚೇತನಕ್ಕೆ ಅಗತ್ಯವಾದ ಸಂಪನ್ಮೂಲವನ್ನು ಅಕ್ರಮದಲ್ಲಿ ತೊಡಗಿದ್ದ ಗಣಿಗಳಿಂದ ದಂಡದ ರೂಪದಲ್ಲಿ, ಪರಿಹಾರದ ರೂಪದಲ್ಲಿ, ವಶಪಡಿಸಿಕೊಂಡ ಅದಿರಿನ ಹರಾಜಿನಿಂದ ಬಂದ ಹಣ, ಗಣಿ ಕಂಪನಿಗಳಿಂದ ಪ್ರತಿ ಟನ್ ಅದಿರಿಗೆ ಇಷ್ಟು ಎಂದು ಶುಲ್ಕ ಮುಂತಾದ ರೀತಿಯಲ್ಲಿ ಸಂಪನ್ಮೂಲ ಸಂಗ್ರಹಿಸಲು ಸರ್ವೋಚ್ಚ ನ್ಯಾಯಾಲಯ ಶಿಫಾರಸ್ಸು ಮಾಡಿದೆ. ಇದರಂತೆ ಕರ್ನಾಟಕ ಸರ್ಕಾರವು 'ಸ್ಪೆಶನ್ ಪರ್ಪಸ್ ವೆಹಿಕಲ್' ರಚಿಸಿದೆ. ಇದರ ಅನುಷ್ಠಾನಕ್ಕೆ 'ಕನಾಟಕ ಮೈನಿಂಗ್ ಎನ್‌ವೈರ್‌ಮೆಂಟಲ್ ರೆಸ್ಟೋರೇಸನ್ ಕಾರ್ಪೋರೇಶನ್' ಎಂಬ ನೊಂದಾಯಿತ ಸಂಸ್ಥೆಯನ್ನು 2013ರಲ್ಲಿ ಸ್ಥಾಪಿಸಿದೆ. ಇತ್ತೀಚಿಗಿನ ವರದಿ ಪ್ರಕಾರ ಈ 'ಸ್ಪೆಶಲ್ ಪರ್ಪಸ್ ವೆಹಿಕಲ್' ನಲ್ಲಿರುವ ಹಣ ರೂ. 16,058 ಕೋಟಿ. ಇದರ ಅನುಷ್ಠಾನದಲ್ಲಿ ಸಾಕಷ್ಟು ವಿಳಂಬವಾಗಿದೆ. ಪರಿಸರ ಪುನಶ್ಚೇತನ ಕಾರ್ಯಕ್ರಮಕ್ಕೆ 2014ರಲ್ಲಿಯೇ ಅನುಮೋದನೆ ದೊರೆತ್ತಿದ್ದರೂ ಇದರ ಕೆಲಸ 2021ರಲ್ಲಿಯೂ ಆರಂಭವಾಗಿಲ್ಲ.

ಈ ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನವು ಹೇಗೆ ನಡೆಯಬೇಕು ಎಂಬುದರ ಬಗ್ಗೆ ಕಳೆದ

ಪುಟ 10 ಕ್ಕೆ



ಒಂದೆಡೆಯಲ್ಲಿ ಬೆಳವಣಿಗೆ ದರ ಕುಸಿಯುತ್ತಿದ್ದು, ಆರ್ಥಿಕ ಹಿಂಜರಿತದ ಪರಿಸ್ಥಿತಿ ಇರುವಾಗ, ದೇಶ ಹಣದುಬ್ಬರದ ಬಲೆಯಲ್ಲಿ ಸಿಲುಕಿಕೊಳ್ಳುತ್ತಿದೆ. ಇವೆಲ್ಲ ಈ ಸರ್ಕಾರದ್ದೇ ನೀತಿಗಳ ದುಷ್ಫಲ. ಮೇ 4ರಿಂದೀಚೆಗೆ ಇಂಧನಗಳ ಬೆಲೆ 24 ಸಲ ಏರಿಕೆಯಾಗಿದೆ. ಜೂನ್‌ನಲ್ಲಿ 22ರ ವರೆಗೆ 12 ಬಾರಿ ಏರಿಸಲಾಗಿದೆ. ಕೊವಿಡ್‌ನಂತಹ ಬಿಕ್ಕಟ್ಟಿನ ಸಮಯದಲ್ಲೂ ಬಿಜೆಪಿ ಸರ್ಕಾರಕ್ಕೆ ಕಾರ್ಪೊರೇಟ್ ವಲಯ ಮತ್ತು ಸೂಪರ್–ಶ್ರೀಮಂತರನ್ನು ಬೆಳೆಸುತ್ತಲೇ, ತನ್ನ ಆದಾಯ ಸಂಗ್ರಹಕ್ಕೆ ಜನರನ್ನು ಸುಲಿಗೆ ಮಾಡುವುದೇ ಬೇಕಾಗಿದೆ. ಇದರ ವಿರುದ್ಧ ಹೋರಾಟ, ತ್ವರಿತವಾಗಿ ಎಲ್ಲರಿಗೂ ಉಚಿತ ಲಸಿಕೆಗಾಗಿ ಹೋರಾಟ, ಉಚಿತ ಆಹಾರ ಕಿಟ್ ಸರಬರಾಜು, ಉದ್ಯೋಗ ಖಾತರಿ ಯೋಜನೆಗಳ ವಿಸ್ತರಣೆ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ತೆರಿಗೆಗಳ ಕಡಿತ ಸಹಿತ ಬೆಲೆಯೇರಿಕೆಗೆ ಕಡಿವಾಣಕ್ಕೆ ಕ್ರಮಗಳಗಾಗಿ ಹೋರಾಟ ಇವೆಲ್ಲ ಜೊತೆ ಜೊತೆಯಾಗಿ ಸಾಗುವುದು ಅಗತ್ಯ.

ಪ್ರಕಾಶ್ ಕಾರಟ್



ಜೀವಹಿಂಡುವ ಬೆಲೆಯೇರಿಕೆ

ಎರಡನೇ ಅಲೆಯ ವೇಳೆಯಲ್ಲಿ ಕೋವಿಡ್–19 ಮಹಾಸೋಂಕಿನಿಂದ ಉಂಟಾದ ಅಪಾರ ಸಾಮೂಹಿಕ ಸಂಕಟಗಳು ಹಾಗೂ ಸಾವುಗಳ ಪೀಡೆ ಮೋದಿ ಸರ್ಕಾರದ ನೀತಿಗಳಿಂದಾಗಿ ಇನ್ನಷ್ಟು ಪಟ್ಟು ಹೆಚ್ಚಾಗುತ್ತಿದೆ. ನಿರುದ್ಯೋಗ, ಆದಾಯ ಕುಸಿತ ಮತ್ತು ಹಸಿವಿನಿಂದ ಜನರು ಕಂಗಾಲಾಗಿದ್ದಾರೆ. ಈ ಎಲ್ಲವುಗಳ ಮೇಲೆ ಹೆಚ್ಚುತ್ತಿರುವ ಹಣದುಬ್ಬರ ಮತ್ತು ಅಗತ್ಯ ಸಾಮಗ್ರಿಗಳ ಬೆಲೆಯೇರಿಕೆಯ ಭಾರ ಜನರನ್ನು ನಜ್ಜುಗುಜ್ಜು ಗೊಳಿಸುತ್ತಿದೆ. ಇವೆಲ್ಲ ಸರ್ಕಾರದ ನೀತಿಗಳ ದುಷ್ಫಲ.

2021ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 2.2 ಕೋಟಿ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಮೇ ತಿಂಗಳಲ್ಲಿ ನಿರುದ್ಯೋಗ ದರ ಶೇಕಡ 12ಕ್ಕೆ ತಲುಪಿತು. (ಮೂಲ:ಸಿಎಂಐಇ). ಗೃಹ ಬಳಕೆಯ ಮಟ್ಟಗಳು ಹೊಸ ಪಾತಾಳಕ್ಕೆ ತಲುಪಿವೆ. ಉಚಿತ ಆಹಾರ ಕೇಂದ್ರಗಳ ಮುಂದಿನ ಉದ್ದವಾಗುತ್ತಿರುವ ಸರದಿ ಸಾಲುಗಳೇ ಹಸಿವಿನ ಪ್ರಮಾಣ ಹೆಚ್ಚಾಗುತ್ತಿರುವುದರ ದ್ಯೋತಕವಾಗಿದೆ.

ಇಂಥದ್ದೊಂದು ಸಮಯದಲ್ಲೇ ಕೇಂದ್ರ ಸರ್ಕಾರ ಜನತೆಯ ಮೇಲೆ ಕ್ರೂರ ಬೆಲೆಯೇರಿಕೆಯ ಭಾರವನ್ನು ಹೊರಿಸುತ್ತಿದೆ. ಡೀಸೆಲ್ ಮತ್ತು ಪೆಟ್ರೋಲ್‌ನ ಸತತ ಬೆಲೆಯೇರಿಕೆ ಪ್ರಸಕ್ತ ಹಣದುಬ್ಬರಕ್ಕೆ ಮುಖ್ಯ ಕಾರಣವಾಗಿದೆ. ಮೇ 4ರಿಂದೀಚೆಗೆ ಇಂಧನಗಳ ಬೆಲೆ 24 ಸಲ ಏರಿಕೆಯಾಗಿದೆ. ಜೂನ್‌ನಲ್ಲಿ 22ರ ವರೆಗೆ 12 ಬಾರಿ ಏರಿಸಲಾಗಿದೆ. ಏಳು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೆಟ್ರೋಲ್ 100 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದೆ. ಬೆಂಗಳೂರು, ಮುಂಬೈ, ಹೈದರಾಬಾದ್‌ನಂಥ ಮಹಾನಗರಗಳಲ್ಲಿ ನೂರರ ಗಡಿ ದಾಟಿದೆ.

ಪೆಟ್ರೋಲ್ ಉತ್ಪನ್ನಗಳ ಮೇಲೆ ಕೇಂದ್ರೀಯ ಅಬಕಾರಿ ಸುಂಕ ಮತ್ತು ಇತರ ತೆರಿಗೆಗಳಲ್ಲಿ ಭಾರಿ ಏರಿಕೆಯೇ ಈ ಬೆಲೆಯೇರಿಕೆಗೆ ಮುಖ್ಯ ಕಾರಣವಾಗಿದೆ. ಈ ತೆರಿಗೆಗಳ ಪಾಲೇ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಶೇಕಡ 55ರಿಂದ 58ರಷ್ಟಿದೆ. ಇದರ ಪರಿಣಾಮವಾಗಿ 2014–15ರಿಂದ ಸರ್ಕಾರಕ್ಕೆ ಪೆಟ್ರೋಲಿಯಂ ಉತ್ಪನ್ನಗಳಿಂದ ಆದಾಯದಲ್ಲಿ 138%ದಷ್ಟು ಅಪಾರ ಏರಿಕೆಯಾಗಿದೆ.

ಗಗನಕ್ಕೇರುತ್ತಿರುವ ಪೆಟ್ರೋಲ್, ಡೀಸೆಲ್ ಬೆಲೆಗಳು ಸಾರಿಗೆ ವೆಚ್ಚಗಳನ್ನು ಮತ್ತು ವಿವಿಧ ಲಾಗುವಾಡುಗಳ ವೆಚ್ಚಗಳನ್ನು ಏರಿಸಿದ್ದರಿಂದ ಅಗತ್ಯ ವಸ್ತುಗಳ ಬೆಲೆಗಳ ಮೇಲೆ ದುಷ್ಪರಿಣಾಮ ಬೀರಿವೆ.

ಒಂದೆಡೆಯಲ್ಲಿ ಬೆಳವಣಿಗೆ ದರ ಕುಸಿಯುತ್ತಿದ್ದು, ಆರ್ಥಿಕ ಹಿಂಜರಿತದ ಪರಿಸ್ಥಿತಿ ಇರುವಾಗ, ದೇಶ ಹಣದುಬ್ಬರದ ಬಲೆಯಲ್ಲಿ ಸಿಲುಕಿಕೊಳ್ಳುತ್ತಿದೆ. 2021 ಮೇ ಮಾಸದಲ್ಲಿ ಸಗಟು ಬೆಲೆ ಸೂಚ್ಯಂಕ ಹತ್ತಿರ ಹತ್ತಿರ ಶೇಕಡ 13ರಷ್ಟಿತ್ತು (12.94%). ಇದು 11 ವರ್ಷಗಳಲ್ಲೇ ಅತಿ ಹೆಚ್ಚಿನ ದರವಾಗಿದೆ. ಈ ಅವಧಿಯಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಶೇಕಡ 6.3ರಷ್ಟು ಏರಿಕೆಯಾಗಿದೆ. ಅಕ್ಕಿ, ಖಾದ್ಯ ತೈಲ, ಬೇಳೆ ಕಾಳುಗಳು, ತರಕಾರಿಗಳು ಮತ್ತು ಮೊಟ್ಟೆಯ ಬೆಲೆಗಳು ಗಗನಕ್ಕೇರಿವೆ. ಖಾದ್ಯ ತೈಲ ಬೆಲೆಗಳಲ್ಲಿ ಶೇಕಡ 60ರಷ್ಟು ಏರಿಕೆಯಾಗಿದೆ. ಪಂಪ್‌ಸೆಟ್ ಮತ್ತು ಟ್ರ್ಯಾಕ್ಟರ್‌ಗಳಿಗೆ ಬಳಸುವ ಡೀಸೆಲ್ ಬೆಲೆಯೇರಿಕೆಯಿಂದ ರೈತರು ಕಂಗಾಲಾಗಿದ್ದಾರೆ.

ಸಬ್ಸಿಡಿಯಲ್ಲಿ ಗಣನೀಯ ಕಡಿತ ಮಾಡಿರುವುದರಿಂದ ಅಡುಗೆ ಅನಿಲ ಬೆಲೆಯಲ್ಲಿ ಭಾರಿ ಏರಿಕೆಯಾಗಿದೆ. 2019–20ರಲ್ಲಿ ಅಡುಗೆ ಅನಿಲಕ್ಕೆ ನೀಡಿದ ನೇರ ನಗದು ಸಬ್ಸಿಡಿ ಮೊತ್ತ 22,635 ಕೋಟಿ ರೂಪಾಯಿ. 2021ರ ಫೆಬ್ರವರಿ ವರೆಗೆ ಅದು ಕೇವಲ 3,559 ಕೋಟಿ ರೂಪಾಯಿಗೆ ಇಳಿದಿದೆ. ಇದರ ಪರಿಣಾಮವಾಗಿ ಇಡೀ ಭಾರ ಗ್ರಾಹಕರ ಮೇಲೆ ಬಿದ್ದಿದೆ. ಬೆಲೆಯೇರಿಕೆ ನಿಯಂತ್ರಿಸಲು ಮೋದಿ ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ. ಅಡುಗೆ ಎಣ್ಣೆಗಳ ಸಹಿತ ಅನೇಕ ವಸ್ತುಗಳ ಬೆಲೆಗಳ ಮೇಲಿನ ನಿಯಂತ್ರಣ ತೆಗೆದು ಹಾಕುವ ಸಲುವಾಗಿ ಕೇಂದ್ರ ಸರ್ಕಾರ ಈಗಾಗಲೇ ಅಗತ್ಯ ವಸ್ತುಗಳ ಕಾನೂನನ್ನು ದುರ್ಬಲಗೊಳಿಸಿದೆ. ದೊಡ್ಡ ವರ್ತಕರ ಅಕ್ರಮ ದಾಸ್ತಾನು ಮತ್ತು ಸಟ್ಟಾಬಾಜಿ ವ್ಯವಹಾರಗಳಿಂದಾಗಿ ಅವರಿಗೆ ಅಡುಗೆ ಎಣ್ಣೆಯಿಂದ ಸೂಪರ್ ಲಾಭವಾಗುತ್ತಿದೆ. ಅಗತ್ಯ ವಸ್ತುಗಳ ಕಾನೂನು ತಿದ್ದುಪಡಿ ಮಾಡಿರುವುದರ ಜನ–ವಿರೋಧಿ ಅಂಶ ಇದರಿಂದ ಬಯಲಾಗಿದೆ. ಹೊಸ ಕೃಷಿ ಕಾನೂನುಗಳ ಜೊತೆಯಲ್ಲೇ ಈ ತಿದ್ದುಪಡಿಯನ್ನೂ ಮಾಡಲಾಗಿತ್ತು.

ತೆರಿಗೆಗಳನ್ನು ಇಳಿಸಿ ಇಂಧನ ಬೆಲೆಗಳನ್ನು ಇಳಿಸಲು ಸಾಧ್ಯವಿಲ್ಲ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್ ಇತ್ತೀಚೆಗೆ ಹೇಳಿದ್ದಾರೆ. ಆ ತೆರಿಗೆ ಹಣ ಕಲ್ಯಾಣ ಯೋಜನೆಗಳು ಮತ್ತು ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ಬೇಕು ಎಂದವರು ಹೇಳಿದ್ದಾರೆ. ಆದರೆ, ಕಾರ್ಪೊರೇಟ್ ತೆರಿಗೆಗಳನ್ನು ಕಡಿತ ಮಾಡುವ ಮೂಲಕ ಬೊಕ್ಕಸಕ್ಕೆ 1.45 ಲಕ್ಷ ಕೋಟಿ ರೂಪಾಯಿ ನಷ್ಟ ಮಾಡಿದ್ದು ಇದೇ ಸರ್ಕಾರ ಎನ್ನುವುದನ್ನು ಮರೆಯಬಾರದು. ಅಷ್ಟು ಮಾತ್ರವಲ್ಲದೆ ಕಾರ್ಪೊರೇಟ್ ಕಂಪೆನಿಗಳಿಗೆ ಬಹಳಷ್ಟು ರಿಯಾಯಿತಿ ಹಾಗೂ ವಿನಾಯಿತಿಗಳನ್ನೂ ಸರ್ಕಾರ ನೀಡಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕ ಮತ್ತು ಸೆಸ್‌ಗಳನ್ನು ತೆಗೆದು ಹಾಕುವುದರಿಂದ ಆಗುವ ಯಾವುದೇ ನಷ್ಟವನ್ನು ಕಾರ್ಪೊರೇಟ್ ತೆರಿಗೆ ದರವನ್ನು 2019ರ ಪೂರ್ವದ ದರಕ್ಕೆ ಮತ್ತೆ ತರುವ ಮೂಲಕ ಸರಿಹೊಂದಿಸಬಹುದು. ಸೂಪರ್–ಶ್ರೀಮಂತ ಜನರ ಮೇಲೆ ಸಂಪತ್ತು ತೆರಿಗೆ ಹೇರಿದರೆ ಸಾಕಷ್ಟು ಆದಾಯ ಸಂಗ್ರಹವಾಗುತ್ತದೆ ಎನ್ನುವುದನ್ನು ಗಮನಿಸಬೇಕು.

ಆದರೆ ಬಿಜೆಪಿ ಸರ್ಕಾರಕ್ಕೆ ಕಾರ್ಪೊರೇಟ್ ವಲಯ ಮತ್ತು ಸೂಪರ್–ಶ್ರೀಮಂತರನ್ನು ಬೆಳೆಸುವುದು ಹಾಗೂ ಬಿಕ್ಕಟ್ಟಿನ ಸಮಯದಲ್ಲಿ ಆದಾಯ ಸಂಗ್ರಹಕ್ಕೆ ಜನರನ್ನು ಸುಲಿಗೆ ಮಾಡುವುದೇ ಬೇಕಾಗಿದೆ. ಬೆಲೆಯೇರಿಕೆಯ ಮೂಲಕ ಜನರ ಮೇಲೆ ಹೊರಿಸಿರುವ ಅಸಹನೀಯ ಹೊರೆಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಎಡ ಪಕ್ಷಗಳು ಜೂನ್ 16ರಿಂದ 30ರ ವರೆಗೆ ದೇಶದಾದ್ಯಂತ ಬೆಲೆಯೇರಿಕೆ ವಿರುದ್ಧ ಆಂದೋಲನ ನಡೆಸುತ್ತಿವೆ. ಹಣದುಬ್ಬರ ತಡೆಯಲು ಕ್ರಮಗಳನ್ನು ಕೈಗೊಳ್ಳುವಂತೆ ಅವು ಒತ್ತಾಯಿಸಿವೆ.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಕೇಂದ್ರೀಯ ಅಬಕಾರಿ ಸುಂಕ ಮತ್ತು ಇತರ ತೆರಿಗೆಗಳ ಕಡಿತ, ಅಡುಗೆ ಅನಿಲದ ಸಬ್ಸಿಡಿ ಮರುಸ್ಥಾಪನೆ, ಅಗತ್ಯ ವಸ್ತುಗಳ ಕಾನೂನು ಬಳಕೆ ಹಾಗೂ ಖಾದ್ಯ ತೈಲದ ಸಟ್ಟಾಬಾಜಿ ವ್ಯವಹಾರ ನಡೆಸುವವರ ವಿರುದ್ಧ ಕಠಿಣ ಕ್ರಮದ ಮೂಲಕ ಬೆಲೆ ನಿಯಂತ್ರಣಕ್ಕೆ ಕ್ರಮ ಇವು ಎಡ ಪಕ್ಷಗಳ ಬೇಡಿಕೆಯಾಗಿವೆ. ಬೇಳೆ ಕಾಳುಗಳು, ಅಡುಗೆ ಎಣ್ಣೆ, ಸಕ್ಕರೆ, ಚಹಾ ಪುಡಿ ಸಹಿತ ಆಹಾರ ಕಿಟ್ ಒಳಗೊಂಡಂತೆ ಎಲ್ಲರಿಗೂ 10 ಕೆಜಿ ಉಚಿತ ಆಹಾರ ಧಾನ್ಯ ಪೂರೈಕೆ, ಆದಾಯ ತೆರಿಗೆ ವ್ಯಾಪ್ತಿಗೆ ಬರದ ಕುಟುಂಬಗಳಿಗೆ ಆರು ತಿಂಗಳ ಕಾಲ ಮಾಸಿಕ 7,500 ರೂಪಾಯಿ ನೇರ ವರ್ಗಾವಣೆ ಮೊದಲಾದವೂ ಆಂದೋಲನದ ಇತರ ಪ್ರಮುಖ ಬೇಡಿಕೆಗಳಾಗಿವೆ.

ತ್ವರಿತವಾಗಿ ಎಲ್ಲರಿಗೂ ಉಚಿತ ಲಸಿಕೆಗಾಗಿ ಹೋರಾಟ, ಉಚಿತ ಆಹಾರ ಕಿಟ್ ಸರಬರಾಜು, ಉದ್ಯೋಗ ಖಾತರಿ ಯೋಜನೆಗಳ ವಿಸ್ತರಣೆ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ತೆರಿಗೆಗಳ ಕಡಿತ ಸಹಿತ ಬೆಲೆಯೇರಿಕೆಗೆ ಕಡಿವಾಣಕ್ಕೆ ಕ್ರಮಗಳಿಗಾಗಿ ಹೋರಾಟ ಇವೆಲ್ಲ ಜೊತೆ ಜೊತೆಯಾಗಿ ಸಾಗುವುದು ಅಗತ್ಯ.

ಅನು: ವಿಶ್ವ



ಅತ್ಯುತ್ತಮ ಅಂಶವೆಮದರೆ ಒಂದು ಶಬ್ದವನ್ನೂ ಅವನು ಉಸುರಲಾರ. “ಅವನು ಧೈರ್ಯ ಮಾಡಿದರೆ ಅವನನ್ನು ದೇಶ–ವಿರೋಧಿ ಎನ್ನೋಣ” ವ್ಯಂಗ್ಯಚಿತ್ರ: ಮಜುಲ್, ಫಸ್ಟ್‌ಪೋಸ್ಟ್



ಬೆಲೆಯೇರಿಕೆಗಳ ಬಾಣಲೆಯಲ್ಲಿ

“ವಿಕಾಸ ಮಂತ್ರದ ಉಚ್ಚಾರಣೆ ಮಾಡುತ್ತಾ ಇರು, ನೋವು ಅನಿಸುವುದೇ ಇಲ್ಲ!

ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ನ್ಯುಸ್‌ಸ್ಟಿಂಗ್

ಅಬಕಾರಿ ಸುಂಕ ಏರಿಕೆಗಳ ಪರಿಣಾಮವಾಗಿ 2014–15ರಿಂದ ಸರ್ಕಾರಕ್ಕೆ ಪೆಟ್ರೋಲಿಯಂ ಉತ್ಪನ್ನಗಳಿಂದ ಆದಾಯದಲ್ಲಿ 138% ದಷ್ಟು ಅಪಾರ ಏರಿಕೆಯಾಗಿದೆ. 2021ರ ಫೆಬ್ರವರಿ ವರೆಗೆ ಅಡುಗೆ ಅನಿಲ ಸಬ್ಸಿಡಿ ಇಳಿಕೆಯಿಂದಾಗಿ ಸಬ್ಸಿಡಿ ಮೊತ್ತ ರೂ. 22,635 ಕೋಟಿಯಿಂದ ರೂ.3559ಕ್ಕೆ ಇಳಿದಿದೆ.




ನೋಡು, ಎಷ್ಟೊಂದು ಸುಲಭ!
ವ್ಯಂಗ್ಯಚಿತ್ರ” ಸುರೇಂದ್ರನ್, ದಿ ಹಿಂದು

ಶ್ರಮ ಜೀವಿಗಳು ತುರ್ತು ಪರಿಸ್ಥಿತಿಯ ಅನುಭವಗಳಿಂದ ಪಾಠ ಕಲಿಯುವುದು ಅವಶ್ಯ: ವಿ.ಜೆ.ಕೆ. ನಾಯರ್


ಕಾಂ. ಸೂರಿ


ಕಾಂ. ಜಗನ್ನಾಥ


ಕಾಂ. ವಿಜೆಕೆ ನಾಯರ್

ಜೂನ್ 25, 1975 ರಿಂದ ಮಾರ್ಚ್ 21, 1977 ರವರೆಗೆ, 21 ತಿಂಗಳುಗಳ ಕಾಲದಲ್ಲಿ, ನಮ್ಮ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಲಾಗಿತ್ತು. ದೇಶಾದ್ಯಂತ ಸುಮಾರು ಒಂದು ಲಕ್ಷಕ್ಕಿಂತಲೂ ಹೆಚ್ಚು ಮಂದಿಯನ್ನು ಸೆರೆಮನೆಗೆ ತಳ್ಳಲಾಗಿತ್ತು. ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ ವಿರುದ್ಧ ಪಾರ್ಲಿಮೆಂಟಿನಲ್ಲಿ ಸಿಪಿಐ(ಎಂ) ಮುಖಂಡರಾಗಿದ್ದ ಎ.ಕೆ. ಗೋಪಾಲನ್ ಮಾಡಿದ ಭಾಷಣ ಮುದ್ರಿಸಿದ್ದಕ್ಕೆ ಕಾಂ. ವಿ.ಜೆ.ಕೆ. ನಾಯರ್ ಹಾಗೂ ಇಂದಿರಾ ಗಾಂಧಿಯವರಿಗೆ ಆಪ್ತರಾಗಿದ್ದ ಮಾಜಿ ಚಲನಚಿತ್ರ ತಾರೆ ದೇವಿಕಾ ರಾಣಿಯವರ ಒಡೆತನದ ತಾತಗುಣಿ ಎಸ್ಟೇಟಿನ ಕಾರ್ಮಿಕರ ಹೀನಾಯ ಶೋಷಣೆಯ ವಿರುದ್ಧ ಹೋರಾಟ ಮಾಡಿದ ಕಾರಣಕ್ಕಾಗಿ ಕರ್ನಾಟಕದ ಪ್ರಮುಖ ಕಾರ್ಮಿಕ ಮುಖಂಡರಾಗಿದ್ದ ಕಾಂ. ಸೂರ್ಯನಾರಾಯಣ ರಾವ್ ಮತ್ತು ಕಾಂ. ಪಿ.ಜಗನ್ನಾಥ ತುರ್ತುಪರಿಸ್ಥಿತಿಯಲ್ಲಿ ಜೈಲು ವಾಸ ಅನುಭವಿಸಿದವರು. ತುರ್ತುಪರಿಸ್ಥಿತಿ ಹೇರಿಕೆಯ 40ನೇ ವರ್ಷದ ಸಂದರ್ಭದಲ್ಲಿ (2015ರಲ್ಲಿ) ಮಾಡಿದ ಕಾಂ.ವಿಜೆಕೆ ಯವರ ಸಂದರ್ಶನವನ್ನು ಮತ್ತೆ ಪ್ರಕಟಿಸುತ್ತಿದ್ದೇವೆ. ಕಳೆದ ಹಲವು ವರ್ಷಗಳಿಂದ ಅಘೋಷಿತ ತುರ್ತು ಪರಿಸ್ಥಿತಿ ಇದ್ದು, 1975–77ರ ತುರ್ತು ಪರಿಸ್ಥಿತಿ ಕುರಿತು (ಅದಕ್ಕೆ ಕಾರಣವಾದ ವಿದ್ಯಮಾನಗಳು, ಅದರ ಪರಿಣಾಮಗಳು, ಅದನ್ನು ಕೊನೆಗೊಂಡ ರೀತಿ ಇತ್ಯಾದಿ) ತಿಳಿದುಕೊಳ್ಳುವುದು ಇಂದು ಅಷ್ಟೇ ಅಥವಾ ಇನ್ನೂ ಹೆಚ್ಚು ಪ್ರಸ್ತುತವಾಗಿದೆ. ನಾಗರಿಕ ಹಕ್ಕುಗಳ ಹರಣ; ಪಾರ್ಲಿಮೆಂಟು, ಕೋರ್ಟುಗಳು, ಆಡಳಿತ, ಚುನಾವಣಾ ಕಮಿಶನ್, ಸಿಬಿಐ, ಇಡಿ, ವಿಜಿಲೆನ್ಸ್ ಕಮಿಶನ್, ಮಾಹಿತಿ ಕಮಿಶನ್ ಮುಂತಾದ ಸಂವಿಧಾನಿಕ ಸಂಸ್ಥೆಗಳು ತಮ್ಮ ಸಂವಿಧಾನ–ಬದ್ಧ ಕರ್ತವ್ಯಗಳನ್ನು ಮರೆತು ಸರಕಾರದ ಸಂವಿಧಾನ–ವಿರೋಧಿ ಸರಣಿ ಕ್ರಮಗಳಿಗೆ ಬೆಂಬಲಿಸುತ್ತಿರುವುದು; ಮಾಧ್ಯಮಗಳು, ಬುದ್ಧಿಜೀವಿಗಳು, ನಾಗರಿಕ ಸಮಾಜ ಸಹ ಇದಕ್ಕೆ ಪರಿಣಾಮ ಪ್ರತಿರೋಧ ಒಡ್ಡಲಾರದ ಪರಿಸ್ಥಿತಿ ಇರುವುದು – ಇಂದು ಸಹ 1975–77ರ ಘೋಷಿತ ತುರ್ತು ಪರಿಸ್ಥಿತಿಯಷ್ಟೇ ಅಥವಾ ಇನ್ನೂ ಹೆಚ್ಚು ಗಂಭೀರ ಪ್ರಮಾಣದಲ್ಲಿದೆ.

ಜನಶಕ್ತಿ : ಜೂನ್ 25, 1975 ರಂದು ತುರ್ತುಪರಿಸ್ಥಿತಿ ಘೋಷಣೆಯಾದಾಗ ನಿಮಗೆ ಅನಿಸಿದ್ದೇನು?

ವಿಜೆಕೆ ನಾಯರ್: ತುರ್ತುಪರಿಸ್ಥಿತಿ ಘೋಷಣೆಯಾಗುವ ಕೆಲವು ಗಂಟೆಗಳ ಮುನ್ನ, ಪಾರ್ಲಿಮೆಂಟಿನಲ್ಲಿ ಸಿಪಿಐ(ಎಂ) ಉಪ ನಾಯಕರಾಗಿದ್ದ ಕಾಂ. ಜ್ಯೋತಿರ್ಮಯಿ ಬಸು ಅವರ ಭಾಷಣದ ಒಂದು ಸಾರ್ವಜನಿಕ ಸಭೆಯನ್ನು ಆ ದಿನ ಸಂಜೆ ಬೆಂಗಳೂರಿನ ಚಿಕ್ಕಲಾಲ್ಬಾಗ್ನಲ್ಲಿ ಏರ್ಪಡಿಸಿದ್ದೆವು. ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಕಾಂ. ಬಸುರವರು ಕೇಂದ್ರ ಸರ್ಕಾರವು ಒಂದು ರೀತಿಯ ದಬ್ಬಾಳಿಕೆಯ ಆಡಳಿತ ಹೇರುವ ಸನ್ನಾಹದಲ್ಲಿದೆಯೆಂದು ಎಚ್ಚರಿಸಿದ್ದರು. ಕಾಂ. ಇ.ಎಂ. ಎಸ್ ನಂಬೂದಿರಿಪ್ಪಾಡ್ ಅವರು ಫ್ಯಾಸಿಸ್ಟ್ ಅಪಾಯದ ಬಗ್ಗೆ ಬರೆದ ಸರದಿ ಲೇಖನಗಳು ಮಲೆಯಾಳಂ ದಿನಪತ್ರಿಕೆಗಳಲ್ಲಿ ಜೂನ್ ಮೊದಲ ವಾರದಲ್ಲಿ ಪ್ರಕಟವಾಗಿದ್ದವು. ಅದನ್ನು ಇಂಗ್ಲೀಷಿಗೆ ಭಾಷಾಂತರಿಸಿ ನಾವು ಅದಾಗಲೆ ಹಂಚಿದ್ದೆವು.

ತುರ್ತುಪರಿಸ್ಥಿತಿ ಘೋಷಣೆಯಾಗಿರುವುದು ನಮಗೆ ಜೂನ್ 26ರ ಬೆಳಗ್ಗೆ ತಿಳಿಯಿತು. ನಾವು ಮೈಸೂರ್ ಬ್ಯಾಂಕ್ ವೃತ್ತದ ಬಳಿ ಸೇರಿ, ಅಲ್ಲಿಂದ ಒಂದು ಪ್ರತಿಭಟನಾ ರ್ಯಾಲಿಯಲ್ಲಿ ಮಹಾತ್ಮಾ ಗಾಂಧಿ ರಸ್ತೆಗೆ ತೆರಳಿ ನಡೆಸಿದ ಸಭೆಯಲ್ಲಿ, ಹಿಂದಿನ ದಿನ ಬೆಂಗಳೂರಿಗೆ ಆಗಮಿಸಿದ್ದ ವಿರೋಧ ಪಕ್ಷದ ಪಾರ್ಲಿಮೆಂಟ್ ಸದಸ್ಯರ ಬಂಧನವನ್ನು ಖಂಡಿಸಿದೆವು.

ಜನಶಕ್ತಿ : ಈ ಆಂತರಿಕ ತುರ್ತುಪರಿಸ್ಥಿತಿ ಹೇರಲು ಮುಖ್ಯವಾದ ಕಾರಣಗಳೇನು?

ವಿಜೆಕೆ: ಆಂತರಿಕ ತುರ್ತುಪರಿಸ್ಥಿತಿ ಹೇರಲು ಮುಖ್ಯವಾದ ಕಾರಣವೆಂದರೆ, ಜನರು ಮೂಲಭೂತ ಹಕ್ಕುಗಳನ್ನು ಚಲಾಯಿಸದಂತೆ ಅವುಗಳನ್ನು ಅಮಾನತ್ತಿನಲ್ಲಿಡುವುದು, ವಿರೋಧ ಪಕ್ಷದವರ ಬಾಯಿಗೆ ಬೀಗ ಜಡಿಯುವುದು, ಪ್ರಜಾಪ್ರಭುತ್ವ ಹಕ್ಕುಗಳಡಿಯಲ್ಲಿ ಪ್ರಕಟವಾಗುವ ಪ್ರತಿಭಟನೆಗಳನ್ನು ಹತ್ತಿಕ್ಕುವುದು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರ ಲೋಕಸಭಾ ಸದಸ್ಯತ್ವವನ್ನು ಅಲಹಾಬಾದ್ ಹೈಕೋರ್ಟ್ ಅನೂರ್ಜಿತಗೊಳಿಸಿದ್ದುದನ್ನು ಧಿಕ್ಕರಿಸಿ ಅವರೇ ಅಧಿಕಾರದಲ್ಲಿ ಮುಂದುವರಿಯುವುದು ಮತ್ತು ಅದಕ್ಕಾಗಿ ಪಾರ್ಲಿಮೆಂಟಿನ ಅವಧಿಯನ್ನು ಒಂದು ವರ್ಷಕಾಲ ವಿಸ್ತರಿಸುವುದು ಇತ್ಯಾದಿ. ವಾಕ್ ಸ್ವಾತಂತ್ರ್ಯದ ಹಕ್ಕನ್ನು ಅಮಾನತಿನಲ್ಲಿಟ್ಟ ಕಾರಣದಿಂದಾಗಿ ಪತ್ರಿಕೆಗಳ ಮೇಲೆ ಹತೋಟಿ ಸಾಧಿಸಿ, ಆ ಮೂಲಕ, ಆಂತರಿಕ ಭದ್ರತೆ ಕಾಯ್ದೆಯಡಿಯಲ್ಲಿ ವಿರೋಧ ಪಕ್ಷದ ನಾಯಕರನ್ನು ಬಂಧಿಸುವುದನ್ನು ಒಂದು ಸಾಮಾನ್ಯ ಘಟನೆಯಂತೆ ಪರಿಗಣಿಸುವುದೇ ಆಗಿತ್ತು.

ಜನಶಕ್ತಿ : ನಿಮ್ಮನ್ನು ಬಂಧಿಸಲು ಕಾರಣವೇನು? ಮತ್ತು ನಿಮ್ಮ ಜೈಲು ವಾಸದ ಅನುಭವಗಳೇನು?

ವಿಜೆಕೆ: ಸಿಪಿಐ(ಎಂ) ಪಕ್ಷದ ಎಂ.ಪಿ. ಕಾಂ. ಎ.ಕೆ. ಗೋಪಾಲನ್ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದ ಕನ್ನಡ ಅನುವಾದದ ಪ್ರತಿಗಳನ್ನು ಮುದ್ರಣ ಮಾಡಿಸುವ ಸಂದರ್ಭದಲ್ಲಿ, ಪ್ರಿಂಟಿಂಗ್ ಪ್ರೆಸ್ ನ ಮಾಲೀಕನನ್ನು ಪೋಲೀಸರು ಹಿಡಿದು ಆತನನ್ನು ನನ್ನ ಮನೆಗೆ ಕರೆತಂದು, (ಆಗ ಪಕ್ಷದ ಕಛೇರಿ ನನ್ನ ಮನೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು) ನನ್ನನ್ನು ಆಗಸ್ಟ್ 1975 ರಲ್ಲಿ ಭಾರತದ ರಕ್ಷಣೆಯ ಕಾಯ್ದೆಯಡಿಯಲ್ಲಿ ಬಂಧಿಸಿ, ಮಾಜಿಸ್ಟ್ರೇಟ್ ಕೋರ್ಟ್ ಆದೇಶದ ಮೇಲೆ ಅಕ್ಟೋಬರ್ 1976 ರಲ್ಲಿ ಜೈಲಿನಲ್ಲಿದ್ದ ನನ್ನನ್ನು ಬಿಡುಗಡೆ ಮಾಡಲಾಯಿತು. ಹಿರಿಯ ನ್ಯಾಯವಾದಿ ಕೆ. ಸುಬ್ಬಾರಾವ್ ಮತ್ತು ಆಗ ಅವರ ಕಿರಿಯ ಸಹೋದ್ಯೋಗಿಯಾಗಿದ್ದ ವಿ.ಗೋಪಾಲ ಗೌಡ (ಅವರು ಆನಂತರ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದರು) ನನ್ನ ಪರವಾಗಿ ಕೋರ್ಟಿನಲ್ಲಿ ವಕಾಲತ್ತು ನಡೆಸಿದ್ದರು. ತನ್ನ ಭಾಷಣವನ್ನು ಪ್ರಕಟಿಸುವ ಹಕ್ಕು ಮತ್ತು ಸವಲತ್ತು ಒಬ್ಬ ಪಾಲಿಮೆಂಟ್ ಸದಸ್ಯನಿಗೆ ಇದೆ. ಅದು ಮೊಟಕಾಗಿಲ್ಲ ಎಂಬ ನಮ್ಮ ವಕೀಲರ ವಾದವನ್ನು ಕೋರ್ಟ್ ಒಪ್ಪಿ ನನ್ನನ್ನು ಬಿಡುಗಡೆ ಮಾಡಿತು. 1976 ರಲ್ಲಿ ವಿ.ವಿ. ಪುರಂ ಲಾ ಕಾಲೇಜಿನಲ್ಲಿ ಪೋಲೀಸ್ ಬೆಂಗಾವಲಿನಲ್ಲಿ ನನ್ನ ಎರಡನೆ ವರ್ಷದ ಎಲ್.ಎಲ್.ಬಿ ಪರೀಕ್ಷೆಗೆ ಹಾಜರಾಗಿ ಬರೆಯುವ ಅವಕಾಶ ದೊರಕಿತ್ತು. ಜೈಲು ವಾಸದ ಅವಧಿಯಲ್ಲಿ ನನಗೆ ರಾಷ್ಟ್ರೀಯ ನಾಯಕರಾದ ಎಲ್. ಕೆ. ಆದ್ವಾನಿ, ಎಸ್.ಎನ್.ಮಿಶ್ರ, ಮಧು ದಂಡವತೆ, ದೇವೇಗೌಡ, ರಾಮಕೃಷ್ಣ ಹೆಗಡೆ ಮುಂತಾದವರ ಜೊತೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವ ಅವಕಾಶ ಸಿಕ್ಕಿತ್ತು. ಜೈಲಿನಲ್ಲಿದ್ದಾಗ, ಜನತಾ ಪಕ್ಷದ ರಚನೆಯಲ್ಲಿ ಸಹಾಯ ಮಾಡಿದ್ದೇನೆ.

ಜನಶಕ್ತಿ : ತುರ್ತು ಪರಿಸ್ಥಿತಿಯ ವಿರುದ್ಧ ಕರ್ನಾಟಕದ ಜನತೆ ಮತ್ತು ಕಾರ್ಮಿಕ ವರ್ಗದ ಪ್ರತಿಕ್ರಿಯೆ ಯಾವ ರೀತಿಯಲ್ಲಿತ್ತು?

ವಿಜೆಕೆ: ಕಾರ್ಮಿಕ ವರ್ಗದ ಮೇಲೆ ಭೀಕರ ದಾಳಿ ನಡೆದಿತ್ತು. ಆದರೆ, ಅವರಿಗೆ ಅದನ್ನು ಪ್ರತಿರೋಧಿಸುವ ಅವಕಾಶವಾಗಲಿಲ್ಲ. ತುರ್ತುಪರಿಸ್ಥಿತಿಯ ನಂತರ, 1978ರ ತರುವಾಯ, ಕಾರ್ಮಿಕ ವರ್ಗ ಹಿಂದೆ ತನ್ನ ಮೇಲೆ ಆದ ದಬ್ಬಾಳಿಕೆಗೆ ಪ್ರತಿಕ್ರಿಯೆ ವ್ಯಕ್ತಪಡಿಸಿತು. ಜನತಾ ಪಾರ್ಟಿಯ ಸರ್ಕಾರವು ಇಂದಿರಾ ಗಾಂಧಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಮುಂದುವರೆಸಿತ್ತು. ಇಂದಿರಾ ಗಾಂಧಿಯವರು 1980ರಲ್ಲಿ ಅಧಿಕಾರಕ್ಕೆ ಮರಳಿದ ನಂತರ ಬೆಂಗಳೂರಿನ ಕಾರ್ಮಿಕ ವರ್ಗ ಧೀರೋದಾತ್ತ ಹೋರಾಟಗಳನ್ನು ನಡೆಸಿ, ಕರ್ನಾಟಕದ ರಾಜಕೀಯದಲ್ಲಿ ತನ್ನದೇ ಆದ ಒಂದು ಛಾಪು ಮೂಡಿಸಿತು. ಕಾರ್ಮಿಕ ವರ್ಗವು ಸರ್ವಾಧಿಕಾರಿ ಧೋರಣೆಯ ವಿರುದ್ಧ ನಡೆಸದೆ ಉಳಿದಿದ್ದ ಬಾಕಿಯನ್ನು ತನ್ನ 1980–81ರ ಹೋರಾಟಗಳ ಮೂಲಕ ಪೂರ್ಣಗೊಳಿಸಿತು. ಕಾರ್ಮಿಕ ವರ್ಗವು ರೈತ ಚಳುವಳಿಗಳಿಗೆ ನೆರವಾಗಿದ್ದು ಮಲಪ್ರಭಾ ಹೋರಾಟ ಬೆಳೆದು ಬಂತು ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು ರಾಮಕೃಷ್ಣ ಹೆಗಡೆ ಸರ್ಕಾರ ಅಧಿಕಾರ ಹಿಡಿಯುವಲ್ಲಿ ಒಂದು ಮುಖ್ಯವಾದ ಪಾತ್ರ ನಿರ್ವಹಿಸಿತು.



ಜನಶಕ್ತಿ: ತುರ್ತು ಪರಿಸ್ಥಿತಿಯ ವಿರುದ್ಧವಾಗಿ ಪ್ರತಿರೋಧದ ಚಳುವಳಿ ನಡೆಯಿತೆ?

ವಿಜೆಕೆ: ಅಲ್ಲಲ್ಲಿ ಪ್ರತಿರೋಧ ಇತ್ತು. ಆರ್.ಎಸ್.ಎಸ್ ಮತ್ತು ಎಬಿವಿಪಿ ಪ್ರತಿಭಟಿಸಿದವು. ಪಿಜಿಆರ್ ಸಿಂಧ್ಯಾ ಮತ್ತು ಸುರೇಶ್ ಕುಮಾರ್ ಅವರನ್ನು ಬಂಧಿಸಲಾಗಿತ್ತು. ಸಮಾಜವಾದಿ ಪಕ್ಷದ ಫೆರ್ನಾಂಡಿಜ್ ಸಹೋದರರು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದರು. ಲಾರೆನ್ಸ್ ಫೆರ್ನಾಂಡಿಜ್ ಅವರನ್ನು ಬಂಧಿಸಿ ಹಿಗ್ಗಾ ಮುಗ್ಗಾ ಥಳಿಸಿ ಅವರ ಸಹೋದರ ಮೈಕೆಲ್ ಫೆರ್ನಾಂಡಿಜ್ ಜೊತೆಯಲ್ಲಿ ಜೈಲಿಗೆ ಹಾಕಿದರು. ಅವರ ಜೊತೆಯಲ್ಲಿ ಬಂಧಿಸಿದ್ದ ಸ್ನೇಹಲತಾ ರೆಡ್ಡಿ ತುರ್ತುಪರಿಸ್ಥಿತಿ ಕೊನೆಗೊಳ್ಳುವ ಮುನ್ನವೇ ಮೃತರಾದರು.

ಜನಶಕ್ತಿ: ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸಿಐಟಿಯು ಮತ್ತು ಸಿಪಿಐ(ಎಂ) ಯಾವ ರೀತಿಯಲ್ಲಿ ತಮ್ಮ ಕಾರ್ಯ ನಿರ್ವಹಿಸಿದವು?

ವಿಜೆಕೆ: ಸಿಪಿಐ(ಎಂ) ನಾಯಕರಲ್ಲಿ ಕೆಲವರನ್ನು ಬಂಧಿಸಲಾಗಿತ್ತು. ಸಿಪಿಐ(ಎಂ) ನಾಗರಿಕ ಹಕ್ಕುಗಳ ಪರವಾಗಿ ಚಳುವಳಿ ನಡೆಸುವ ನಿಲುವು ತೆಗೆದುಕೊಂಡಿತ್ತು. ಬಂಗಾಳದಲ್ಲಿ ಅರೆ–ಫ್ಯಾಸಿಸ್ಟ್ ದಬ್ಬಾಳಿಕೆಯ ಆಡಳಿತ ಅದಾಗಲೇ ದಟ್ಟವಾಗಿತ್ತು. ಕೇರಳದಲ್ಲಿ ಅಚ್ಯುತ ಮೆನನ್ ಸರ್ಕಾರ ಸಿಪಿಐ(ಎಂ) ಮತ್ತು ನಕ್ಸಲೀಯರನ್ನು ದಮನ ಮಾಡುತ್ತಿತ್ತು. 1978ರಲ್ಲಿ ಜಲಂಧರ್ ನಲ್ಲಿ ಜರುಗಿದ ಸಿಪಿಐ(ಎಂ) ಮಹಾಧಿವೇಶನದ ನಂತರವಷ್ಟೇ ಸಿಪಿಐ(ಎಂ) ಜನರ ಸಮಸ್ಯೆಗಳನ್ನು ಪರಿಹರಿಸಲು ತನ್ನ ಚಟುವಟಿಕೆಗಳನ್ನು ಚುರುಕಾಗಿ ನಡೆಸಲು ಸಾಧ್ಯವಾಯಿತು.


ಜನಶಕ್ತಿ: ಸರ್ವಾಧಿಕಾರಿ ಮನೋಭೂಮಿಕೆಯುಳ್ಳ ಮೋದಿಯವರು ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಣೆ ಮಾಡುವ ಸಾಧ್ಯತೆ ಇದೆಯೆಂದು ನಿಮಗನಿಸುತ್ತದೆಯೇ?

ವಿಜೆಕೆ: ದೇಶದಲ್ಲಿ ಆಗ ಇದ್ದ ಪರಿಸ್ಥಿತಿ ಈಗ ಅದೇ ರೀತಿಯಲ್ಲಿಲ್ಲ. ಆದರೆ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೇಲೆ ಎಡೆ ಬಿಡದೆ ನಡೆಸುತ್ತಿರುವ ವ್ಯವಸ್ಥಿತ ದಾಳಿಗಳು, ವಿಮರ್ಶೆಯನ್ನು ಸಹಿಸದ ಅಸಹನೆ ಮತ್ತು ಸರ್ವಾಧಿಕಾರಿ ಧೋರಣೆಗಳು ಕೊಡುವ ಸಂಕೇತಗಳು ಒಂದು ಫ್ಯಾಸಿಸ್ಟ್ ಮಾದರಿಯ ಬೆಳವಣಿಗೆಯನ್ನು ಸೂಚಿಸುತ್ತವೆ. ಫ್ಯಾಸಿಸಂ ಅಂದರೆ, ಏಕಸ್ವಾಮ್ಯ ಕಂಪೆನಿಗಳು ಮತ್ತು ಹಣಕಾಸು ಬಂಡವಾಳಗಳ ಆಧಿಪತ್ಯದ ನಗ್ನ ಸರ್ವಾಧಿಕಾರವಲ್ಲದೆ ಮತ್ತೇನೂ ಅಲ್ಲ. ತನ್ನ ಆಳ್ವಿಕೆಗೆ ಧಕ್ಕೆಯಾದರೆ ಸರ್ವಾಧಿಕಾರದತ್ತ ವಾಲುವ ಎಲ್ಲ ಸಾಧ್ಯತೆಗಳನ್ನು ಮೋದಿಯವರು ಪ್ರದರ್ಶಿಸಿದ್ದಾರೆ.

ಜನಶಕ್ತಿ: ತುರ್ತುಪರಿಸ್ಥಿತಿ ಘೋಷಣೆಯ ನಲವತ್ತನೆಯ ವರ್ಷದ ಸಂದರ್ಭದಲ್ಲಿ ಕರ್ನಾಟಕದ ಶ್ರಮಜೀವಿಗಳಿಗೆ ನೀವು ಕೊಡುವ ಸಂದೇಶವೇನು?

ವಿಜೆಕೆ: ಸರ್ವಾಧಿಕಾರಿ ಧೋರಣೆಗಳು ತಲೆ ಎತ್ತುತ್ತಿರುವ ಹಿನ್ನೆಲೆಯಲ್ಲಿ ಶ್ರಮ ಜೀವಿಗಳು ತಮ್ಮ ಹಿತ ಕಾಪಾಡಿಕೊಳ್ಳಲು ಹಿಂದೆ ನಡೆದ ಘಟನೆಗಳಿಂದ ಪಾಠ ಕಲಿಯುವುದು ಅವಶ್ಯವಾಗಿದೆ. 1972ರ ನಂತರ ಬಂಗಾಳದಲ್ಲಿ ಅರೆ–ಫ್ಯಾಸಿಸ್ಟ್ ದಬ್ಬಾಳಿಕೆಯ ಆಡಳಿತ, 1973ರ ವೇತನ ಸ್ಥಂಭನ, 1974ರ ರೈಲ್ವೆ ಮುಷ್ಕರ ಮತ್ತು 1975ರಲ್ಲಿ ಜೀವ ವಿಮಾ ನಿಗಮದಲ್ಲಿ ಆಗಿದ್ದ ವೇತನ ಒಪ್ಪಂದದ ರದ್ದತಿ ಮುಂತಾದ ಅಂಶಗಳು ಆಂತರಿಕ ತುರ್ತುಪರಿಸ್ಥಿತಿಯ ಘೋಷಣೆಯಲ್ಲಿ ಪರ್ಯವಸಾನಗೊಂಡವು. ಸದ್ಯದಲ್ಲಿ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗದ ಮೇಲೆ ಭೀಕರ ದಾಳಿ ನಡೆಯುತ್ತಿದೆ. ಅವರೆಲ್ಲರೂ ಒಟ್ಟಾಗಿ ನಿಂತು

ಪುಟ 15 ಕ್ಕೆ



ತಮ್ಮ ಹೈಕಮಾಂಡನ್ನು ಸಂತುಷ್ಟಿಗೊಳಿಸುವ ಉತ್ಸಾಹದಲ್ಲಿರುವ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಎನ್.ಇ.ಪಿ-2020ನ್ನು ಕರ್ನಾಟಕದಲ್ಲಿ ಜಾರಿಗೊಳಿಸುವ ಹಠ ತೊಟ್ಟಿದ್ದಾರೆ. "ಉನ್ನತ ಶಿಕ್ಷಣದಲ್ಲಿ ಪಠ್ಯಕ್ರಮದ ಸುಧಾರಣೆಗಾಗಿ ಕಾರ್ಯಪಡೆ (ಟಾಸ್ಕ್ ಫೋರ್ಸ್) ಉಪಸಮಿತಿ"ಯು ರಚಿಸಿದ 33 ಪುಟಗಳ ಕರಡನ್ನು ಸಚಿವ ಅಶ್ವತ್ಥನಾರಾಯಣ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ 4 ವರ್ಷಗಳ ಪದವಿ ತರಗತಿಗಳ ಸ್ವರೂಪ, ಸಿ.ಬಿ.ಸಿ.ಎಸ್ (Choice Based Credit System – ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆ) ಪಠ್ಯಕ್ರಮದ ಕುರಿತು ವಿವರಿಸಲಾಗಿದೆ. ಈ ಕಾರ್ಯಪಡೆಯ ನಾಲ್ಕು ಜನ ಏಕಪಕ್ಷೀಯವಾಗಿ ಕರ್ನಾಟಕದ ಉನ್ನತ ಶಿಕ್ಷಣದ ಭವಿಷ್ಯವನ್ನು ನಿರ್ಧರಿಸುತ್ತಿರುವುದು ಇಲ್ಲಿನ ದುರಂತ. ಈ ನಾಲ್ಕು ವರ್ಷಗಳ ಬಹುಶಿಸ್ತೀಯ ಪದವಿ ಶಿಕ್ಷಣ ಮತ್ತು ಸಿ.ಬಿ.ಸಿ.ಎಸ್ ಪಠ್ಯಕ್ರಮದ ವಿವರಗಳನ್ನು ಅದರ ಸಾಧ'ಕ-ಬಾಧಕಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇದು ಈಗಿರುವ ಇದ್ದ ಬದ್ದ ಸಾಮಾಜಿಕ ನ್ಯಾಯವನ್ನೂ, ಕೆಳ ವರ್ಗಗಳ ಜನರಿಗೆ ಉನ್ನತ ಶಿಕ್ಷಣಕ್ಕೆ ಅವಕಾಶವಿರುವ ಅರೆಬರೆ ಸಮಾನ ವ್ಯವಸ್ಥೆಯನ್ನೂ ನಾಶ ಮಾಡಿ; ಪದವಿ ಶಿಕ್ಷಣವನ್ನು ಪೂರ್ಣವಾಗಿ ಖಾಸಗೀಕರಿಸಿ; ಕೆಲವೇ ದುಬಾರಿ, 'ಗುಣಮಟ್ಟದ' ಕಾಲೇಜು/ವಿ.ವಿಗಳಲ್ಲಿ ಕೇಂದ್ರೀಕರಿಸುವ ಮತ್ತು ಇದರ ಫಲವಾಗಿ ಕಾಲೇಜು ಶಿಕ್ಷಣ ವ್ಯವಸ್ಥೆ ಉತ್ತಮಗೊಳ್ಳುವ ಬದಲು ಬೆಂಕಿಯಿಂದ ಬಾಣಲೆಗೆ ಬೀಳುವ ಸಾಧ್ಯತೆಯೇ ಹೆಚ್ಚು ಎನ್ನುತ್ತಾರೆ ಲೇಖಕರು.

ನಾಲ್ಕು ವರ್ಷಗಳ ಪದವಿ ಶಿಕ್ಷಣ: ಬೆಂಕಿಯಿಂದ ಬಾಣಲೆಗೆ

ಬಿ. ಶ್ರೀಪಾದ ಭಟ್

ರಾಜ್ಯದಲ್ಲಿ ಕೊವಿದ್ ಮಹಾಸೋಂಕಿನ ಕಾರಣಕ್ಕೆ ಒಂದೂವರೆ ವರ್ಷ ಶಾಲಾ ಕಾಲೇಜುಗಳು ಕಾರ್ಯ ನಿರ್ವಹಿಸದಿದ್ದರೂ ಸಹ, ಈಗ ಉನ್ನತ ಶಿಕ್ಷಣದಲ್ಲಿ ದಿಡೀರನೆ ಅಮೂಲಾಗ್ರ ಬದಲಾವಣೆಯ ಚಟುವಟಿಕೆ ಪ್ರಾರಂಭವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ-2020) ಜಾರಿಗೊಳಿಸುವ ತುದಿಗಾಲಲ್ಲಿರುವ ಉನ್ನತ ಶಿಕ್ಷಣ ಸಚಿವರು 'ಇಟ್ಟ ಗುರಿ ಬಿಟ್ಟ ಬಾಣ' ಎನ್ನುವಂತೆ ಮುನ್ನುಗ್ಗುತ್ತಿದ್ದಾರೆ. ತಮ್ಮ ಹೈಕಮಾಂಡನ್ನು ಸಂತುಷ್ಟಿಗೊಳಿಸುವ ಉತ್ಸಾಹದಲ್ಲಿರುವ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಎನ್.ಇ.ಪಿ-2020ನ್ನು ಕರ್ನಾಟಕದಲ್ಲಿ ಜಾರಿಗೊಳಿಸುವ ಹಠ ತೊಟ್ಟಿದ್ದಾರೆ. ಅವರು ಪ್ರಸಕ್ತ 2021-22ರ ವರ್ಷದಿಂದಲೇ 4 ವರ್ಷಗಳ ಪದವಿ ಕೋರ್ಸ್ ಪ್ರಾರಂಬಿಸುತ್ತೇವೆ ಮತ್ತು ಅದಕ್ಕಾಗಿ ಎಲ್ಲಾ ತಯಾರಿ ಮಾಡಿಕೊಳ್ಳಿ ಎಂದು ಉನ್ನತ ಶಿಕ್ಷಣ ಇಲಾಖೆಗೆ ಸೂಚಿಸಿದ್ದಾರೆ. ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಹದಗೆಡಿಸಲು ಮುಂದಾಗಿದ್ದಾರೆ. ಏಕೆಂದರೆ ಯಾವುದೇ ಪೂರ್ವಸಿದ್ಧತೆಗಳಿಲ್ಲದೆ, ಸಮಾಲೋಚನೆಗಳಿಲ್ಲದೆ, ಇಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸದೆ ದಿಡೀರನೆ ಈಗಿರುವ ವ್ಯವಸ್ಥೆಯನ್ನೇ ಬದಲಾಯಿಸುವುದು ಅಪಾಯಕಾರಿಯಾದ ನಿಲುವು ಎಂದು ಹೇಳಬೇಕಾಗುತ್ತದೆ.

ಮೋದಿ ನೇತೃತ್ವದ ಬಿಜೆಪಿ ಸರಕಾರವು ಈ 4 ವರ್ಷಗಳ ಪದವಿ ಕೋರ್ಸ್ ಭಾಗವಾಗಿರುವ ಎನ್.ಇ.ಪಿ-2020ಯನ್ನು ಜಾರಿಗೊಳಿಸುವ ಸಂಬಂಧ ರಾಜ್ಯಗಳೊಂದಿಗೆ, ಶಿಕ್ಷಣದ ಹಕ್ಕುದಾರರೊಂದಿಗೆ ಸಮಾಲೋಚನೆ ಮಾಡಲಿಲ್ಲ; ಸಂಸತ್ತಿನಲ್ಲಿ, ವಿಧಾನಸಭೆಯಲ್ಲಿ ಚರ್ಚೆ ನಡೆಸಲಿಲ್ಲ. ತಮ್ಮ ಸರ್ವಾಧಿಕಾರ ಪ್ರವೃತ್ತಿಯನ್ನು ಮುಂದುವರೆಸಿದ ಮೋದಿ ಸರಕಾರವು, ಅದನ್ನು ಏಕಪಕ್ಷೀಯವಾಗಿ ರಾಜ್ಯಗಳ ಮೇಲೆ ಹೇರಲು ಹೊರಟಿದೆ. ತಮಿಳುನಾಡು ಹಾಗೂ ಕೇರಳ ಸರಕಾರಗಳನ್ನು ಹೊರತುಪಡಿಸಿ ಮಿಕ್ಕ ರಾಜ್ಯ ಸರಕಾರಗಳು ಈ ನಿರಂಕುಶ ದಬ್ಬಾಳಿಕೆಯನ್ನು ಪ್ರಶ್ನಿಸುತ್ತಿಲ್ಲ. ಸಂವಿಧಾನದ ಶೆಡ್ಯೂಲ್ 7ರ ಪ್ರಕಾರ ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ, ಶಿಕ್ಷಣದ ಜವಾಬ್ದಾರಿ ಮತ್ತು ಅಧಿಕಾರ ರಾಜ್ಯಗಳಿಗೂ ಸಂಬಂಧಿಸಿದೆ ಎಂದು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುತ್ತಿಲ್ಲ. ಇಲ್ಲಿ ಶಿಕ್ಷಣದ ಭವಿಷ್ಯವು ಅಂಧಕಾರದಲ್ಲಿದೆ.

ಎನ್.ಇ.ಪಿ-2020ಯ ಒಂದು ಭಾಗವಾಗಿ ಯುಜಿಸಿಯು ಶೇ.40 ದಲ್ಲಿ ಆನ್‌ಲೈನ್ ಕ್ಲಾಸ್ ತೆಗೆದುಕೊಳ್ಳುವ ಸಂಬಂಧ ಕರಡು ಪ್ರತಿಯನ್ನು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕಳಿಸಿತ್ತು. ಹೀಗಾಗಿ ಕರ್ನಾಟಕ ರಾಜ್ಯವು ರಾಜಕೀಯ ಕಾರಣಗಳಿಗಾಗಿ ದಿಡೀರನೆ ಹೊಸ ಮಾದರಿಯ ಶಿಕ್ಷಣ ವ್ಯವಸ್ಥೆಗೆ ಬಲಿಪಶುವಾಗಬೇಕಾದ ಸಂಕಷ್ಟಕ್ಕೆ ಸಿಲುಕಿದೆ.

4 ವರ್ಷಗಳ ಪದವಿ ಕೋರ್ಸ್ ಗೆ ತರಾತುರಿ ಅಗತ್ಯವೇ?

ಇದಕ್ಕೆ ಪೂರಕವಾಗಿ ಬಿ.ತಿಮ್ಮೇಗೌಡ ಅಧ್ಯಕ್ಷರಾಗಿರುವ ಇಂದು ಪ್ರಸಾದ್, ಮಾನಸ ನಾಗಭೂಷಣ್, ಪದ್ಮಾವತಿ ಸದಸ್ಯರಾಗಿರುವ "ಉನ್ನತ ಶಿಕ್ಷಣದಲ್ಲಿ ಪಠ್ಯಕ್ರಮದ ಸುಧಾರಣೆಗಾಗಿ ಕಾರ್ಯಪಡೆ (ಟಾಸ್ಕ್ ಫೋರ್ಸ್) ಉಪಸಮಿತಿ"ಯು ರಚಿಸಿದ 33 ಪುಟಗಳ ಕರಡನ್ನು ಸಚಿವ ಅಶ್ವತ್ಥನಾರಾಯಣ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ 4 ವರ್ಷಗಳ ಪದವಿ ತರಗತಿಗಳ ಸ್ವರೂಪ, ಸಿ.ಬಿ.ಸಿ.ಎಸ್ (ಖುಖಿಭಿಜ ಃಭಿಜಜ ಅಡಿಜಜುಣ ಖಥಿಣಜಜಟ – ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆ) ಪಠ್ಯಕ್ರಮದ ಕುರಿತು ವಿವರಿಸಲಾಗಿದೆ. ಆದರೆ ಈ ನಾಲ್ಕು ಜನ – ಕಾರ್ಯಪಡೆಯ ಅಧ್ಯಕ್ಷರು ಮತ್ತು ಸದಸ್ಯರು – ಏಕಪಕ್ಷೀಯವಾಗಿ ಕರ್ನಾಟಕದ ಉನ್ನತ ಶಿಕ್ಷಣದ ಭವಿಷ್ಯವನ್ನು ನಿರ್ಧರಿಸುತ್ತಿರುವುದು ಇಲ್ಲಿನ ದುರಂತ. ಈ ಕಾರ್ಯಪಡೆ ಸಿ.ಬಿ.ಸಿ.ಎಸ್ ಪಠ್ಯಕ್ರಮದ ಸ್ವರೂಪವನ್ನು ರಚಿಸಲು ಯಾರೊಂದಿಗೆ ಸಮಾಲೋಚನೆ ಮಾಡಿದ್ದಾರೆ, ಯಾವ ಮಾದರಿಗಳನ್ನು, ರೆಫೆರೆನ್ಸ್‌ಗಳನ್ನು ಬಳಸಿಕೊಂಡಿದ್ದಾರೆ ಎನ್ನುವ ವಿವರಗಳಿಲ್ಲ. ಯಾವ ಆಧಾರದಲ್ಲಿ ಇದನ್ನು ರಚಿಸಿದ್ದಾರೆ ಎನ್ನುವ ಬಗ್ಗೆ ಪಾರದರ್ಶಕತೆಯಿಲ್ಲ. ಈ ಕಾರಣಕ್ಕಾಗಿ ಕಾರ್ಯಪಡೆಯ ವಾಸ್ತವತೆಯನ್ನು ಅನುಮಾನಿಸಬೇಕಾಗುತ್ತದೆ, ಅದರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಬೇಕಾಗುತ್ತದೆ.

ಶಿಕ್ಷಣ ಸಚಿವರು ಈ ಕಾರ್ಯಪಡೆಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ವಿಷಯವಾರು ತಜ್ಞರ ಸಮಿತಿಗಳನ್ನು ರಚಿಸಿದ್ದಾರೆ. ಭಾಷಾಶಾಸ್ತ್ರ, ಲಲಿತ ಕಲೆ ಮತ್ತು ದೃಶ್ಯ ಮಾಧ್ಯಮ, ಇತಿಹಾಸ, ವಿಜ್ಞಾನ ಮತ್ತು ಗಣಿತಶಾಸ್ತ್ರ, ರಾಸಾಯನಿಕ ಮತ್ತು ಜೀವವಿಜ್ಞಾನ ಶಾಸ್ತ್ರ, ಭೂ ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣೆ, ಎಂಜನಿಯರಿಂಗ್, ಸಾಮಾಜಿಕ ವಿಜ್ಞಾನಗಳ ವಿಷಯವಾರು ತಜ್ಞರ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರು ನೇಮಕಗೊಂಡಿದ್ದಾರೆ. ಈ ಸಮಿತಿಗಳು ಜೂನ್ 30, 2021ರ ಒಳಗೆ ತಮ್ಮ ವರದಿ ಕೊಡಬೇಕೆಂದು ಸೂಚಿಸಲಾಗಿದೆ. ಇದು ನಿಜಕ್ಕೂ ಆಘಾತಕಾರಿಯಾಗಿದೆ. ಸರಕಾರದಿಂದ ಆಯ್ಕೆಯಾದ ಈ ಸದಸ್ಯರು ಏಕಪಕ್ಷೀಯವಾಗಿ ರಾಜ್ಯದ ಉನ್ನತ ಶಿಕ್ಷಣದ ಭವಿಷ್ಯವನ್ನು ಕೇವಲ ಹತ್ತು ದಿನಗಳಲ್ಲಿ ನಿರ್ಧರಿಸುತ್ತಾರೆ ಎನ್ನುವ ಸಂಗತಿ ಕಳವಳಕಾರಿಯಾಗಿದೆ. ಈ ಕುರಿತು ಹಲವು ಪ್ರಶ್ನೆಗಳಿಗೆ ಸಚಿವರು ಉತ್ತರಿಸಲೇಬೇಕು


1. ಸಮಿತಿಗಳ ರಚನೆಯ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಪಾಲಿಸಲಾಗಿದೆಯೇ ಎನ್ನುವುದು ಬಹಿರಂಗಗೊಳ್ಳಬೇಕಾಗಿದೆ.
2. ಈ ಸಮಿತಿಗಳ ಕಾರ್ಯವಿಧಾನವೇನು ಎಂಬ ಸ್ಪಷ್ಟತೆಯಿಲ್ಲ. ಈ ಸದಸ್ಯರುಗಳು ತಮ್ಮೊಳಗೆ ಚರ್ಚಿಸಿ ಅಂತಿಮ ವರದಿಯನ್ನು ನೀಡುತ್ತಾರೆಯೇ? ಹಾಗಿದ್ದಲ್ಲಿ ಈ ಸದಸ್ಯರ ಅಕಡೆಮಿಕ್ ಹಿನ್ನೆಲೆ, ಅರ್ಹತೆ ಮುಖ್ಯವಾಗುತ್ತದೆ. ಇವರ ಶೈಕ್ಷಣಿಕೇತರ ಚಟುವಟಿಕೆಗಳು ಮತ್ತು ಯಾವ ಸಂಘಟನೆಗಳ ಜೊತೆ ಗುರುತಿಸಿಕೊಂಡಿದ್ದಾರೆ ಎನ್ನುವುದು ಸ್ಪಷ್ಟಗೊಳಿಸಬೇಕಾಗುತ್ತದೆ
3. ಸಮಿತಿಗೆ ಶಿಕ್ಷಣ ಹಕ್ಕುದಾರರಾದ ವಿದ್ಯಾರ್ಥಿ ಸಂಘಟನೆಗಳು, ಶಿಕ್ಷಕ ಸಂಘಟನೆಗಳು, ಶಿಕ್ಷಣ ತಜ್ಞರೊಂದಿಗೆ ಸಮಾಲೋಚನೆ ನಡೆಸುವ ಯೋಜನೆಯಿದ್ದರೆ ಅದರ ವಿವರಗಳು ಸಹ ಸಾರ್ವಜನಿಕರಿಗೆ ಗೊತ್ತಾಗಬೇಕಿದೆ.
4. ಸಮಿತಿಯ ಸದಸ್ಯರು ಸಮಾಲೋಚನೆ ಚರ್ಚೆ ನಡೆಸಲು ನಿರ್ಧರಿಸಿದರೆ ನಿಗದಿಪಡಿಸಿದ ಹತ್ತು ದಿನಗಳ ಗಡುವು ಸಾಕಾಗುವುದಿಲ್ಲ. ಇದಕ್ಕಾಗಿ ದಿನಕ್ಕೆ ನಾಲ್ಕು ಗಂಟೆಗಳನ್ನು ಮೀಸಲಿಟ್ಟರೂ ಸಹ ಕನಿಷ್ಟ ಒಂದು ತಿಂಗಳು ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇದರ ಅಂತಿಮ ವರದಿಯ ಸಲ್ಲಿಕೆಗೆ ಕಾಲಮಿತಿಯನ್ನು ನವೆಂಬರ್ 2021ವರಗೆ ವಿಸ್ತರಿಸಬೇಕಾಗುತ್ತದೆ.
5. ಮತ್ತು ಈ ಸಮಿತಿಗಳ ಎಲ್ಲಾ ಚಟುವಟಿಕೆಗಳು ಪಾರದರ್ಶಕವಾಗಿರಬೇಕು ಮತ್ತು ಅದು ಆನ್‌ಲೈನ್ ಮೂಲಕ ನಡೆಸಬಾರದು. ಮುಖಾಮುಖಿಯಾಗಿ ಚರ್ಚಿಸಬೇಕು
6. ಮುಖ್ಯವಾಗಿ ಕೊವಿದ್ ಮಹಾಸೋಂಕಿನ ಕಾರಣಕ್ಕೆ ಶೈಕ್ಷಣಿಕ ಚಟುವಟಿಕೆಗಳು ಸ್ಥಗಿತಗೊಂಡಿರುವ ಕಾರಣ ಉನ್ನತ ಶಿಕ್ಷಣ ಇಲಾಖೆಯು ಎನ್.ಇ.ಪಿ-2020 ಅನುಷ್ಠಾನಗೊಳಿಸುವ ತಮ್ಮ ನಿರ್ಧಾರವನ್ನು ಒಂದು ವರ್ಷ ಮುಂದೂಡುವುದು ಅಗತ್ಯವಾಗಿದೆ.


ಈಗ ನಾಲ್ಕು ವರ್ಷಗಳ ಬಹುಶಿಸ್ತೀಯ ಪದವಿ ಶಿಕ್ಷಣ ಮತ್ತು ಸಿ.ಬಿ.ಸಿ.ಎಸ್ (Choice Based Credit System – ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆ) ಪಠ್ಯಕ್ರಮದ ವಿವರಗಳನ್ನು ಅದರ ಸಾಧಕ-ಬಾಧಕಗಳನ್ನು ಚರ್ಚಿಸೋಣ

ನಾಲ್ಕು ವರ್ಷಗಳ ಪದವಿ ಶಿಕ್ಷಣ ವ್ಯವಸ್ಥೆಯ ಪ್ರಸ್ತಾವವೇನು?

ಸರಕಾರವು ಉನ್ನತ ಶಿಕ್ಷಣದ ವ್ಯವಸ್ಥೆಯನ್ನು ಪುನರ್ರಚಿಸುವ ಸಲುವಾಗಿ 4 ವರ್ಷಗಳ ಪದವಿ ಕೋರ್ಸ್‌ನ್ನು ಶಿಫಾರಸ್ಸು ಮಾಡಿದೆ. ಇದು ಸೆಮಿಸ್ಟರ್ ಪದ್ಧತಿಯನ್ನು ಅಳವಡಿಕೊಳ್ಳಲು ಬಯಸಿದೆ. ಲಿಬರಲ್ ಆರ್ಟ್ಸ್ ಮಾದರಿಯಲ್ಲಿ ಮೇಜರ್ ಮತ್ತು ಮೈನರ್ ಎಂದು ವಿಂಗಡಿಸಿದೆ. ಇಲ್ಲಿ ನಿರ್ಗಮನ-ಪ್ರವೇಶ (ಎಕ್ಸಿಟ್ – ಎಂಟ್ರಿ) ನೀತಿಯನ್ನು ಪ್ರಸ್ತಾಪಿಸಿದೆ.

- ಇದರ ಅನುಸಾರ ಮೊದಲ ವರ್ಷ ಕೋರ್ಸ್ ಮುಗಿಸಿದರೆ 'ಪ್ರಮಾಣ ಪತ್ರ' ಕೊಡಲಾಗುವುದು, 2 ವರ್ಷಗಳ ಕೋರ್ಸ್ ಮುಗಿಸಿದರೆ 'ಡಿಪ್ಲೊಮ ಪ್ರಮಾಣ ಪತ್ರ' ಕೊಡಲಾಗುವುದು. 3 ವರ್ಷಗಳ ಕೋರ್ಸ್ ಮುಗಿಸಿದರೆ 'ಪದವಿ ಪ್ರಮಾಣ ಪತ್ರ'ವನ್ನು ನಾಲ್ಕು ವರ್ಷಗಳ ಕೋರ್ಸ್ ಮುಗಿಸಿದರೆ 'ಆನರ್ಸ್ ಪದವಿ ಪ್ರಮಾಣ ಪತ್ರ' ನೀಡಲಾಗುವುದು. ಶಿಕ್ಷಣವನ್ನು ಮಧ್ಯದಲ್ಲಿ ಮೊಟಕುಗೊಳಿಸಿ ಡ್ರಾಪ್ ಆದ ವಿದ್ಯಾರ್ಥಿಗಳು 'ನಿರ್ಗಮನ-ಪ್ರವೇಶ' ಸೂತ್ರದ ಅನುಸಾರ ವರ್ಷ, ಎರಡು ವರ್ಷದ ನಂತರ ಬಂದು ವ್ಯಾಸಂಗ ಮುಂದುವರೆಸಬಹುದು. ಆದರೆ ಗರಿಷ್ಠ ಎರಡು ಬಾರಿ ಮಾತ್ರ ಈ ನಿರ್ಗಮನ-ಪ್ರವೇಶಕ್ಕೆ ಅವಕಾಶವಿದೆ. ಮತ್ತು ಪ್ರತಿ ವರ್ಷವೂ ವಿದ್ಯಾರ್ಥಿಯ ಖಾತೆಗೆ ಕ್ರೆಡಿಟ್ ಅಂಕಗಳನ್ನು ಕೊಡಲಾಗುತ್ತದೆ.
- ನಾಲ್ಕು ವರ್ಷದ 'ಪದವಿ ಪ್ರಮಾಣ ಪತ್ರ (ಅನರ್ಸ)' ಪಡೆದವರು ಸೂಕ್ತ ಗ್ರೇಡ್ ಮತ್ತು ಸಂಶೋದನೆ ವಿಷಯದೊಂದಿಗೆ 'ಪಿಎಚ್ ಡಿ ಪ್ರೋಗ್ರಾಮ್'ಗೆ ಅಥವಾ ಎರಡು ಸೆಮಿಸ್ಟರ್‌ನ 'ಸ್ನಾತಕೋತ್ತರ ವ್ಯಾಸಂಗ'ಕ್ಕೂ ಸೇರಿಕೊಳ್ಳಬಹುದು.
- ಇದಕ್ಕೆ ಪರ್ಯಾಯವಾಗಿ 5 ವರ್ಷಗಳ 'ಸಂಯೋಜಿತ ಮಾಸ್ಟರ್ಸ್ ಕೋರ್ಸ್' ಸಹ ಇರುತ್ತದೆ. ಇಲ್ಲಿ ಮೂರು ಮತ್ತು ನಾಲ್ಕು ವರ್ಷಗಳ ನಂತರ 'ನಿರ್ಗಮನ-ಪ್ರವೇಶ' ಸೂತ್ರವಿರುತ್ತದೆ.
- ಇದಕ್ಕೆ ಪರ್ಯಾಯವಾಗಿ 5 ವರ್ಷಗಳ 'ಸಂಯೋಜಿತ ಡಾಕ್ಟರ್ಸ್ ಕೋರ್ಸ್' ಸಹ ಇರುತ್ತದೆ. ಇಲ್ಲಿ ನಾಲ್ಕು ಮತ್ತು ಐದು ವರ್ಷಗಳ ನಂತರ 'ನಿರ್ಗಮನ-ಪ್ರವೇಶ' ಸೂತ್ರವಿರುತ್ತದೆ.
- ಬಹುಶಿಸ್ತೀಯ/ಅಂತರಶಿಸ್ತೀಯ ಪದವಿ ಕೋರ್ಸ್‌ಗಳಿರುತ್ತದೆ. ಪದವಿ ಕೋರ್ಸ್‌ಗಳನ್ನು – ಭಾಷೆಗಳು, ಬುನಾದಿ ಕೋರ್ಸ್‌ಗಳು, ಕೌಶಲ್ಯ ಅಭಿವೃದ್ಧಿ/ವೃತ್ತಿಪರ ಕೋರ್ಸ್‌ಗಳು, ಪರಿಚಯಾತ್ಮಕ ಕೋರ್ಸ್‌ಗಳು, ಮೇಜರ್ ವಿಭಾಗದ ಮೂಲ ವಿಷಯಗಳು, ಮೈನರ್ ವಿಭಾಗದ ವಿಷಯಗಳು, ಮೇಜರ್ ವಿಭಾಗದ ಆಯ್ಕೆಯ ವಿಷಯಗಳು ಎಂದು ವಿಂಗಡಿಸಲಾಗಿದೆ.
- ಮೇಜರ್ ವಿಭಾಗದ ಮೂಲ ವಿಷಯಗಳನ್ನು ನಾಲ್ಕು ವರ್ಷ ಕಡ್ಡಾಯವಾಗಿ ಕಲಿಯಬೇಕು. ಮೈನರ್ ವಿಭಾಗದ ವಿಷಯಗಳು ಮತ್ತು ಮೇಜರ್ ವಿಭಾಗದ ಆಯ್ಕೆಯ ವಿಷಯಗಳನ್ನು, ಕೌಶಲ್ಯ ಅಭಿವೃದ್ಧಿ/ವೃತ್ತಿಪರ ಕೋರ್ಸ್‌ಗಳನ್ನು, ಭಾಷೆಯನ್ನು ಎರಡು ವರ್ಷ ಕಲಿಯಬೇಕು.
- ಉದಾಹರಣೆಗೆ ನಾಲ್ಕು ವರ್ಷಗಳ ಕೋರ್ಸ್‌ನಲ್ಲಿ ವಿಜ್ಞಾನವನ್ನು ಮೇಜರ್ ಮೂಲ ವಿಷಯ ಆಯ್ಕೆ ಮಾಡಿಕೊಂಡರೆ ಅದಕ್ಕೆ ಸಂಬಂದಿಸಿದ ಪಠ್ಯಕ್ರಮವನ್ನು ನಾಲ್ಕು ವರ್ಷ ವ್ಯಾಸಂಗ ಮಾಡಬೇಕು. ಇದರ ಜೊತೆಗೆ ನಮ್ಮ ಆಸಕ್ತಿಯ ಸಮಾಜ ವಿಜ್ಞಾನ, ಇತಿಹಾಸ, ಸಂಗೀತ, ರಂಗಶಿಕ್ಷಣ, ಚಿತ್ರಕಲೆ, ಇತ್ಯಾದಿ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಯ ವಿಷಯ ಆಗಿ ವ್ಯಾಸಂಗ ಮಾಡಬೇಕು. ಜೊತೆಗೆ ಎರಡು ವರ್ಷ ಭಾಷೆಯನ್ನು, ಕೌಶಲ್ಯ ಅಭಿವೃದ್ಧಿ/ವೃತ್ತಿಪರ ಕೋರ್ಸ್‌ಗಳನ್ನು ವ್ಯಾಸಂಗ ಮಾಡಬೇಕು.





ಪುಟ 10 ಕ್ಕೆ



ನಾಲ್ಕು ವರ್ಷಗಳ ಪದವಿ ಶಿಕ್ಷಣ: ಬೆಂಕಿಯಿಂದ ಬಾಣಲೆಗೆ.......

ಪುಟ 9 ರಿಂದ

ಸಿ.ಬಿ.ಸಿ.ಎಸ್ ಮಾದರಿಯ ಸಾಧಕಗಳು

ಈ ಸಿ.ಬಿ.ಸಿ.ಎಸ್ ಮಾದರಿ ಪಠ್ಯಕ್ರಮವನ್ನು 'ಬೋಧನೆ ಆದಾರಿತ' ಪ್ರಸ್ತುತ ಶಿಕ್ಷಣ ಪದ್ಧತಿಯಿಂದ 'ಕಲಿಕೆ ಆದಾರಿತ' ಶಿಕ್ಷಣ ಪದ್ಧತಿಗೆ ಹೊರಳಿಕೊಳ್ಳುವುದು ಎಂದು ಬಣ್ಣಿಸಲಾಗುತ್ತದೆ. ಮೇಲ್ನೋಟಕ್ಕೆ ಕಾಣುವಂತೆ ಇದು ನಿಜ. ಸಿ.ಬಿ.ಸಿ.ಎಸ್ ಮಾದರಿಯಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಗಳ, ವಿಷಯಗಳ ಆಯ್ಕೆಯಲ್ಲಿ ಸ್ವಾತಂತ್ರ್ಯವಿರುತ್ತದೆ. ಇಲ್ಲಿ ಮೇಲಿನಿಂದ ಹೇರಲ್ಪಡುವುದಿಲ್ಲ. ಮುಖ್ಯವಾಗಿ ಮುಂದಿನ ವರ್ಷಗಳಲ್ಲಿ ಉದ್ಯೋಗ ಮಾರುಕಟ್ಟೆಯು ಬದಲಾಗಲಿದೆ. ಆಯ್ಕೆಯ ಮಾನದಂಡಗಳು, ಉದ್ಯೋಗಗಳ ಬೇಡಿಕೆಗಳ ಸ್ವರೂಪವೂ ಸಹ ಬದಲಾಗಲಿದೆ. ಅಂದರೆ ವಿಜ್ಞಾನ ಅಥವಾ ಭಾಷೆ ವಿಷಯದಲ್ಲಿ ಸ್ನಾತಕ್ಕೋತ್ತರ ಪದವಿ ಪಡೆದು ಉದ್ಯೋಗ ಅರಸುವುದು ಅರ್ಥಹೀನ ಎನಿಸಿಕೊಳ್ಳಲಿದೆ. ಬದಲಿಗೆ ಈ ಮೂಲ ವಿಷಯದ ಜೊತೆಗೆ ಸಂಗೀತ, ಕೌಶಲ್ಯ, ಸಿನಿಮಾ ಸಂಕಲನ ಇತ್ಯಾದಿ ವಿಷಯಗಳಲ್ಲಿ ಸರ್ಟಿಫಿಕೇಟ್ ಪಡೆದುಕೊಂಡಿದ್ದರೆ ಉದ್ಯೋಗ ದೊರಕುವ ಸಾಧ್ಯತೆಗಳು ಇರುತ್ತವೆ ಎನ್ನುವ ವಾದವೂ ಇದೆ. ಇದನ್ನು ತಳ್ಳಿ ಹಾಕಲು ಬರುವುದಿಲ್ಲ. ಜೊತೆಗೆ ವಿದ್ಯಾರ್ಥಿಗಳಿಗೆ ಮೂಲ ವಿಷಯದ ಜೊತೆಗೆ ವೈವಿಧ್ಯ ವಿಷಯಗಳ ವ್ಯಾಸಂಗವೂ ಆತನ/ಅವಳ ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿಯಾಗುತ್ತದೆ ಎನ್ನುವ ಅಂಶವೂ ಸಹ ನಿಜ. ಒಟ್ಟಾರೆಯಾಗಿ ಕಲಿಕೆಯ ಅವಕಾಶಗಳನ್ನು ಹೆಚ್ಚಿಸುತ್ತದೆ ಎನ್ನುವುದನ್ನು ಅಲ್ಲಗೆಳೆಯಲಾಗುವುದಿಲ್ಲ

ಆದರೆ ಇದರಲ್ಲಿಯೂ ಹಲವು ಲೋಪದೋಷಗಳಿವೆ. ಉದಾಹರಣೆಗೆ ಇಲ್ಲಿ ಎಲೆಕ್ಟಿವ್(ಆಯ್ಕೆಯ) ವಿಷಯ ಆರಿಸಿಕೊಂಡ ವಿದ್ಯಾರ್ಥಿ ಅದರಲ್ಲಿ ಫೇಲಾದರೆ ಆ ವಿಷಯದಲ್ಲಿ ಮರಳಿ ಪೂರಕ ಪರೀಕ್ಷೆ ಬರೆಯಬೇಕೆಂದರೆ ಆತ/ಆಕೆ ಆರಿಸಿಕೊಂಡ ವಿಷಯದಲ್ಲಿ ಜ್ಯೂನಿಯರ್‌ಗಳು ಕಲಿಯುತ್ತಿರಬೇಕು. ಒಂದು ವೇಳೆ ಆ ವಿಷಯಕ್ಕೆ ವಿದ್ಯಾರ್ಥಿಗಳಿಲ್ಲದೇ ಹೋದರೆ ಪೂರಕ ಪರೀಕ್ಷೆ ಬರೆಯಲು ಸಾಧ್ಯವಿಲ್ಲ. ಆ ವಿಷಯಕ್ಕೆ ಜ್ಯೂನಿಯರ್ ವಿದ್ಯಾರ್ಥಿಗಳನ್ನು ಕಾಯತ್ತಿರಬೇಕಾಗುತ್ತದೆ. ಇಂತಹ ಅನೇಕ ಮಿತಿಗಳನ್ನು ಸರಿಪಡಿಸುವವರಾರು ಎನ್ನುವ ಪ್ರಶ್ನೆಗೆ ಸಚಿವರ ಬಳಿ ಉತ್ತರವಿಲ್ಲ

ಸಿ.ಬಿ.ಸಿ.ಎಸ್ ಮಾದರಿಯ ಬಾಧಕಗಳು

- ಅಸಮಾನತೆ, ಶ್ರೇಣೀಕೃತ ಜಾತಿ–ವರ್ಗ ವ್ಯವಸ್ಥೆಯಿರುವ ಭಾರತದಂತಹ ದೇಶದಲ್ಲಿ ಇಂದಿಗೂ ಸಮಾನ ಶಿಕ್ಷಣ ವ್ಯವಸ್ಥೆ ಇಲ್ಲ. ಸಾರ್ವಜನಿಕ ಶಿಕ್ಷಣವು ತನ್ನ ಆಸ್ತಿತ್ವವನ್ನು ಕಳೆದುಕೊಂಡು ಸಂಪೂರ್ಣ ಖಾಸಗೀಕರಣದ, ಬಂಡವಾಳಶಾಹಿ ಶಿಕ್ಷಣ ವ್ಯವಸ್ಥೆ ಪ್ರಭಾವಶಾಲಿಯಾಗಿ ಬೆಳೆಯುತ್ತಿದೆ.
- ಕೆಜಿಯಿಂದ ಪಿಜಿವರೆಗಿನ ಉಚಿತ, ಗುಣಮಟ್ಟದ ಕಡ್ಡಾಯ ಶಿಕ್ಷಣದ ಆಶಯಗಳು ಸಂಪೂರ್ಣವಾಗಿ ನಾಶಗೊಂಡಿವೆ
- ಪರಿಚ್ಛೇದ 15(4) ಅನುಸಾರ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ/ಪಂಗಡಗಳಿಗೆ ಸಬಲೀಕರಣಕ್ಕೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಭುತ್ವಕ್ಕೆ ಯಾವುದೇ ನಿರ್ಬಂಧಗಳಿಲ್ಲ. ಪರಿಚ್ಛೇದ 21ಎ, 45ರ ಅನುಸಾರ 0–14 ಉಚಿತ ಗುಣಮಟ್ಟದ ಕಡ್ಡಾಯ ಶಿಕ್ಷಣ ಕೊಡಬೇಕು. ಆದರೆ ಸಂವಿದಾನದ ನೀತಿಸಂಹಿತೆಗಳನ್ನು ಉಲ್ಲಂಘಿಸಲಾಗಿದೆ ಮತ್ತು ಶಿಕ್ಷಣವು ಸಂಪೂರ್ಣವಾಗಿ ಖಾಸಗೀಕರಣಗೊಳ್ಳುತ್ತಿದೆ
- ಶಿಕ್ಷಣ ನೀತಿಯು 54 ಪರಿಚ್ಛೇದಗಳನ್ನೊಳಗೊಂಡ 'ಮಕ್ಕಳ ಹಕ್ಕಿಗಾಗಿ ವಿಶ್ವಸಂಸ್ಥೆಯ ಸಮಾವೇಶ' (UNCRC)ದ ನೀತಿಗಳಿಗೆ ವಿರುದ್ಧವಾಗಿದೆ. ಮಕ್ಕಳು ತಮ್ಮ ಹಕ್ಕನ್ನು ಸಂಪೂರ್ಣವಾಗಿ ಅನುಭವಿಸುವಂತೆ ಸರಕಾರ ಮತ್ತು ಪೋಷಕರು ಎಲ್ಲ ಬಗೆಯ ಕಾರ್ಯವಿಧಾನಗಳನ್ನು ಜಾರಿಗೊಳಿಸಬೇಕು ಎಂಬುದು ಅದರ ನೀತಿಯಾಗಿದೆ. ಅದರ ಪರಿಚ್ಛೇದ 28ರ ಅನುಸಾರ ಪ್ರತಿ ಮಗುವಿಗೂ ಶಿಕ್ಷಣ ಪಡೆಯುವ ಹಕ್ಕಿದೆ. ಪರಿಚ್ಛೇದ 3ರ ಅನುಸಾರ ಮಕ್ಕಳ ಹಿತಾಸಕ್ತಿಗೆ ಮೊದಲ ಆದ್ಯತೆ ಕೊಡಬೇಕು. ಪರಿಚ್ಛೇದ 12ರ ಅನುಸಾರ ತಮಗೆ ಪರಿಣಾಮ ಬೀರುವ ವಿಷಯಗಳಲ್ಲಿ ಮಕ್ಕಳ ಅಭಿಪ್ರಾಯ, ದೃಷ್ಟಿಕೋನವನ್ನು ಪರಿಗಣಿಸಬೇಕು. ಆದರೆ ಸರಕಾರದ ಶಿಕ್ಷಣದಲ್ಲಿ ಖಾಸಗೀಕರಣದ, ವ್ಯಾಪಾರೀಕರಣದ ಧೋರಣೆಯು UNCRC ನೀತಿಯ ಉಲ್ಲಂಘನೆಯಾಗಿದೆ.
- ಇಲ್ಲಿ ಅವೈಜ್ಞಾನಿಕ ವ್ಯಾಸಂಗಕ್ರಮವಿದೆ.
- ಕುಟುಂಬದ ಬಡತನದ ಕಾರಣಕ್ಕೆ, ಲಿಂಗ ತಾರತಮ್ಯದ ಕಾರಣಕ್ಕೆ, ಜಾತಿ, ಮತಧರ್ಮ ಕಾರಣಕ್ಕೆ, ಪೋಷಕರ ನಿರಾಸಕ್ತಿಯ ಕಾರಣದಿಂದ (ಗ್ರಾಮೀಣ ಭಾಗಗಳಲ್ಲಿ ಇದು ಹೆಚ್ಚು), ದುಬಾರಿ ಶುಲ್ಕದ ಕಾರಣದಿಂದ, ಮೂಲಭೂತ ಸೌಕರ್ಯಗಳ ಕೊರತೆಯ ಕಾರಣದಿಂದ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಾರೆ ಅಥವಾ dropout ಆಗುತ್ತಾರೆ. ಅಲ್ಲದೆ ತರಗತಿಯೊಳಗಿನ ಜಾತಿ, ಮತಧರ್ಮ, ವರ್ಗ ತಾರತಮ್ಯದ ಕಾರಣಕ್ಕೆ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಾರೆ.
- ಮುಖ್ಯವಾಗಿ 5 ರಿಂದ 6ನೆ ತರಗತಿಗೆ 7 ರಿಂದ 8ನೆ ತರಗತಿಗೆ ಮತ್ತು 9 ರಿಂದ 10ನೆ ತರಗತಿಗೆ ಪ್ರವೇಶಿಸುವ ಸಂಕ್ರಮಣ ಹಂತಗಳಲ್ಲಿನ ಗೊಂದಲಗಳು, ಶೈಕ್ಷಣಿಕ ಬಿಕ್ಕಟ್ಟುಗಳ ಕಾರಣಕ್ಕೆ ಶಾಲೆಯಿಂದ ಹೊರಗುಳಿಯುತ್ತಾರೆ.
- ಗುಣಮಟ್ಟ ಬೋಧನೆಯ, ಕಲಿಕೆಯ ಕೊರತೆಯ, ಶಿಕ್ಷಕರ ಕೊರತೆ, ಏಕೋಪಾಧ್ಯಾಯ ಶಾಲೆಗಳಿಂದ, ಅವೈಜ್ಞಾನಿಕ ಪಠ್ಯಪುಸ್ತಕಗಳ, ಪಠ್ಯಪುಸ್ತಕಗಳ ಕೊರತೆ, ಮೂಲಭೂತ ಸೌಕರ್ಯಗಳ ಕೊರತೆ, ಶಿಕ್ಷಕರ ಬೇಜವಾಬ್ದಾರಿ, ಅಪೌಷ್ಟಿಕತೆ, ಕುಟುಂಬದ ಪ್ರತಿಕೂಲ ಪರಿಸ್ಥಿತಿಗಳು ಇತ್ಯಾದಿಗಳ ಕಾರಣಕ್ಕೆ ಮಕ್ಕಳು ಫೇಲ್ ಆಗುತ್ತಾರೆ.
- ಶೇ.66 ಪ್ರಮಾಣದ ಜನಸಂಖ್ಯೆ ಹಳ್ಳಿಗಳಲ್ಲಿ ವಾಸಿಸುತ್ತಾರೆ. 80 ಕೋಟಿ ಜನಸಂಖ್ಯೆ ಬಡತನ ಮತ್ತು ಹಸಿವಿನಿಂದ ಬಾಧಿತರಾಗಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಶೇ.90ರಷ್ಟಿರುವ ದಾಖಲಾತಿಯು ಪದವಿ ಹಂತಕ್ಕೆ ಬರುವಷ್ಟರಲ್ಲಿ ಶೇ.56ಕ್ಕೆ ಕುಸಿಯುತ್ತದೆ, ಉನ್ನತ ಶಿಕ್ಷಣಕ್ಕೆ ತಲಪುವಷ್ಟರಲ್ಲಿ ಶೇ.26.7 ಪ್ರಮಾಣಕ್ಕೆ ಕುಸಿಯುತ್ತದೆ.
- ಮೇಲಿನ ಕಾರಣಗಳಿಂದಾಗಿ ಉನ್ನತ ಶಿಕ್ಷಣದಲ್ಲಿ ಶೇ.14.8 ಪ್ರಮಾಣದ ಪರಿಶಿಷ್ಟ ಜಾತಿ, ಶೇ.7.1 ಪ್ರಮಾಣದ ಪರಿಶಿಷ್ಟ ಪಂಗಡದ, ಶೇ. 3.5 ಪ್ರಮಾಣದ ಮುಸ್ಲಿಂ ಸಮುದಾಯ, ಶೇ.36 ಪ್ರಮಾಣದ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ದಾಖಲಾಗಿದ್ದಾರೆ.
- ಸರಕಾರಿ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಮತ್ತು ಪದವಿ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರ ಕೊರತೆ ಇದೆ. ಕಳೆದ ನಾಲ್ಕು ವರ್ಷಗಳಿಂದ ಪದವಿ ಕಾಲೇಜುಗಳಿಗೆ ಶಿಕ್ಷಕರ ನೇಮಕಾತಿಯಾಗಿಲ್ಲ. ಬಹುತೇಕ ಕಾಲೇಜುಗಳಲ್ಲಿ ಮುಕ್ಕಾಲು ಭಾಗ ಅತಿಥಿ ಶಿಕ್ಷಕರಿದ್ದಾರೆ. ಅವರಿಗೆ ಉದ್ಯೋಗ ಭದ್ರತೆಯಿಲ್ಲ. ನ್ಯಾಯಯುತವಾದ ವೇತನವಿಲ್ಲ
- ಕಲೆ–ವಾಣಿಜ್ಯ–ವಿಜ್ಞಾನ ಎನ್ನುವ ಸಾಂಪ್ರದಾಯಿಕ ಕಾಲೇಜುಗಳಲ್ಲಿ ಬಹುಶಿಸ್ತೀಯ, ಅಂತರಶಿಸ್ತೀಯ ಕೋರ್ಸ್‌ಗಳಿಗೆ ಅಗತ್ಯವಾದ ಶಿಕ್ಷಕರ ಕೊರತೆಯಿದೆ. ಕಲಾ ಕಾಲೇಜಿನಲ್ಲಿ ವಾಣಿಜ್ಯ, ವಿಜ್ಞಾನ, ಸಮಾಜಶಾಸ್ತ್ರ, ಸಂಗೀತ, ರಂಗಭೂಮಿ ಇತ್ಯಾದಿ ಶಿಕ್ಷಕರು ಇರುವುದಿಲ್ಲ. ಇದೇ ರೀತಿ ವಾಣಿಜ್ಯ, ವಿಜ್ಞಾನ ಕಾಲೇಜುಗಳಿಗೂ ಅನ್ವಯಿಸುತ್ತದೆ. ಸಿ.ಬಿ.ಸಿ.ಎಸ್ ಪಠ್ಯಕ್ರಮ ಜಾರಿಗೊಂಡರೆ ಈ ಸರಕಾರಿ ಕಾಲೇಜುಗಳಲ್ಲಿ ಬಹುಶಿಸ್ತೀಯ/ಅಂತರಶಿಸ್ತೀಯ ಕೋರ್ಸ್‌ಗಳಿಗೆ ಅಗತ್ಯವಾದ ಶಿಕ್ಷಕರಿಲ್ಲ ಎಂದು ಕಾಲೇಜುಗಳೇ ಮುಚ್ಚಿಹೋಗುವ ಅಪಾಯವಿದೆ.
- ಇದು ಮತ್ತೊಂದೆಡೆ ಖಾಸಗಿ ವಿಶ್ವವಿದ್ಯಾಲಯಗಳು ಮಾತ್ರ ಉಳಿದುಕೊಳ್ಳುವ ಸಾಧ್ಯತೆಗಳಿವೆ. ಅಲ್ಲಿ ನಾಲ್ಕು ವರ್ಷಗಳ ಈ 'ಲಿಬರಲ್ ಆರ್ಟ್ಸ್' ಕೋರ್ಸ್‌ಗಳಿಗೆ 7–10 ಲಕ್ಷ ಪ್ಯಾಕೇಜ್ ಇದೆ. ಬಡಕುಟುಂಬದ ಮಕ್ಕಳು ಈ ದುಬಾರಿ ಶುಲ್ಕ ಭರಿಸುವ ಸಾಧ್ಯತೆಗಳೇ ಇಲ್ಲ. ಆರ್ಥಿಕ ಮುಗ್ಗಟ್ಟಿನಿಂದಾಗಿ ಅವರು ಶಿಕ್ಷಣದಿಂದ ವಂಚಿತರಾಗುತ್ತಾರೆ.
- ಈ ಸಿ.ಬಿ.ಸಿ.ಎಸ್ ಪಠ್ಯಕ್ರಮವೆಂದರೆ ಅದು 'ಕೆಫೆಟೇರಿಯಾ' ಇದ್ದಂತೆ. ವಿದ್ಯಾರ್ಥಿಗಳು ತಮಗೆ ಬೇಕಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ದೀಪಂಕರ್ ಬಸು ಅವರು 'ಬಹುಶಃ ಶಿಕ್ಷಣ ಸಂಸ್ಥೆಗಳು ಅಂಗಡಿಗಳಂತೆಯೂ, ವಿದ್ಯಾರ್ಥಿಗಳು ಗ್ರಾಹಕರಂತೆಯೂ ರೂಪಿಸುವಲ್ಲಿ ಇದು ಯಶಸ್ವಿಯಾಗಿದೆ' ಎಂದು ವ್ಯಂಗ್ಯವಾಡುತ್ತಾರೆ. ಇಲ್ಲಿ ಮುಕ್ತ ಮಾರುಕಟ್ಟೆ ಎಲ್ಲವನ್ನೂ ನಿಯಂತ್ರಿಸುತ್ತದೆ. ಕೆಫೆಟೇರಿಯಾದಲ್ಲಿ ಹಣವಿದ್ದವನು ಮಾತ್ರ ವಸ್ತುಗಳನ್ನು ಕೊಳ್ಳಲು ಸಾಧ್ಯ. ಹಾಗೆಯೇ ಸಿ.ಬಿ.ಸಿ.ಎಸ್ ಪಠ್ಯಕ್ರಮದ ವ್ಯವಸ್ಥೆಯಲ್ಲಿ ಹಣವುಳ್ಳವರೇ ತಮಗೆ ಬೇಕಾದ ಪದವಿಗಳನ್ನು ಕೊಳ್ಳುತ್ತಾರೆ
- ಇಂದು ಭಾರತದಲ್ಲಿ ಶೇ.51 ಪ್ರಮಾಣದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು, ಶೇ.49 ಪ್ರಮಾಣದಲ್ಲಿ ಸಾರ್ವಜನಿಕ ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ ಶೇ. 10 ಪ್ರಮಾಣದ ವಿಶ್ವವಿದ್ಯಾಲಯಗಳು ಮಾತ್ರ ಗುಣಮಟ್ಟ ಕಾಪಾಡಿಕೊಂಡು ಬಂದಿವೆ, ಉಳಿದ ಶೇ 90 ಪ್ರಮಾಣದ ವಿಶ್ವವಿದ್ಯಾಲಯಗಳಲ್ಲಿ ಕಳಪೆ ಗುಣಮಟ್ಟವಿದೆ
- ಆದರೆ ಮೇಲೆ ವಿವರಿಸಿದ ಅವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸುಧಾರಿಸುವ ಕಡೆಗೆ ಸರಕಾರಕ್ಕೆ ಆಸಕ್ತಿಯಿಲ್ಲ. ವಂಚಿತ ಸಮುದಾಯಗಳು ಎಲ್ಲಾ ಹಂತಗಳಲ್ಲಿ ಶಿಕ್ಷಣ ಪಡೆದುಕೊಳ್ಳುವಂತಹ ವ್ಯವಸ್ಥೆಯನ್ನು ಸ್ಥಾಪಿಸದೆ ನೇರವಾಗಿ ಈಗಿರುವ ಕಳಪೆ ಶಿಕ್ಷಣ ವ್ಯವಸ್ಥೆಯಲ್ಲಿ ಸಿ.ಬಿ.ಸಿ.ಎಸ್ ಪಠ್ಯಕ್ರಮ ಆಧಾರಿತ ನಾಲ್ಕು ವರ್ಷಗಳ ಶಿಕ್ಷಣ ನೀತಿಯನ್ನು 'ನಿರ್ಗಮನ–ಪ್ರವೇಶ' ಮಾದರಿಯನ್ನು ಅನುಸರಿಸಿದರೆ ಅದು ಅನಾಹುತಕ್ಕೆ ಎಡೆ ಮಾಡಿಕೊಡುತ್ತದೆ. ಬಡಕುಟುಂಬಗಳ, ಅಂಚಿನಲ್ಲಿರುವ ಸಮುದಾಯಗಳ ವಿದ್ಯಾರ್ಥಿಗಳು ಕುಟುಂಬ ನಿರ್ವಹಣೆಗಾಗಿ ಉದ್ಯೋಗ ದೊರಕುತ್ತದೆ ಎನ್ನುವ ಒಂದೇ ಕಾರಣಕ್ಕೆ ಒಂದು ವರ್ಷದ 'ಪ್ರಮಾಣ ಪತ್ರ' ಎರಡು ವರ್ಷದ 'ಡಿಪ್ಲೋಮಾ ಪ್ರಮಾಣಪತ್ರ' ಪಡೆದುಕೊಂಡು ವ್ಯಾಸಂಗವನ್ನು ಮಧ್ಯದಲ್ಲಿ ಮೊಟಕುಗೊಳಿಸಿ ಡ್ರಾಪ್ ಆಗುತ್ತಾರೆ ಮತ್ತು ಮರಳಿ ಬಂದು ಪದವಿ ಕೋರ್ಸ್‌ನ್ನು ಮುಗಿಸುವುದಿಲ್ಲ. ಅಂದರೆ ಸಾಮರ್ಥ್ಯವಿದ್ದರೂ ಅವರು ಪದವೀಧರರಾಗುವುದಿಲ್ಲ. ವಿಜ್ಞಾನಿಗಳು, ಪ್ರೊಫೆಸರ್, ಉಪಕುಲಪತಿಗಳು ಆಗುವುದಿಲ್ಲ. ಬದಲಿಗೆ ನವ–ಉದಾರವಾದಿ ಉತ್ಪಾದನಾ–ಸೇವಾ ಉದ್ಯಮಗಳ ಕಡಿಮೆ ಕೂಲಿ ಮತ್ತು ಕೌಶಲ್ಯಗಳ ಅಭದ್ರ ಉದ್ಯೋಗಗಳಲ್ಲಿ ಗುಲಾಮರಾಗುತ್ತಾರೆ. ಕಡೆಗೂ ಉಳ್ಳವರು ಮಾತ್ರ ಪದವಿಧರರಾಗುತ್ತಾರೆ. ಇದು ಕಟುಸತ್ಯ.
- ಭಾರತದಲ್ಲಿ ಕೈಗಾರೀಕರಣವು ಹಿನ್ನಡೆ ಹೊಂದುತ್ತಿದೆ. ಇಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸುತ್ತಿಲ್ಲ. ಮತ್ತು ಈ ಉದ್ಯಮಗಳಲ್ಲಿ ಕೆಳಸ್ತರದ ಹುದ್ದೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಅವಶ್ಯಕತೆಯಿದೆ. ಮೇಲಿನ ಸಿಬಿಎಸ್ ಮಾದರಿಯು ಈ ಉದ್ಯಮಗಳಿಗೆ "ಈ ಜೀತದಾಳುಗಳನ್ನು" ಯಶಸ್ವಿಯಾಗಿ ಪೂರೈಸುತ್ತದೆ.
- 'ಎನ್.ಇ.ಪಿ–2020' ರೂಪಿಸಿದವರಿಗೆ ಈ ಸಮಾಜೋ–ಆರ್ಥಿಕ ಬಿಕ್ಕಟ್ಟು ಅರ್ಥವಾಗಿಲ್ಲ ಎಂದಲ್ಲ. ಕಡೆಗೂ ಉಳಿದುಕೊಳ್ಳುವ ಪ್ರಶ್ನೆಯೆಂದರೆ 'ಯಾವ ಕಾರಣಕ್ಕಾಗಿ, ಯಾವ ಬೆಲೆ ತೆತ್ತು ಈ ಬದಲಾವಣೆಗಳನ್ನು ಶಿಫಾರಸ್ಸು ಮಾಡುತ್ತಿದ್ದಾರೆ? ಈಗಿರುವ ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಹದಗೆಡಿಸುವ ಈ ನಿರ್ಧಾರದ ಹಿಂದೆ ಯಾವ ಹುನ್ನಾರವಿದೆ?'. ಇದು ಈಗಿರುವ ಇದ್ದ ಬದ್ದ ಸಾಮಾಜಿಕ ನ್ಯಾಯವನ್ನೂ, ಕೆಳ ವರ್ಗಗಳ ಜನರಿಗೆ ಉನ್ನತ ಶಿಕ್ಷಣಕ್ಕೆ ಅವಕಾಶವಿರುವ ಅರೆಬರೆ ಸಮಾನ ವ್ಯವಸ್ಥೆಯನ್ನೂ ನಾಶ ಮಾಡಿ, ಪದವಿ ಶಿಕ್ಷಣವನ್ನು ಪೂರ್ಣವಾಗಿ ಖಾಸಗೀಕರಿಸಿ, ಕೆಲವೇ ದುಬಾರಿ, 'ಗುಣಮಟ್ಟದ' ಕಾಲೇಜು/ವಿ.ವಿಗಳಲ್ಲಿ ಕೇಂದ್ರೀಕರಿಸುವ ಹುನ್ನಾರದಂತೆ ಕಾಣುತ್ತದೆ. ಇದರ ಫಲವಾಗಿ ಕಾಲೇಜು ಶಿಕ್ಷಣ ವ್ಯವಸ್ಥೆ ಉತ್ತಮಗೊಳ್ಳುವ ಬದಲು ಬೆಂಕಿಯಿಂದ ಬಾಣಲೆಗೆ ಬೀಳುವ ಸಾಧ್ಯತೆಯೇ ಹೆಚ್ಚು.

ಬಳ್ಳಾರಿ ಗಣಿಗಾರಿಕೆ: ಪರಿಸರ ವಿನಾಶ–ಅದರ ಪುನಶ್ಚೇತನ......

ಪುಟ 6 ರಿಂದ

6 ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಇದರಲ್ಲಿ ಕಾಂಟ್ರಾಕ್ಟ್ ಗಿರಿಗೆ ಸಂಬಂಧಿಸಿದ ಕೆಲಸಗಳನ್ನು ಕ್ರಿಯಾಯೋಜನೆಯಲ್ಲಿ ಹೇಗೆ ಸೇರಿಸಬೇಕು, ಮೂಲಸೌಲಭ್ಯಗಳಿಗೆ ಹೇಗೆ ಆದ್ಯತೆ ನೀಡಬೇಕು, ಪ್ಲೈಓವರ್ ನಿರ್ಮಾಣಕ್ಕೆ ಕ್ರಿಯಾಯೋಜನೆಯಲ್ಲಿ ಅವಕಾಶ ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗೆಗಿನ ಯೋಚನೆಯಲ್ಲಿ ಅಧಿಕಾರಿಗಳು ಮತ್ತು ಸರ್ಕಾರ ತುಂಬಾ ಬ್ಯುಸಿಯಾಗಿರುವಂತೆ ಕಾಣುತ್ತಿದೆ.

ಈ ಪರಿಸರ ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನವು ಪಾರದರ್ಶಕವಾಗಿ ನಡೆಯಲು ಇದರ ಮೇಲ್ವಿಚಾರಣೆ ನಡೆಸಲು ಒರಿಸ್ಸಾದಲ್ಲಿ ಮಾಡಿರುವಂತೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು 'ಓವರ್‌ಸೈಟ್ ಅಥಾರಿಟಿ' ನೇಮಿಸಬೇಕು ಎಂಬ ಒತ್ತಾಯ ಬಂದುದರಿಂದ ಕರ್ನಾಟಕ ಸರ್ಕಾರವು ಇಂತಹ ಕ್ರಮ ತೆಗೆದುಕೊಳ್ಳಲು ಮುಂದಾಗಿದೆ. ಈ ಪ್ರಕಿಯೆ ಇನ್ನೂ ಮುಗಿದಿಲ್ಲ.

ಪರಿಸರ ಪುನಶ್ಚೇತನ ಕಾರ್ಯಕ್ರಮವು ಜನರ ಸಹಭಾಗಿತ್ವದಲ್ಲಿ ನಡೆಯುವಂತಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಇದರಲ್ಲಿ ಗಣಿ ಬಾಧಿತ ಪ್ರದೇಶದಲ್ಲಿನ ಜನರ ಮೂಲ ಅಗತ್ಯಗಳಾದ ಶಿಕ್ಷಣ(ಪ್ರಾಥಮಿಕ), ಆರೋಗ್ಯ, ಕುಡಿಯುವ ನೀರು, ಪೌಷ್ಟಿಕತೆ, ಮಕ್ಕಳ ಆರೋಗ್ಯ, ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯಗಳಿಗೆ ಆದ್ಯತೆ ದೊರೆಯಬೇಕು. ರಸ್ತೆ ನಿರ್ಮಾಣ, ರೈಲು ಮಾರ್ಗಗಳ ನಿರ್ಮಾಣ, ಸೇತುವೆಗಳ ನಿರ್ಮಾಣ ಮುಂತಾದವಕ್ಕೆ ಸರ್ಕಾರವು ಸಾಮಾನ್ಯ ಬಜೆಟ್ಟಿನಲ್ಲಿ ಸಂಪನ್ಮೂಲ ಒದಗಿಸಬೇಕು, 'ಸ್ಪೆಶಲ್ ಪರ್‌ಪಸ್ ವೆಹಿಕಲ್'ನ ಹಣವನ್ನು ಮೂಲಸೌಲಭ್ಯ ಕಾರ್ಯಕ್ರಮಗಳಿಗೆ ವಿನಿಯೋಗಿಸಬಾರದು. ಏಕೆಂದರೆ ಇದು ಸ್ಪೆಶಲ್ ಕಾರ್ಯಕ್ರಮವೇ ವಿನಾ ರೂಢಿಗತ ಕಾರ್ಯಕ್ರಮವಲ್ಲ.

ಈ ಕಾರ್ಯಯೋಜನೆಯ ಅನುಷ್ಠಾನದಲ್ಲಿ ಗಣಿ ಬಾಧಿತ ಪ್ರದೇಶದ ಗ್ರಾಮ ಪಂಚಾಯತಿ ಸದಸ್ಯರ ಮೇಲ್ವಿಚರಣಾ ಸಮಿತಿಗಳನ್ನು ರಚಿಸಬೇಕು. ಇದರಲ್ಲಿ ಎಮ್.ಎಲ್.ಎ ಮತ್ತು ಎಂ.ಪಿಗಳಿಗೆ ಮಾರ್ಗದರ್ಶನ ನೀಡುವ ಅಧಿಕಾರವಿರಬೇಕೇ ವಿನಾ ಬಜೆಟ್ ರೂಪಿಸುವ, ಹಣ ವಿನಿಯೋಗಿಸುವ ಅಥವಾ ಆದ್ಯತೆಯನ್ನು ನಿರ್ಧರಿಸುವ ಮತ್ತು ಹಣಕಾಸಿಗೆ ಸಂಬಂಧಿಸಿದ ಯಾವುದೇ ಜವಾಬ್ದಾರಿ ಅವರಿಗೆ ಇರಬಾರದು.

ಈ ದಿಶೆಯಲ್ಲಿ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಗಣಿ ಬಾಧಿತ ಪ್ರದೇಶದ ಜನರು ಜಾಗೃತರಾಗಬೇಕು. ಈ ಕಾರ್ಯಕ್ರಮಕ್ಕೆ ರೂ. 16,000 ಕೋಟಿಗೆ ಮಿರಿದ ಬಜೆಟ್ಟಿದೆ ಎಂಬುದನ್ನು ಸರ್ಕಾರವು ಜನರಿಗೆ ಸರಿಯಾಗಿ ತಿಳಿಸುತ್ತಿಲ್ಲ. ಇದಕ್ಕೆ ವೈಜ್ಞಾನಿಕ ಪರಿಸರ–ಸ್ನೇಹಿ, ಜನಮುಖಿ ಸುಸ್ಥಿರಗತಿಯ ಕ್ರಿಯಾಯೋಜನೆಯನ್ನು ರೂಪಿಸಿಲ್ಲ. ಈ ಬಗ್ಗೆ ಗಣಿ ಬಾಧಿತ ಪ್ರದೇಶದ ಜನರಿಗೆ ಮಾಹಿತಿಯೇ ಇಲ್ಲ. ಜನರನ್ನು ಕತ್ತಲೆಯಲ್ಲಿಟ್ಟು ಕಾರ್ಯಕ್ರಮ ಅನುಷ್ಠಾನಗೊಳಿಸಬಾರದು.

ಸಾಮ್ರಾಜ್ಯಶಾಹಿ ಆಕ್ರಮಣಗಳ ದಾರಿಯಲ್ಲಿ 1996-2000



ಸೋವಿಯತ್ ಒಕ್ಕೂಟದ ವಿಘಟನೆಯು ಕೆಲವು ಸ್ವಹಿತಾಸಕ್ತಿಯ ಗುಂಪುಗಳು ಪ್ರಚಾರ ಮಾಡುತ್ತಿದ್ದಂತೆ ಜಗತ್ತಿನಲ್ಲಿ ಶಾಂತಿಯನ್ನು ತರಲಿಲ್ಲ. ಬದಲಾಗಿ ಇದು ಏಕಧ್ರುವೀಯ ಜಗತ್ತಿನಲ್ಲಿ ಅಮೇರಿಕಾ ಎಲ್ಲಾ ಮಿಲಿಟರಿ ಮತ್ತು ಆರ್ಥಿಕ ಶಕ್ತಿಗಳೊಂದಿಗೆ ತನ್ನ ಪ್ರಾಬಲ್ಯವನ್ನು ವಿಶ್ವದ ಇತರ ಭಾಗಗಳಲ್ಲಿ ಸ್ಥಾಪಿಸಲು ಕಾರಣಕರ್ತವಾಯಿತು. ಇನ್ನೊಂದೆಡೆಯಲ್ಲಿ, ಬಂಡವಾಳಶಾಹಿ ಆಕ್ರಮಣವನ್ನು ತಡೆಯುವ ಅಗತ್ಯತೆಯನ್ನು ಅರಿತುಕೊಂಡು ಕಾರ್ಮಿಕ ವರ್ಗದ, ನೌಕರರ ಮತ್ತು ಇತರ ವಿಭಾಗಗಳ ಬಡವರ ಪ್ರಜ್ಞೆಯಲ್ಲಿ ಬದಲಾವಣೆ ಬಹಳ ನಿಧಾನವಾಗಿದ್ದರೂ ಸ್ಪಷ್ಟ ಸೂಚನೆಗಳು ಗೋಚರಿಸಿದವು. ಕಾರ್ಮಿಕ ವರ್ಗ, ಬಡವರು ಮತ್ತು ನಿರುದ್ಯೋಗಿಗಳ ಈ ಪ್ರತಿರೋಧ ಹೋರಾಟವು ಲ್ಯಾಟಿನ್ ಅಮೆರಿಕದಿಂದ ಯುರೋಪಿನ, ಆಸ್ಟ್ರೇಲಿಯಾ, ಆಫ್ರಿಕಾದಿಂದ ಭಾರತವನ್ನು ಒಳಗೊಂಡಂತೆ ಆಗ್ನೇಯ ಏಷ್ಯಾ ಮತ್ತು ಯುರೋ-ರಷ್ಯಾದ ಪ್ರದೇಶ ಸೇರಿದಂತೆ, ಬಹುತೇಕ ಇಡೀ ಜಗತ್ತನ್ನು ಒಳಗೊಂಡಿತು.

ಮೂಲ ಲೇಖಕರು: ಸುಕೋಮಲ್ ಸೇನ್ ಸಂಗ್ರಹ-ಅನುವಾದ: ಸಿ.ಆರ್. ಶಾನಭಾಗ

ಹಿಂದಿನ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿಯನ್ ದೇಶಗಳಲ್ಲಿನ ಸಮಾಜವಾದಿ ವ್ಯವಸ್ಥೆಯು ಅನುಭವಿಸಿದ ಗಂಭೀರ ಹಿನ್ನಡೆ ಮತ್ತು ಅಪಜಯ ಮತ್ತು ಹಿಂದಿನ ಸೋವಿಯತ್ ಒಕ್ಕೂಟವನ್ನು ಹಲವಾರು ಸ್ವತಂತ್ರ ರಾಜ್ಯಗಳಾಗಿ ವಿಭಜಿಸಿದ್ದು ಕಾರ್ಮಿಕ ವರ್ಗದ ಹೋರಾಟಗಳಿಗೆ ಮತ್ತು ಇಡೀ ಪ್ರಪಂಚದ ದುಡಿಯುವ ಜನರಿಗೆ ಆಘಾತ ತರಂಗವನ್ನು ಕಳುಹಿಸಿತ್ತು.

ಆದರೆ 1993 ರ ನಂತರದ ಬೆಳವಣಿಗೆಗಳು ಸಾಮ್ರಾಜ್ಯಶಾಹಿಗಳು, ಬಂಡವಾಳಶಾಹಿಗಳು ಮತ್ತು ಅವರ ಬೆಂಬಲಿಗರ ಎಲ್ಲ ನಿರೀಕ್ಷೆಗಳನ್ನು ಹುಸಿಗೊಳಿಸಿತು.

ತುಲನಾತ್ಮಕವಾಗಿ ಅನುಕೂಲಕರವಾದ ಈ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿಗೆ ಮಾನವ ಕುಲ ಎದುರಿಸುತ್ತಿರುವ ಮೂಲಭೂತ ಮತ್ತು ತುರ್ತಾದ ಸಮಸ್ಯೆಗಳಿಗೆ, ಯಾವುದೇ ಪರಿಹಾರವನ್ನು ನೀಡುವಂತೆ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಇದು ಅಪಾರ ಲಕ್ಷಾಂತರ ಜನರನ್ನು ದೌರ್ಜನ್ಯ, ನಿರ್ಗತಿಕತೆ, ಹಸಿವು ಮತ್ತು ಕಡುಬಡತನದ ಜೀವನಕ್ಕೆ ದೂಡುತ್ತಿದೆ. ಈ ಪರಿಸ್ಥಿತಿಯಲ್ಲಿ, ಯು.ಎಸ್. ಸಾಮ್ರಾಜ್ಯಶಾಹಿಯು ರಾಜಕೀಯ, ಮಿಲಿಟರಿ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ತನ್ನ ಪ್ರಾಬಲ್ಯವನ್ನು ಹೇರುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿದೆ..

ಪಾಶ್ಚಿಮಾತ್ಯ ದೇಶಗಳಲ್ಲಿನ ಆರ್ಥಿಕ ಹಿಂಜರಿತದ ಪರಿಣಾಮವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸಹ ಪಾವತಿಶೇಷದ ತೀವ್ರ ಬಿಕ್ಕಟ್ಟು, ಬಜೆಟ್ ಕೊರತೆ ಮತ್ತು ಭಾರೀ ಬಾಹ್ಯ ಸಾಲಗಳಿಂದಾಗಿ ಬಾಧಿತವಾಗಿವೆ. ಅವುಗಳನ್ನು ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್‌ನಿಂದ ಸಾಲ ಪಡೆಯುವಂತೆ ಒತ್ತಾಯಿಸಲಾಯಿತು ಮತ್ತು ಅವು ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಒಪ್ಪಬೇಕಾಯಿತು. ಡಂಕೆಲ್-ಕರಡು ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿತು.

ಯುಎಸ್ ಮತ್ತು ಅವರ ಮಿತ್ರರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಪೈಶಾಚಿಕ ಪ್ರಯತ್ನ, ಮತ್ತು ಈ ಕ್ರಮಗಳು ಆ ದೇಶಗಳ ರಾಜಕೀಯ ಸ್ವಾತಂತ್ರ್ಯದ ಮೇಲೂ ಪರಿಣಾಮ ಬೀರುತ್ತವೆ. ಆದ್ದರಿಂದ ಮುಚ್ಚುಮರೆಯಿಲ್ಲದ ಮಿಲಿಟರಿ ಹಸ್ತಕ್ಷೇಪದಿಂದ ಮತ್ತು ಆರ್ಥಿಕ ನುಗ್ಗುವಿಕೆಯ ಮೂಲಕ, ಅಮೇರಿಕಾ ಮತ್ತು ಅವರ ಮಿತ್ರರಾಷ್ಟ್ರಗಳು ಪ್ರಪಂಚದ ಉಳಿದ ಭಾಗಗಳಲ್ಲಿ ವಿಶೇಷವಾಗಿ ಮೂರನೇ ವಿಶ್ವದ ರಾಷ್ಟ್ರಗಳ ಮೇಲೆ ನಿಯಂತ್ರಣವನ್ನು ಸ್ಥಾಪಿಸಲು ತೀವ್ರವಾಗಿ ಪ್ರಯತ್ನಿಸುತ್ತಿವೆ.

ಸೋವಿಯತ್ ಒಕ್ಕೂಟದ ವಿಘಟನೆಯು ಕೆಲವು ಸ್ವಾರ್ಥಸಾಧಕ ಗುಂಪುಗಳು ಪ್ರಚಾರ ಮಾಡುತ್ತಿರುವಂತೆ ಜಗತ್ತಿನಲ್ಲಿ ಶಾಂತಿಯನ್ನು ತರಲಿಲ್ಲ. ಬದಲಾಗಿ ಇದು ಏಕಧ್ರುವೀಯ ಜಗತ್ತಿನಲ್ಲಿ ಅಮೇರಿಕಾ ಎಲ್ಲಾ ಮಿಲಿಟರಿ ಮತ್ತು ಆರ್ಥಿಕ ಶಕ್ತಿಗಳೊಂದಿಗೆ ತನ್ನ ಪ್ರಾಬಲ್ಯವನ್ನು ವಿಶ್ವದ ಇತರ ಭಾಗಗಳಲ್ಲಿ ಸ್ಥಾಪಿಸಲು ಕಾರಣಕರ್ತವಾಯಿತು.

ಈ ಅವಧಿಯು, ನಮ್ಮ ನೆರೆಯ ರಾಷ್ಟ್ರಗಳಲ್ಲಿ, ನೇಪಾಳ, ಬರ್ಮಾ, ಬಾಂಗ್ಲಾದೇಶ ಮತ್ತು ಸ್ವಲ್ಪ ದೂರದ ಫಿಲಿಪೈನ್ಸ್‌ನಲ್ಲಿ ಪ್ರಜಾಪ್ರಭುತ್ವದ ಪುನಃಸ್ಥಾಪನೆಗಾಗಿ ಹೋರಾಟಗಳ ಬೆಳವಣಿಗೆಗೆ ಸಾಕ್ಷಿಯಾಯಿತು. ನೇಪಾಳದಲ್ಲಿ, ಚುನಾವಣೆಗಳು ನಡೆದು ಹೊಸ ಸರ್ಕಾರವನ್ನು ಸ್ಥಾಪಿಸಲಾಯಿತು., ಬಾಂಗ್ಲಾದೇಶದಲ್ಲಿ, ಪ್ರಜಾಪ್ರಭುತ್ವ ಚುನಾವಣೆಗಳ ಮೂಲಕ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಪಾಕಿಸ್ತಾನದಲ್ಲೂ ಜನರ ಇಚ್ಛೆಯ ಆಧಾರದ ಮೇಲೆ ಹೊಸ ಸರ್ಕಾರವನ್ನು ರಚಿಸಲಾಯಿತು. ಫಿಲಿಪೈನ್ಸ್‌ನಲ್ಲಿಯೂ ಸಹ ಹಿಂದಿನ ಸರ್ವಾಧಿಕಾರಿ ಆಡಳಿತವನ್ನು ಜನರ ಹೋರಾಟದ ಮೂಲಕ ಹೊರಹಾಕಲಾಯಿತು. ಆದರೆ ಈ ಎಲ್ಲ ಸ್ವಾಗತಾರ್ಹ ಬೆಳವಣಿಗೆಗಳಿಗೆ ಜನರು ಅಪಾರ ತ್ಯಾಗ ಮಾಡಬೇಕಾಯಿತು. ಶ್ರೀಲಂಕಾದಲ್ಲಿ ರಕ್ತಪಾತ ಇನ್ನೂ ಮುಂದುವರೆದಿದೆ, ಇದು ಬಿಕ್ಕಟ್ಟಿನ ಆಳವನ್ನು ಸೂಚಿಸುತ್ತದೆ.

ಈ ಅವಧಿಯ ಇತರ ಪ್ರಮುಖ ರಾಜಕೀಯ ಬೆಳವಣಿಗೆ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ಕ್ರಮೇಣವಾಗಿ ಕಳಚಿಹಾಕಿದ್ದು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಅದರ ನಾಯಕ ನೆಲ್ಸನ್ ಮಂಡೇಲಾ ಅವರ ನೇತೃತ್ವದಲ್ಲಿ ಕಪ್ಪು-ಜನಾಂಗದ ಹೋರಾಟದ ಪರಿಣಾಮವಾಗಿ, ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬಿಳಿಯರ ವರ್ಣಭೇದ ನೀತಿಗೆ ಅಂತ್ಯ ಹಾಡಲಾಯಿತು. ಆದರೆ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ನ ಪ್ರಮುಖ ಚೇತನ, ಕ್ರಿಸ್ ಹನಿ ಅವರನ್ನು ಹತ್ಯೆ ಮಾಡುವಲ್ಲಿ ಪಿತೂರಿಗಾರರು ಯಶಸ್ವಿಯಾದರು.

ಅಮೇರಿಕದ ಒತ್ತಡಕ್ಕೆ ಮಣಿಯಲು ನಿರಾಕರಿಸುತ್ತಿರುವ ನಮ್ಮ ನೆರೆಯ ರಾಷ್ಟ್ರವಾದ ಚೀನಾದ ಸರ್ವತೋಮುಖ ಪ್ರಗತಿ ಎಲ್ಲರಿಗೂ ಭರವಸೆಯ ಬೆಳವಣಿಗೆಯಾಗಿದೆ. ಆಕ್ರಮಿತ ಪ್ರದೇಶಗಳ ಸೀಮಿತ ಮತ್ತು ಕ್ರಮೇಣ ಸ್ವಾಯತ್ತತೆಗಾಗಿ ಪ್ಯಾಲೇಸ್ಟಿನಿಯನ್ ಪಡೆಗಳು ಮತ್ತು ಇಸ್ರೇಲ್ ನಡುವಿನ ಈ ಅವಧಿಯಲ್ಲಿ ಸಹಿ ಹಾಕಿದ ಒಪ್ಪಂದವು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಹೊಸ ಬೆಳವಣಿಗೆಯಾಗಿದೆ.

ಎಐಟಿಯುಸಿಯ ಮಾಜಿ ಪ್ರಧಾನ ಕಾರ್ಯದರ್ಶಿ ಕಾಂ. ಬಿ ಡಿ ಜೋಶಿ ಅವರು 17 ಏಪ್ರಿಲ್ '99 ರಂದು ನಿಧನರಾದರು. ಸಿಐಟಿಯು ಕಾರ್ಯದರ್ಶಿಗಳಲ್ಲಿ ಒಬ್ಬರಾದ ಮತ್ತು ಕಾರ್ಮಿಕ ಮಹಿಳಾ ಚಳವಳಿಯ ಪ್ರಮುಖ ನಾಯಕರಾದ ಕಾಂ. ವಿಮಲ್ ರಣದಿವೆ ಅವರು ಜುಲೈ 23, 1999 ರಂದು ನಿಧನರಾದರು. ಅವರ ಸಾವು ಭಾರತದ ಟ್ರೇಡ್ ಯೂನಿಯನ್ ಆಂದೋಲನಕ್ಕೆ ತೀವ್ರ ನಷ್ಟವನ್ನುಂಟುಮಾಡಿತು.

ಕೇರಳದ ಮಾಜಿ ಮುಖ್ಯಮಂತ್ರಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಎಡ ಚಳವಳಿಯ ಉನ್ನತ ನಾಯಕರು ಮತ್ತು ವಿಚಾರವಾದಿಗಳಲ್ಲಿ ಒಬ್ಬರಾದ ಕಾಂ. ಇ ಎಂ ಎಸ್ ನಂಬೂದಿರಿಪಾಡ್ ಅವರು ಮಾರ್ಚ್ 19, 1998 ರಂದು ನಿಧನರಾದರು, ತ್ರಿಪುರದ ಮಾಜಿ ಮುಖ್ಯಮಂತ್ರಿ ಮತ್ತು ತ್ರಿಪುರದ ಬುಡಕಟ್ಟು ಜನರ ವಿಮೋಚನಾ ಹೋರಾಟದ ಐತಿಹಾಸಿಕ ನಾಯಕ ಕಾಂ.ದಶರಥ್ ದೇಬ್ 1998 ಅಕ್ಟೋಬರ್ 11 ರಂದು ನಿಧನರಾದರು.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಅಧ್ಯಯನ ವರದಿಗಳು ಬಹಿರಂಗಪಡಿಸಿದ ಭಯಾನಕ ಚಿತ್ರಣ

1999 ರ ವಿಶ್ವಸಂಸ್ಥೆಯ ಅಭಿವೃದ್ಧಿ ವರದಿ ಹೀಗೆ ಹೇಳುತ್ತದೆ: "20 ನೇ ಶತಮಾನದಲ್ಲಿ ಭಾರಿ ಪ್ರಗತಿಯ ಹೊರತಾಗಿಯೂ, ದೇಶಗಳು ಮತ್ತು ಪ್ರದೇಶಗಳಲ್ಲಿ ಭಾರಿ ಅಸಮಾನತೆಯನ್ನು ಉಂಟುಮಾಡುವ ಅಭಾವ ಮತ್ತು ಅಸಮಾನತೆಯ ದೊಡ್ಡ ಹಿಂದಿನ ಬಾಕಿಗಳನ್ನು ಇಂದು ಜಗತ್ತು ಎದುರಿಸುತ್ತಿದೆ .... ಬಡತನ ಎಲ್ಲೆಡೆ ವ್ಯಾಪಿಸಿದೆ. ಮಾನವ ಬಡತನ ಸೂಚ್ಯಂಕ(ಎಚ್‌ಪಿಐ-1)ದಿಂದ ಅಳತೆ ಮಾಡಿದಾಗ:

ಅಭಿವೃದ್ಧಿ ಹೊಂದುತ್ತಿರುವ ದೇಶಗಳ 4.5 ಶತಕೋಟಿ ಜನರಲ್ಲಿ ಕಾಲು ಭಾಗಕ್ಕಿಂತಲೂ ಹೆಚ್ಚು ಜನರು ಇನ್ನೂ ಜೀವನದ ಮೂಲಭೂತ ಆಯ್ಕೆಗಳಾದ- 40 ವರ್ಷ ಮೀರಿ ಬದುಕುಳಿಯುವಿಕೆ, ಜ್ಞಾನ ಮತ್ತು ಕನಿಷ್ಠ ಖಾಸಗಿ ಮತ್ತು ಸಾರ್ವಜನಿಕ ಸೇವೆಗಳಿಗೆ ಅವಕಾಶಗಳು, ಆಕರಗಳನ್ನು ಹೊಂದಿಲ್ಲ

-ಸುಮಾರು ನೂರ ಮೂವತ್ತು ಕೋಟಿ ಜನರಿಗೆ ಶುದ್ಧ ನೀರಿನ ಸೌಲಭ್ಯಗಳಿಲ್ಲ.

-ಪ್ರಾಥಮಿಕ ಶಾಲಾ ವಯಸ್ಸಿನ ಏಳು ಮಕ್ಕಳಲ್ಲಿ ಒಬ್ಬರು ಶಾಲೆಯಿಂದ ಹೊರಗುಳಿದಿದ್ದಾರೆ.

-ಸುಮಾರು 84 ಕೋಟಿ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

-ಅಂದಾಜು ನೂರ ಮೂವತ್ತು ಕೋಟಿ ಜನರು ದಿನಕ್ಕೆ 1 ಡಾಲರ್(1987ರ ಪಿಪಿಪಿ)ಗಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ (1987 ಮೌಲ್ಯದ ಪ್ರಕಾರ ಒಂದು ಡಾಲರ್ ಸರಿಸುಮಾರು 20 ರೂಪಾಯಿಗೆ ಸಮಾನವಾಗಿತ್ತು).

ನಿರುದ್ಯೋಗದ ಬಗ್ಗೆ, ಯುಎನ್‌ಡಿಪಿ 1998 ರ - ವರದಿ, ಹೀಗೆ ದಾಖಲಿಸಿತು:

* ಒಇಸಿಡಿ ದೇಶಗಳಲ್ಲಿ ಕನಿಷ್ಠ 3.7 ಕೋಟಿ ಜನರು ಉದ್ಯೋಗವಿಲ್ಲದೆ, ಅಸಮರ್ಪಕ ಆದಾಯದಿಂದ ವಂಚಿತರಾದ ನಂತರ ಮತ್ತು ತಮ್ಮ ದೇಶಗಳ ಜೀವನದಲ್ಲಿ ಭಾಗವಹಿಸಲಾಗದ ಕಾರಣ ಸಮಾಜದಿಂದ ಬಹಿಷ್ಕೃತರಾಗಿರುವ ಅಪಾಯವನ್ನು ಎದುರಿಸುತ್ತಿದ್ದಾರೆ.
* ಯುವಜನರಲ್ಲಿ(ವಯಸ್ಸು 15-24) ನಿರುದ್ಯೋಗ ದಿಗ್ಭ್ರಮೆಗೊಳಿಸುವ ಎತ್ತರಕ್ಕೆ ತಲುಪಿದೆ, ಫ್ರಾನ್ಸ್‌ನಲ್ಲಿ 32 ಪ್ರತಿಶತ ಯುವತಿಯರು ಮತ್ತು 22 ಪ್ರತಿಶತ ಯುವಕರು ನಿರುದ್ಯೋಗಿಗಳಾಗಿದ್ದಾರೆ, ಇಟಲಿಯಲ್ಲಿ 39 ಪ್ರತಿಶತ ಮತ್ತು 30 ಶೇಕಡಾ ಮತ್ತು ಸ್ಪೇನ್‌ನಲ್ಲಿ 49 ಪ್ರತಿಶತ ಮತ್ತು 36 ಶೇಕಡಾ.

ಚೀನಾದ ಬಲವಾದ ಆರ್ಥಿಕತೆ, ವಿಯೆಟ್ನಾಂನ ತ್ವರಿತ ಆರ್ಥಿಕ ಅಭಿವೃದ್ಧಿ, ಮತ್ತು ಅಮೇರಿಕಾದಿಂದ ಅಕ್ರಮ ದಿಗ್ಬಂಧನ ಮತ್ತು ಆರ್ಥಿಕ ನಿರ್ಬಂಧಗಳ ಹೊರತಾಗಿಯೂ ನಿಧಾನವಾದ ಆದರೆ ಸ್ಥಿರವಾದ ಬೆಳವಣಿಗೆಯನ್ನು ದಾಖಲಿಸುತ್ತಾ ವಿಶ್ವ ಆರ್ಥಿಕ ಬಿಕ್ಕಟ್ಟಿನಿಂದ ಬಹುಮಟ್ಟಿಗೆ ಪಾರಾದ ಕ್ಯೂಬಾದ ಸಾಮರ್ಥ್ಯ, ಮತ್ತು ಅಮೇರಿಕಾದ ಎಲ್ಲಾ ರೀತಿಯ ಬೆದರಿಕೆಗಳ ಹಿನ್ನೆಲೆಯಲ್ಲಿಯೂ ಉತ್ತರ ಕೊರಿಯಾದ ಪ್ರತಿರೋಧ, ಇವು ಬಂಡವಾಳಶಾಹಿಯ ಮೇಲೆ ಸಮಾಜವಾದಿ ವ್ಯವಸ್ಥೆಯ ಅಂತರ್ಗತ ಶ್ರೇಷ್ಠತೆಯನ್ನು ತೋರಿಸಿದವು.

ಕಾರ್ಮಿಕ ವರ್ಗದ ಜಾಗೃತಿ

ಬಂಡವಾಳಶಾಹಿ ಆಕ್ರಮಣವನ್ನು ತಡೆಯುವ ಅಗತ್ಯತೆಯನ್ನು ಅರಿತುಕೊಂಡು ಕಾರ್ಮಿಕ ವರ್ಗದ, ನೌಕರರ ಮತ್ತು ಇತರ ವಿಭಾಗಗಳ ಬಡವರ ಪ್ರಜ್ಞೆಯಲ್ಲಿ ಬದಲಾವಣೆ ಬಹಳ ನಿಧಾನವಾಗಿದ್ದರೂ ಸ್ಪಷ್ಟ ಸೂಚನೆಗಳು ಗೋಚರಿಸಿದವು. ಕಾರ್ಮಿಕ ವರ್ಗ, ಬಡವರು ಮತ್ತು ನಿರುದ್ಯೋಗಿಗಳ ಈ ಪ್ರತಿರೋಧ ಹೋರಾಟವು ಲ್ಯಾಟಿನ್ ಅಮೆರಿಕದಿಂದ ಯುರೋಪಿನ, ಆಸ್ಟ್ರೇಲಿಯಾ, ಆಫ್ರಿಕಾದಿಂದ ಭಾರತವನ್ನು ಒಳಗೊಂಡಂತೆ ಆಗ್ನೇಯ ಏಷ್ಯಾ ಮತ್ತು ಯುರೋ-ರಷ್ಯಾದ ಪ್ರದೇಶ ಸೇರಿದಂತೆ, ಬಹುತೇಕ ಇಡೀ ಜಗತ್ತನ್ನು ಒಳಗೊಂಡಿತು-

ಯುರೋಪಿಯನ್ ಖಂಡದಲ್ಲಿ 1997 ರ ಮಧ್ಯದಲ್ಲಿ ನಡೆದ ಚುನಾವಣೆಯಲ್ಲಿ ಫ್ರಾನ್ಸ್‌ನಲ್ಲಿ ಎಡಪಂಥೀಯರ ಗೆಲುವು ಮತ್ತು ಬಲಪಂಥೀಯ ಸರ್ಕಾರವನ್ನು ತಿರಸ್ಕರಿಸುವುದರೊಂದಿಗೆ, ಬಲಪಂಥೀಯ ಸರ್ಕಾರಕ್ಕಿಂತ ಭಿನ್ನವಾದ ಆರ್ಥಿಕ ನೀತಿಗಾಗಿ ಕಾರ್ಮಿಕ ಜನರ ಮನಸ್ಸಿನಲ್ಲಿ ಭರವಸೆಗಳು ಹುಟ್ಟಿಕೊಂಡವು. 1995 ಮತ್ತು 1996 ರಲ್ಲಿ ಫ್ರೆಂಚ್ ಕಾರ್ಮಿಕ ವರ್ಗವು ಸಮರಶೀಲ ಹೋರಾಟಗಳಲ್ಲಿ ಮುನ್ನುಗ್ಗಿತು. ಆದರೆ ಸೋಶಲಿಸ್ಟ್ ಪಕ್ಷದ ನೇತೃತ್ವದ ಸರ್ಕಾರವು ಸಾಕಷ್ಟು ಕ್ರಮಗಳನ್ನು ಕೈಗೊಳ್ಳುವಲ್ಲಿ ಹಿಂಜರಿದಾಗ, ಅಲ್ಲಿ ಒಂದು ಹೊಸ ಹೋರಾಟ ಪ್ರಾರಂಭವಾಗಿ, ಸೆಪ್ಟೆಂಬರ್ '98 ವಿಸ್ತಾರವನ್ನು ಪಡೆಯಿತು ಮತ್ತು ಹೆಚ್ಚಿನ ರಿಯಾಯತಿಗಳನ್ನು ಸರ್ಕಾರ ಘೋಷಿಸಬೇಕಾಗಿ ಬಂತು.

ಅಮೇರಿಕಾದಲ್ಲಿ ಸಹ, ಇಡೀ ಕಾರ್ಮಿಕ ವರ್ಗವು ಅಧೀನವಾಗಿ ಉಳಿಯಲಿಲ್ಲ. ಪ್ರತಿಭಟನೆಗಳು ಹೆಚ್ಚುತ್ತ ನಡೆದವು. 1998 ರ ಅಂತ್ಯದ ವೇಳೆಗೆ, ಕಾರು ಉತ್ಪಾದನಾ ಕಾರ್ಮಿಕರು ವಾಹನ ಉದ್ಯಮದ ವಿಶ್ವಾದ್ಯಂತ ಹಿಂಜರಿತದಿಂದಾಗಿ ಅವರ ಮೇಲೆ ನಡೆದ ಉದ್ಯೋಗ ಕಡಿತದ ದಾಳಿಯ ವಿರುದ್ಧ ಅತ್ಯಂತ ಸಮರಶೀಲ ಐತಿಹಾಸಿಕ ಹೋರಾಟಗಳನ್ನು ನಡೆಸಿದರು. ಬ್ರಿಟನ್‌ನಲ್ಲಿ ಲಂಡನ್ ಒಂದರಲ್ಲೇ 50,000 ಕಾರ್ಮಿಕರು ಉದ್ಯೋಗ ಕಡಿತದ ಬೆದರಿಕೆಗೆ ಒಳಗಾದರು ಮತ್ತು ಆ ವರ್ಷದ ಅಂತ್ಯದ ವೇಳೆಗೆ ಎಂಜಿನಿಯರಿಂಗ್ ಉದ್ಯಮದಲ್ಲಿ ಸುಮಾರು 1,70,000 ಉದ್ಯೋಗಗಳು ಕಣ್ಮರೆಯಾಗುವ ಸಾಧ್ಯತೆ ಉಂಟಾಯಿತು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸಾಮಾಜಿಕ ಭದ್ರತಾ ಕ್ರಮಗಳಲ್ಲಿನ ತೀವ್ರ ಕಡಿತವು ಸಾರ್ವಜನಿಕ ಸೇವಾ ಕಾರ್ಮಿಕರಲ್ಲಿ ತೀವ್ರ ಅಸಮಾಧಾನ ಉಂಟುಮಾಡಿತು. ಸಮರಶೀಲ ಮತ್ತು ರಾಜಿಯಾಗದ ಟ್ರೇಡ್ ಯೂನಿಯನ್ ನಾಯಕತ್ವ ಒದಗಿದ್ದರೆ, ಈ ಬೃಹತ್ ನಿರುದ್ಯೋಗ ಮತ್ತು ಸಾಮಾಜಿಕ ಭದ್ರತಾ ಕ್ರಮಗಳ ಕಡಿತವು ಬಂಡವಾಳಶಾಹಿಯ ತೀವ್ರ ಬಿಕ್ಕಟ್ಟಿನ ಪರಿಣಾಮದ ವಿರುದ್ಧ ಬ್ರಿಟನ್‌ನಲ್ಲಿ ಸಮರಶೀಲ ಟ್ರೇಡ್ ಯೂನಿಯನ್ ಹೋರಾಟಕ್ಕೆ ಸಾಕ್ಷಿಯಾಗಬಹುದಿತ್ತು. ಇಟಲಿ, ಸ್ಪೇನ್, ಪೋರ್ಚುಗಲ್ ಮತ್ತು ಇತರ ಯುರೋಪಿಯನ್ ದೇಶಗಳಲ್ಲಿ ವಿಭಿನ್ನ ರೂಪಗಳಲ್ಲಿ ಹೋರಾಟಗಳು ಮುಂದಕ್ಕೆ ಸಾಗಿದವು.

ವಿದ್ಯಾರ್ಥಿಗಳು, ಶಿಕ್ಷಕರು, ನಿರುದ್ಯೋಗಿ ಯುವಜನರು ಮತ್ತು ಇಡೀ ಸಾರ್ವಜನಿಕ ಸೇವಾ ಕಾರ್ಮಿಕರು ಸೇರಿಕೊಂಡ 1996 ರ ಡಿಸೆಂಬರ್‌ನಲ್ಲಿ ದಕ್ಷಿಣ ಕೊರಿಯಾದಲ್ಲಿ ನಡೆದ ಮಹಾನ ಕಾರ್ಮಿಕ ವರ್ಗದ ದಂಗೆಗಳ ನಂತರ, ಆ ದೇಶದಲ್ಲಿ ನವ-ಉದಾರವಾದಿ ಆರ್ಥಿಕ ದಾಳಿಗಳ ವಿರುದ್ಧ, ಕಾರ್ಮಿಕ ವರ್ಗ ಮತ್ತು ವಿದ್ಯಾರ್ಥಿಗಳ ಪಟ್ಟು ಹಿಡಿದ ಪ್ರತಿಭಟನಾ ಕ್ರಮಗಳ ಪ್ರವಾಹವೇ ಹರಿಯಿತು.

ಇಂಡೋನೇಷ್ಯಾದಲ್ಲಿ ದುಡಿಯುವ ಜನರ ಸಮರಶೀಲ ಬಂಡಾಯಗಳು ಸರ್ವಾಧಿಕಾರಿ ಸುಹಾರ್ತೊ ಅವರನ್ನು ಹೊರಹಾಕುವ ಮಟ್ಟಕ್ಕೆ ತಲುಪಿದವು ಮತ್ತು ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು ಉದ್ಯೋಗಗಳು, ಜೀವನಾವಶ್ಯಕ ವೇತನ ಮತ್ತು ಸಂಘಟನೆಯ ಸ್ವಾತಂತ್ರ್ಯಕ್ಕೆ ಒತ್ತಾಯಿಸಿ, ದಿನನಿತ್ಯ ಮುಷ್ಕರ ಮತ್ತು ಪ್ರದರ್ಶನಗಳನ್ನು ನಡೆಸಿದರು., ಈ ದುಡಿಯುವ ಜನರ ಹೋರಾಟದ ಮಧ್ಯೆ, ಇಂಡೋನೇಷ್ಯಾ ರಾಷ್ಟ್ರವ್ಯಾಪಿ ಚುನಾವಣೆಯೊಂದನ್ನು ನಡೆಸಿತು, 1964 ರಲ್ಲಿ ಸುಹಾರ್ತೊ ಅವರ ಮಿಲಿಟರಿ ದಂಗೆಯ ನಂತರ ಮೊದಲ ಬಾರಿಗೆ ನಡೆದ ಚುನಾವಣೆಯಲ್ಲಿ ಮೆಗಾವತಿ ಸುಕರ್ಣೊಪುತ್ರಿ

ಪುಟ 14 ನೋಡಿ

ಲಸಿಕೀಕರಣ 'ದಾಖಲೆ' ಮತ್ತು 'ಥ್ಯಾಂಕ್ಯೂ ಪಿಎಂ'

ನ್ಯೂಇಂಡಿಯಾನ್ಯೂಸ್

ಜೂನ್ 21 ಕೇಂದ್ರ ಸರಕಾರದ ಹೊಸ ಲಸಿಕೆ ಕಾರ್ಯಕ್ರಮ ಜಾರಿಗೆ ಬಂದಿರುವ ದಿನ– ಮೇ ತಿಂಗಳ ಲಸಿಕೆ ಕೊರತೆಯ ನಂತರ ದಾಖಲೆ ನಿರ್ಮಿಸಿದ ದಿನ. ಒಂದೇ ದಿನ 82,70,212 ಡೋಸ್‌ಗಳನ್ನು ನೀಡಲಾಯಿತು. ಇದಕ್ಕೆ ಮೊದಲು ಎಪ್ರಿಲ್20 ರಂದು ಪ್ರಧಾನಿಗಳು ದೇಶವನ್ನುದ್ದೇಶಿಸಿ ಪ್ರಕಟಿಸಿದ ಹಿಂದಿನ 'ಉದಾರೀಕೃತ ಲಸಿಕೆ ನೀತಿ' ಮೇ 1ರಂದು ಜಾರಿಗೆ ಬಂದ ಮೇಲೆ ಮೇ 11ರಿಂದ 20ರ ನಡುವೆ ಪ್ರತಿದಿನ ಸರಾಸರಿ 15.7 ಲಕ್ಷ ಡೋಸ್‌ಗಳನ್ನು ನೀಡಲಾಗಿತ್ತು. ಜೂನ್ 1ರಂದು ದೇಶದ ಸರ್ವೋಚ್ಚ ನ್ಯಾಯಾಲಯ ಈ ನೀತಿ "ನಿರಂಕುಶ ಮತ್ತು ತರ್ಕಹೀನ" ಎಂದು ಹೇಳಿದ ಮೇಲೆ ಜೂನ್ 7ರಂದು ಪ್ರಧಾನಿಗಳು ದೇಶವನ್ನುದ್ದೇಶಿಸಿ ಮಾಡಿದ ಇನ್ನೊಂದು ಭಾಷಣದಲ್ಲಿ ಹೊಸ ಲಸಿಕೆ ನೀತಿಯನ್ನು ಪ್ರಕಟಿಸಿದರು. ಹಲವರು ಕೇಂದ್ರ ಸರಕಾರದ ಯು–ಟರ್ನ್ ಎಂದು ವರ್ಣಿಸಿರುವ ಈ ಪ್ರಕಟಣೆಯ ನಂತರ ಜೂನ್ 11ರಿಂದ 20ರ ನಡುವೆ ಈ ಸರಾಸರಿ 34 ಲಕ್ಷ ಡೋಸ್‌ಗಳಿಗೇರಿತು. ಜೂನ್ 21 ರಂದು ಇದು 82 ಲಕ್ಷಕ್ಕೆ ಏರಿತು.

ಈ ನಡುವೆ ಯುಜಿಸಿ (ವಿಶ್ವವಿದ್ಯಾಲಯ ಅನುದಾನ ಅಯೋಗ)ದ ಅಧ್ಯಕ್ಷರು ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು "ಪ್ರಧಾನ ಮಂತ್ರಿ ಮೋದಿಯವರಿಗೆ ಜಗತ್ತಿನ ಅತಿ ದೊಡ್ಡ ಉಚಿತ ಲಸಿಕೆ ಅಭಿಯಾನ ಆರಂಭಿಸಿದ್ದಕ್ಕೆ ಧನ್ಯವಾದಗಳು" ಎಂಬ ಪೋಸ್ಟರುಗಳನ್ನು ಮತ್ತು ಫಲಕಗಳನ್ನು ಹಾಕಬೇಕೆಂದು ಸುತ್ತೋಲೆ ಕಳಿಸಿದರು, ಇದನ್ನು ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಂಘಟನೆಗಳು ಖಂಡಿಸಿವೆ ಎಂದು ವರದಿಯಾಗಿದೆ.

"ಯುಜಿಸಿ ಯಾರನ್ನು ಮರುಳು ಮಾಡುತ್ತಿದೆ? ನಾವು ಜನಗಳಿಗೆ ವಿಶ್ವದ್ಯಾಲಯದಲ್ಲಿ ಲಸಿಕೆ ಹಾಕಿಸಲು ಎಷ್ಟೊಂದು ಓಡಾಡಿದೆವು. ಕೊನೆಗೂ ವಿವಿ ಆಡಳಿತ ಖಾಸಗಿ ಆಸ್ಪತ್ರೆಗಳವರನ್ನು ಕರೆಸಿ ಲಸಿಕೆ ಕೊಡಿಸಿದರು. ಅದಕ್ಕೆ ಪ್ರತಿಯೊಬ್ಬರೂ ಹಣ ತೆತ್ತ ನಂತರವೇ ಅದು ಸಿಕ್ಕಿದ್ದು" ಎನ್ನುತ್ತಾರೆ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ.

ಉಚಿತ ಲಸಿಕೆ ಹಾಕಿಸುವುದು ಯಾವುದೇ ಚುನಾಯಿತ ಸರಕಾರದ ಕರ್ತವ್ಯ. ಅದರಲ್ಲಿ ವಿಶ್ವವಿದ್ಯಾಲಯಗಳನ್ನು ಎಳೆಯುವ ಅಗತ್ಯವಾದರೂ ಏನು ಎಂಬುದನ್ನು ಯುಜಿಸಿಯೇ ವಿವರಿಸಬೇಕು ಎಂದು ಇನ್ನೊಂದು ವಿವಿಯ ಸಮಾಜಶಾಸ್ತ್ರ ಅಧ್ಯಾಪಕರು ಹೇಳಿದ್ದಾರೆ.

"ಆತಂಕಕಾರಿ ಸಂಗತಿಯೆಂದರೆ ಒಂದೊಮ್ಮೆ ಅಧ್ಯಯನ ಮತ್ತು ವಿಚಾರಶೀಲತೆಯ ಕೇಂದ್ರಗಲಾಗಿದ್ದ ವಿಶ್ವವಿದ್ಯಾಲಯಗಳು ಈಗ ಸರಕಾರದ ನಿರ್ದೇಶನಗಳನ್ನು ಕುರುಡಾಗಿ ಪಾಲಿಸುತ್ತಿವೆ. ಈಗಾಗಲೇ ವಿಜ್ಞಾನಿಗಳು, ವೈದ್ಯಕೀಯ ಪರಿಣಿತರು ಮೂರನೇ ಅಲೆಗೆ ಸಿದ್ಧವಾಗಬೇಕಾದೀತು ಎಂದು ಹೇಳುತ್ತಿರುವಾಗ, ಆರಂಭದಿಂದಲೂ ಅವೈಜ್ಞಾನಿಕವಾಗಿ ವರ್ತಿಸಿರುವ ಈ ಸರಕಾರ ಈಗ ತನ್ನ ಪ್ರಚಾರವನ್ನು ಜನ ನಂಬಬೇಕೆಂದು ಬಯಸುತ್ತಿದೆ" ಎಂದು ದಿಲ್ಲಿಯ ಕಾಲೇಜಿನ ಭೌತಶಾಸ್ತ್ರ ಪ್ರಾಧ್ಯಾಪಕರು ಖೇದ ವ್ಯಕ್ತಪಡಿಸಿದ್ದಾರೆ(ನ್ಯುಸ್‌ಕ್ಲಿಕ್, ಜೂನ್24).


ಲಸಿಕೀಕರಣದ ಕುರಿತು ಕ್ರಮಾನುಗತ ಮಾರ್ಗನಿರ್ದೇಶನಗಳು



ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಫಸ್ಟ್ ಪೋಸ್ಟ್

೩೦ ನಿಮಿಷ ಇಲ್ಲಿ ಕಾಯಬೇಕು

'ಥ್ಯಾಂಕ್ಯು ಮೋದೀಜೀ'–'ಥ್ಯಾಂಕ್ಯು ಮೋದೀಜೀ'–'ಥ್ಯಾಂಕ್ಯು ಮೋದೀಜೀ'




ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ನ್ಯೂಸ್‌ಸ್ಟಿಂಗ್

ಇಂತಹ ಜಾಹೀರಾತು ಫಲಕಗಳು ಕರ್ನಾಟಕ ಸೇರಿದಂತೆ, ದೇಶದೆಲ್ಲೆಡೆಗಳಲ್ಲಿ, ವಿಶೇಷವಾಗಿ ಬಿಜೆಪಿ ಸರಕಾರಗಳಿರುವ ರಾಜ್ಯಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಅಂದು ರಾರಾಜಿಸಿದವು ಎಂದು ವರದಿಯಾಗಿವೆ.

ಲಸಿಕೆ ಡೋಸ್‌ಗಳ ಈ ಲೆಕ್ಕವನ್ನು ನೋಡಿ: ಜೂನ್19ರಂದು 41,8 ಲಕ್ಷ ಇದ್ದದ್ದು, ಜೂನ್ 20ರಂದು 4.3ಲಕ್ಷಕ್ಕೆ ಸರ್ರನೆ ಇಳಿಯಿತು, ಜೂನ್ 21ರಂದು 82 ಲಕ್ಷಕ್ಕೆ ನೆಗೆಯಿತು, ಮತ್ತೆ ಜೂನ್ 22ರಂದು 54 ಲಕ್ಷಕ್ಕೆ ಇಳಿಯಿತು. ಇಂತಹ ಪ್ರಚಾರ ಗಿಮ್ಮಿಕ್ಕುಗಳು ನಮಗೆ ಮೂರನೇ ಅಲೆಯಿಂದ ರಕ್ಷಣೆ ಕೊಡದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟ್ವೀಟ್ ಮಾಡಿದ್ದಾರೆ.

ಇನ್ನೊಂದು ಅಂಕಿ–ಅಂಶ ನೋಡಿ:ಈ 'ದಾಖಲೆ' ಲಸಿಕೆಯ ನಂತರವೂ ಜೂನ್ 24ರಂದು ದೇಶದಲ್ಲಿ ಪೂರ್ಣವಾಗಿ ಲಸಿಕೆ ಪಡೆದವರ ಪ್ರಮಾಣ ಇನ್ನೂ 3.9% ಮಾತ್ರ, ಒಂದು ಡೋಸ್ ಪಡೆದವರ ಪ್ರಮಾಣವೂ 18.8%. ಬೇರೆ ಕೆಲವು ದೇಶಗಳ ಪೂರ್ಣ ಲಸಿಕೀಕರಣದ ಈ ಮಾಹಿತಿಯೊಂದಿಗೆ ಹೋಲಿಸಿ ನೋಡಿ:



ಕೊವಿಡ್‌ಗೆ ಬಲಿಯಾದವರ ಕುಟುಂಬಗಳಿಗೆ ಕಾಯ್ದೆ ಪ್ರಕಾರ ಪರಿಹಾರ ಕೊಡದಿರಲು ಸರ್ಕಾರ ನಿರ್ಧರಿಸಿದೆಯೇ?– ಸುಪ್ರಿಂ ಕೋರ್ಟ್ ಪ್ರಶ್ನೆ

ಈ ಲಸಿಕೆ ದಾಖಲೆ ದಿನದಂದೇ ಸುಪ್ರಿಂ ಕೋರ್ಟ್ ಕೊವಿಡ್–19ರಿಂದ ತಮ್ಮ ಪ್ರಿಯಜನರನ್ನು ಕಳಕೊಂಡ ಕುಟುಂಬಗಳಿಗೆ ಅನುಕಂಪದ ಪರಿಹಾರ ಧನವನ್ನು ಕೊಡುವುದಿಲ್ಲ ಎಂದು ಕೇಂದ್ರ ಸರಕಾರ ನಿರ್ಧರಿಸಿದೆಯೇ ಎಂದು ಸಾಲಿಸಿಟರ್ ಜನರಲ್ ಅವರನ್ನು ಸ್ಪಷ್ಟೀಕರಣ ಕೇಳಿತು.

ಮೋದಿ ಸರಕಾರ ಕೊವಿಡ್ ಮಹಾಸೋಂಕು ನಿರ್ವಹಣೆಗೆ ವಿಪತ್ತು ನಿರ್ವಹಣಾ ಕಾಯ್ದೆಯನ್ನು ಬಳಸಿದ್ದು, ಈ ಕಾಯ್ದೆಯ ಅಡಿಯಲ್ಲಿ ಸರಕಾರ ವಿಪತ್ತಿಗೆ ಬಲಯಾದವರ ಕುಟುಂಬಗಳಿಗೆ ರೂ.4ಲಕ್ಷ ಪರಿಹಾರ ಧನವನ್ನು ಕೊಡಬೇಕು ಎಂಬುದನ್ನು ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯ ಸಂದರ್ಭದಲ್ಲಿ ಈ ಸ್ಪಷ್ಟೀಕರಣವನ್ನು ಕೇಳಿತು.

ಈ ಮೊದಲು ಜೂನ್11ರಂದು ಈ ವಿಷಯ ಸರಕಾರದ ಪರಿಶೀಲನೆಯಲ್ಲಿ ಇದೆ ಎಂದು ಸರಕಾರ ತಿಳಿಸಿತ್ತು. ಆದರೆ ಕೆಲವು ದಿನಗಳ ನಂತರ ಸಲ್ಲಿಸಿದ ಅಫಿಡವಿಟ್‌ನಲ್ಲಿ ಸಂಪನ್ಮೂಲಗಳ ಮಿತಿಯಿಂದಾಗಿ ಇದನ್ನು ಕೊಡಲು ಸಾಧ್ಯವಾಗುವದಿಲ್ಲ ಎಂದು ತಿಳಿಸಿತ್ತು.

ಈ ಅಫಿಡವಿಟ್‌ನ ಸುದ್ದಿಗೆ ವ್ಯಾಪಕ ಟೀಕೆಗಳು ಬಂದಿದ್ದವು.

ಈ ಬಗ್ಗೆ ಜೂನ್ 21ರಂದು ಕೇಂದ್ರ ಸರಕಾರದ ವಕೀಲರು 'ಸ್ಪಷ್ಟೀಕರಣ' ಕೊಡುತ್ತ, ಸರಕಾರದ ಬಳಿ ಹಣವಿಲ್ಲ ಎಂದೇನಲ್ಲ, ಆದರೆ ಸರಕಾರ ಈ ಹಣವನ್ನು ಒಂದು ಬಾರಿಯ ಪರಿಹಾರದ ಬದಲು ಕೊವಿಡ್ ಮಹಾಸೋಂಕನ್ನು ನಿಭಾಯಿಸಲು ಸಂಬಂಧಪಟ್ಟ ಇತರ ಬಾಬ್ತುಗಳಿಗೆ ಗಮನ ಕೇಂದ್ರೀಕರಿಸಲು ಬಳಸಬೇಕೆಂದಿದೆ ಎಂದರು. ಅವರು ಹಣಕಾಸು ಆಯೋಗ 2021–26ರ ಅವಧಿಗೆ ವಿಪತ್ತು ನಿರ್ವಹಣಾ ಮೊತ್ತವನ್ನು ಆಗಲೇ ನಿಗದಿ ಪಡಿಸಿರುವುದರಿಂದ ಇದನ್ನು ಬದಲಿಸಲಾಗದು ಎಂದೂ ಹೇಳಿದರು.

ಆದರೆ ಇದು ಸರಕಾರದ ಬಳಿ ಸಂಪನ್ಮೂಲ ಇದೆಯೇ ಇಲ್ಲವೇ ಎಂಬ ವಿಷಯವಲ್ಲ ಎಂದ ನ್ಯಾಯಪೀಠ "ಅನುಕಂಪದ ಪರಿಹಾರ ನೀಡುವ ಅಗತ್ಯವಿಲ್ಲ ಎಂಬ ನಿರ್ಧಾರ ಮಾಡಲಾಗಿದೆಯೇ? ಈ ಕುರಿತು ಒಂದು 'ನಿರ್ಣಯ ಇದೆಯೇ? ಅಥವ ಇದು 'ನಿರ್ಧಾರವಿಲ್ಲ'ದ ಪ್ರಕರಣವೇ?" ಎಂದು ಪೀಠದ ಒಬ್ಬ ನ್ಯಾಯಾಧೀಶರು ಕೇಳಿದರೆ, ಇನ್ನೊಬ್ಬರು ಕೂಡ "ಅನುಕಂಪದ ಪರಿಹಾರ ಕೊಡುವ ಅಗತ್ಯವಿಲ್ಲ ಎಂಬ ನಿರ್ಧಾರ ಎಲ್ಲಿದೆ?" ಎಂದು ಕೇಳಿದರು. ಕೊವಿಡ್–19 ಒಮ್ಮೆ ಬಂದು ಹೋಗುವ ವಿಪತ್ತು ಅಲ್ಲ ಎನ್ನುವ ಮೂಲಕ ಸರಕಾರ ಇಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ ಅನ್ವಯವಾಗುವುದಿಲ್ಲ ಎಂದು ಹೇಳುತ್ತಿದೆಯೇ ಎಂದೂ ಕೇಳಿದರು.

ನ್ಯಾಯಪೀಠ ಈ ಅರ್ಜಿಗಳ ಮೇಲೆ ತೀರ್ಪನ್ನು ಕಾದಿರಿಸಿದೆ.

ಅತಿ–ನವ ಉದಾರಿ ಧೋರಣೆಯ ದುಷ್ಪರಿಣಾಮ

ವಿಪತ್ತು ನಿರ್ವಹಣಾ ಕಾಯ್ದೆಯನ್ನು ಬಳಸಿದ ಮೇಲೆ ಪರಿಹಾರದ ಬಗ್ಗೆ ಮೀನಮೇಷ ಎಣಿಸುತ್ತಿರುವುದು ವಾಸ್ತವವಾಗಿ ಈ ಸರಕಾರದ ವಿಪರೀತ ನವ–ಉದಾರವಾದಿ ನಿಲುವಿನಿಂದಾಗಿ ಎನ್ನುತ್ತಾರೆ ಆರ್ಥಿಕ ತಜ್ಞ ಡಾ. ವೆಂಕಟೇಶ ಆತ್ರೇಯ. ಇದರಲ್ಲಿ ಆಶ್ಚರ್ಯವೇನಿಲ್ಲ, ಈ ಮಹಾಸೋಂಕಿನ ಅವಧಿಯಾದ್ಯಂತ ಈ ಸರಕಾರ ಇದೇ ನಿಲುವನ್ನು ತಳೆದಿದೆ, ಕಳೆದ 15 ತಿಂಗಳಲ್ಲಿ ದೇಶದ ಜನಸಂಖ್ಯೆಯ 80ಶೇ.ದಷ್ಟು ತಮ್ಮ ಜೀವನಾಧಾರಗಳನ್ನು ಕಳೆದುಕ್ಕೊಂಡಿದ್ದರೂ, ಅವರಿಗೆ ಕನಿಷ್ಟ ಪರಿಹಾರವನ್ನೂ ನಿರಾಕರಿಸಿರುವ ಸರಕಾರ ಇದು ಎಂದು ಅವರು ಹೇಳುತ್ತಾರೆ.

ಸರಕಾರದ ವಿತ್ತೀಯ ಕೊರತೆ ಯಾರೋ ನಿರ್ಧರಿಸಿದ ಪ್ರಮಾಣವನ್ನು ಮೀರಬಾರದು ಎಂಬ ನವ–ಉದಾರವಾದಿ ಮೂಢನಂಬಿಕೆಗೆ ಈ ಸರಕಾರ ಆತುಕೊಂಡಿರುವುದಷ್ಟೇ ಕಾರಣವಲ್ಲ, ಈ ಕೊರತೆ ಪ್ರಮಾಣವನ್ನು ಖರ್ಚುಗಳನ್ನು ಕಡಿಮೆ ಮಾಡುವ ಮೂಲಕವೇ ಕಾಯ್ದುಕೊಳ್ಳಬೇಕು ಎಂಬ ಅತಿ ನವ–ಉದಾರವಾದಿ ನಿಲುವು ಇದಕ್ಕೆ ಕಾರಣ ಎನ್ನುತ್ತಾರೆ ಅವರು. ಏಕೆಂದರೆ ವಿತ್ತೀಯ ಕೊರತೆಯ ಪ್ರಮಾಣವನ್ನು ಆದಾಯಗಳನ್ನು ಹೆಚ್ಚಿಸುವ ಮೂಲಕವೂ ಕಾಯ್ದುಕೊಳ್ಳಲು ಸಾಧ್ಯವಿದೆ. ಆದರೆ ಅದಕ್ಕೆ ಜನಸಂಖ್ಯೆಯ ಶ್ರೀಮಂತ ವಿಭಾಗಗಳಿಂದ ತೆರಿಗೆಗಳ ಮೂಲಕ ಸಂಪನ್ಮೂಲ ಸಂಗ್ರಹಿಸಬೇಕು. ತದ್ವಿರುದ್ಧವಾಗಿ, ಈ ಸರಕಾರ ಕಳೆದ ಏಳುವರ್ಷಗಳಲ್ಲಿ ಈವಿಭಾಗಕ್ಕೇ ಹೆಚ್ಚು–ಹೆಚ್ಚು ರಿಯಾಯ್ತಿಗಳನ್ನು ಕೊಟ್ಟು ಸಂಪನ್ಮೂಲಗಳನ್ನು ಕಳೆದುಕೊಂಡಿದೆ, ಮತ್ತು ಅದನ್ನು ಸರಿತೂಗಿಸಲು ವೆಚ್ಚಗಳನ್ನು ಕಡಿತ ಮಾಡಿದೆ.ಇನ್ನೊಂದೆಡೆಯಲ್ಲಿ ಪೆಟ್ರೋಲ್–ಡೀಸೆಲ್ ಮೇಲೆ ಹೆಚ್ಚೆಚ್ಚು ಸುಂಕಗಳನ್ನು ಹೇರುವ ಮೂಲಕ ಜನಸಾಮಾನ್ಯರಿಂದಲೇ ಲೂಟಿ ಮಾಡಿದೆ ಎಂಬ ಸಂಗತಿಯತ್ತ ಆತ್ರೇಯರವರು ಗಮನ ಸೇಳೆಯುತ್ತಾರೆ.



(ಬದುಕಿದ್ದಾಗ) 15 ಲಕ್ಷ ಕೊಡಲಿಲ್ಲ–(ಸತ್ತ ಮೇಲೆ) 4 ಲಕ್ಷವಾದರೂ ಕೊಡಿ


ವ್ಯಂಗ್ಯಚಿತ್ರ ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್

2019ರಲ್ಲಿ ಎರಡನೇ ಬಾರಿಗೆ ಅಧಿಕಾರಕ್ಕೆ ಮರಳಿದ ನಂತರವೇ ಅತಿ–ಶ್ರೀಮಂತ ವಿಭಾಗಕ್ಕೆ ಮತ್ತು ದೊಡ್ಡ ಕಾರ್ಪೊರೇಟ್‌ಗಳಿಗೆ ನೀಡಿದ ರಿಯಾಯ್ತಿಗಳನ್ನು ಅವರು ಹೀಗೆ ಪಟ್ಟಿ ಮಾಡಿದ್ದಾರೆ:

* ಶೇರು ಮಾರುಕಟ್ಟೆಯಲ್ಲಿ ಬಂಡವಾಳ ಗಳಿಕೆಯ ಮೇಲೆ ತಾನೇ ವಿಧಿಸಿದ್ದ ಸರ್‌ಚಾರ್ಜ್ ತೆಗೆದು ಹಾಕಿ ರೂ. 10000 ಕೋಟಿ
* ಹೆಚ್ಚುವರಿ ರಫ್ತು ಸಬ್ಸಿಡಿಗಳು ರೂ. 50,000 ಕೋಟಿ
* ವಸತಿ ಮತ್ತು ರಿಯಲ್ ಎಸ್ಟೇಟ್ ರಿಯಾಯ್ತಿಗಳು ರೂ. 20,000 ಕೋಟಿ
* ಕಾರ್ಪೊರೇಟ್ ತೆರಿಗೆ ದರವನ್ನು 22%ಕ್ಕೆ ಇಳಿಸಿ ರೂ. 1.45 ಲಕ್ಷ ಕೋಟಿ
* 2020ರ ಬಜೆಟಿನಲ್ಲಿ ಮತ್ತೆ ನೇರ ತೆರಿಗೆಗಳಲ್ಲಿ ರಿಯಾಯ್ತಿಗಳು ರೂ. 65,000 ಕೋಟಿ

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಗಳು ಇಳಿಯುತ್ತಿದ್ದಾಗಲೂ ಅದರ ಪ್ರಯೋಜನವನ್ನು ಬಳಕೆದಾರರಿಗೆ ವರ್ಗಾಯಿಸುವ ಬದಲು, ಅಬಕಾರಿ ಸುಂಕಗಳನ್ನು ಹೆಚ್ಚಿಸಲಾಯಿತು. ಇದರಿಂದ 2014–15ರಲ್ಲಿ ಅಬಕಾರಿ ಸುಂಕಗಳಿಂದ ಕೇಂದ್ರ ಖಜಾನೆಗೆ 99ಲಕ್ಷ ಕೋಟಿ ರೂ.ಗಳು ಸಂಗ್ರಹವಾಗಿದ್ದರೆ, 2020–21ರಲ್ಲಿ ಮೊದಲ 9ತಿಂಗಳಲ್ಲೆ ಇದು 2.36ಲಕ್ಷ ಕೋಟಿರೂ.ಗಳಿಗೆ ಏರಿತು, ಅಂದರೆ 138% ಏರಿಕೆ.

ಜಿ-7 ದೇಶಗಳ ಮೇಜಿನಿಂದ ಒಂದು ತುಣುಕು ರೊಟ್ಟಿ



ಜಿ–7 ದೇಶಗಳು “ಅಭಿವೃದ್ಧಿಶೀಲ” ದೇಶಗಳಿಗೆ ದಾನ ಮಾಡುವುದಾಗಿ ಹೇಳಿರುವ 100 ಕೋಟಿ ಡೋಸುಗಳು ಈ ದೇಶಗಳ ಲಸಿಕೆಗಳ ಅಗತ್ಯಕ್ಕೆ ಹೋಲಿಸಿದರೆ, ಕೇವಲ ಶೇಕಡಾ 10ರಷ್ಟಾಗುತ್ತದೆ. ಇದು ಅವು ಕೂಡಿಟ್ಟುಕೊಂಡಿರುವ ಹೆಚ್ಚುವರಿ ಲಸಿಕೆಗಳ ಕಾಲಂಶದಷ್ಟೇ, ಅವುಗಳ ಜಿಡಿಪಿಯಲ್ಲಿ ಹೆಚ್ಚೆಂದರೆ 0.05ಶೇ.ದಷ್ಟು ಮಾತ್ರ. ಅಂದರೆ ಅವುಗಳ ಭೋಜನದ ಮೇಜಿನಿಂದ ಎಸೆದ ಒಂದು ತುಣುಕು ರೊಟ್ಟಿ! ಇದರ ಬದಲು ಅವು ಪೇಟೆಂಟ್–ಮನ್ನಾಕ್ಕೆ ಒಪ್ಪಿದ್ದರೆ “ಅಭಿವೃದ್ಧಿಶೀಲ” ದೇಶಗಳಿಗೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಆದರೆ ಅದನ್ನು ಮಾಡಲಿಲ್ಲ. ಔಷಧಿ ಕಾರ್ಪೋರೇಟ್‌ಗಳ ಲಾಭಕೋರತನವನ್ನು ಎಷ್ಟು ಬೇಗ ಕೊನೆಗಾಣಿಸಬಹುದು ಎಂಬುದರ ಬಗ್ಗೆ ಒಂದು ಕನಿಷ್ಠ ಒಪ್ಪಂದಕ್ಕೆ ಬರಲು ಕೂಡ ಜಿ–7 ಸಭೆಯು ಪ್ರಯತ್ನಿಸಲಿಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ,ನಾಗರಾಜ್

ವಿಶ್ವದ ಎಲ್ಲ “ಅಭಿವೃದ್ಧಿಶೀಲ” ದೇಶಗಳಿಗೆ ಒಟ್ಟು ಒಂದು ನೂರು ಕೋಟಿ ಡೋಸ್ ಕೋವಿಡ್–ವಿರೋಧಿ ಲಸಿಕೆಗಳನ್ನು ದಾನ ಮಾಡುವುದಾಗಿ ಇತ್ತೀಚೆಗೆ ಮುಕ್ತಾಯಗೊಂಡ ಜಿ–7 ದೇಶಗಳ ಸಭೆಯು ಭರವಸೆ ನೀಡಿದೆ. ಅಮೆರಿಕಾ 50 ಕೋಟಿ ಡೋಸ್‌ಗಳನ್ನು, ಬ್ರಿಟನ್ 10 ಕೋಟಿ ಮತ್ತು ಇಟಲಿ, ಜಪಾನ್, ಫ್ರಾನ್ಸ್, ಜರ್ಮನಿ ಮತ್ತು ಕೆನಡಾ ದೇಶಗಳು ಉಳಿದ ಭಾಗವನ್ನು ಕೊಡುವುದಾಗಿ ಭರವಸೆ ನೀಡಿವೆ.

“ಒಂದು ನೂರು ಕೋಟಿ ಡೋಸ್‌ಗಳು” ಎಂದು ಹೇಳಿದಾಕ್ಷಣ ಅದು ನಿಜಕ್ಕೂ ಬಹಳ ದೊಡ್ಡ ಕೊಡುಗೆಯೇ ಎನಿಸುತ್ತದೆ. ಆದರೆ, ವಿಶ್ವದ ಉಳಿದ ದೇಶಗಳ ಜನರ ಅಗತ್ಯಗಳಿಗೆ (ಪ್ರತಿ ವ್ಯಕ್ತಿಗೆ ಎರಡು ಡೋಸ್‌ಗಳ ಲೆಕ್ಕದಲ್ಲಿ) ಹೋಲಿಸಿದರೆ ಮತ್ತು ಮುಂದುವರಿದ ಬಂಡವಾಳಶಾಹಿ ದೇಶಗಳು ತಮ್ಮ ತಮ್ಮ ದೇಶಗಳ ಪ್ರತಿ ವ್ಯಕ್ತಿಗೆ ಎರಡು ಡೋಸ್‌ಗಳ ಲೆಕ್ಕದಲ್ಲಿ ಎಲ್ಲರಿಗೂ ಬೇಕಾಗುವ ಲಸಿಕೆಗಳ ಒಟ್ಟು ಮೊತ್ತಕ್ಕಿಂತಲೂ ಅಧಿಕವಾಗಿ ಇಟ್ಟುಕೊಂಡಿರುವ ಲಸಿಕೆಗಳ ಅಗಾಧ ದಾಸ್ತಾನು ಸಂಗ್ರಹಕ್ಕೆ ಹೋಲಿಸಿದರೆ, “ಒಂದು ನೂರು ಕೋಟಿ ಡೋಸ್‌ಗಳು” ವಿಶ್ವದ ಉಳಿದ ದೇಶಗಳ ಜನರ ಅಗತ್ಯಗಳಿಗೆ ಅತ್ಯಲ್ಪವೇ. ಈ ಕಾರಣದಿಂದಾಗಿಯೇ ಹಲವಾರು ಅಂತರರಾಷ್ಟ್ರೀಯ ನಾಗರಿಕ ಸಮಾಜ ಸಂಘಟನೆಗಳು ಜಿ–7 ಘೋಷಣೆಯನ್ನು “ಸಾರ್ವಜನಿಕ ಪ್ರಚಾರದ ಕಸರತ್ತು” ಎಂದು ಟೀಕಿಸಿವೆ.

ವಿಶ್ವದಲ್ಲಿ 680 ಕೋಟಿಯಷ್ಟು ಮಂದಿ ಈವರೆಗೂ ಲಸಿಕೆ ಪಡೆದಿಲ್ಲ. ಇಷ್ಟು ದೊಡ್ಡ ಸಂಖ್ಯೆಯ ಜನರಿಗೆ ಎರಡು ಬಾರಿ ಲಸಿಕೆ ಹಾಕಲು ಒಟ್ಟು 1360 ಕೋಟಿ ಡೋಸ್‌ಗಳ ಅಗತ್ಯವಿದೆ. ಹಾಗಾಗಿ, ಜಿ–7 ದೇಶಗಳ ಭರವಸೆಯ ಒಂದು ನೂರು ಕೋಟಿ ಡೋಸ್‌ಗಳು ವಿಶ್ವದ ಲಸಿಕೆ ಪಡೆಯದ ಜನರ ಅವಶ್ಯಕತೆಯ ಕೇವಲ 7.4% ಭಾಗ ಆಗುತ್ತದೆ. ಅಗತ್ಯವಿರುವ ಒಟ್ಟು 1360 ಕೋಟಿ ಡೋಸ್‌ಗಳಲ್ಲಿ, “ಅಭಿವೃದ್ಧಿಶೀಲ” ದೇಶಗಳ ಅಗತ್ಯವನ್ನು ನಾವು 1,000 ಕೋಟಿ ಡೋಸ್‌ಗಳು ಎಂದೇ ಭಾವಿಸಿಕೊಂಡರೂ ಸಹ, ಜಿ–7 ದೇಶಗಳು ನೀಡಿರುವ ಭರವಸೆಯು, ಲಸಿಕೆಗಳ ಅಗತ್ಯಕ್ಕೆ ಹೋಲಿಸಿದರೆ, ಕೇವಲ ಶೇಕಡಾ 10ರಷ್ಟಾಗುತ್ತದೆ.

ಮುಂದುವರಿದ ಬಂಡವಾಳಶಾಹಿ ದೇಶಗಳು ಲಸಿಕೆಗಳನ್ನು ಗಣನೀಯ ಪ್ರಮಾಣದಲ್ಲಿ ಖರೀದಿಸಿ ಅವುಗಳನ್ನು ಕೂಡಿಟ್ಟುಕೊಂಡಿವೆ. ಈ ಸಂಗ್ರಹಕ್ಕೆ ಹೋಲಿಸಿದರೆ, ದಾನ ಮಾಡಲು ಉದ್ದೇಶಿಸಿರುವ ಲಸಿಕೆಗಳ ಸಂಖ್ಯೆಯು ಬಹಳ ಕಡಿಮೆಯೇ. ಬ್ರಿಟನನ್ನು ಉದಾಹರಣೆಯಾಗಿ ನೋಡೋಣ. 6.8 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಬ್ರಿಟನ್, 50 ಕೋಟಿ ಡೋಸ್ ಲಸಿಕೆಗಳನ್ನು ಖರೀದಿಸಿ ಇಟ್ಟುಕೊಂಡಿದೆ. ಅದರ ಇಡೀ ಜನಸಂಖ್ಯೆಯ ಅಗತ್ಯಗಳನ್ನು ಅದು ಖರೀದಿಸಿರುವ ದಾಸ್ತಾನಿನಿಂದಲೇ ಪೂರೈಸಲಾಗುತ್ತದೆ ಎಂದು ಭಾವಿಸಿದರೂ ಸಹ, 50 – 2*6.8, ಅಂದರೆ ಇನ್ನೂ 36.4 ಕೋಟಿ ಡೋಸ್‌ಗಳ ಹೆಚ್ಚುವರಿ ದಾಸ್ತಾನು ಉಳಿಯುತ್ತದೆ. ಬ್ರಿಟನ್, ಕೇವಲ 10 ಕೋಟಿ ಡೋಸ್ ಅಥವಾ ಕೇವಲ 27% ಲಸಿಕೆಗಳನ್ನು ದಾನ ಮಾಡಲು ಉದ್ದೇಶಿಸಿದೆ. ಉಳಿದ 73% ಲಸಿಕೆಗಳನ್ನು ಉಳಿಸಿಟ್ಟುಕೊಳ್ಳಲು ಅದು ಏಕೆ ಬಯಸುತ್ತದೆ ಎಂಬುದು ಸ್ಪಷ್ಟವಿಲ್ಲ. ಸಾಂಕ್ರಾಮಿಕವು ಒಂದು ವೇಳೆ ಮುಂದುವರಿದದ್ದೇ ಆದರೆ, ಇನ್ನೊಂದು ಸುತ್ತಿನ ಬಳಕೆಗೆ ಲಸಿಕೆಗಳು ಅಗತ್ಯವಾಗಬಹುದು. ಇದೇ ಲಸಿಕೆಗಳು ಮುಂದಿನ ದಿನಗಳಲ್ಲೂ ವೈರಸ್ ವಿರುದ್ಧ ಇಷ್ಟೇ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂದು ಭಾವಿಸಿ, ಮತ್ತು ವಿಶ್ವದ ಉಳಿದ ದೇಶಗಳಿಗೆ ದಾನ ಮಾಡಲು ಉದ್ದೇಶಿಸಿರುವ ಡೋಸ್‌ಗಳನ್ನು ಬದಿಗಿರಿಸಿದ ನಂತರವೂ ಉಳಿಯುವ ಲಸಿಕೆಗಳಲ್ಲಿ, ಬ್ರಿಟನ್ನಿನ ಇಡೀ ಜನಸಂಖ್ಯೆಗೆ ಹೊಸದಾಗಿ ಎರಡು ಬಾರಿ ಲಸಿಕೆ ಹಾಕಿದರೂ ಸಹ, ಲಸಿಕೆಗಳು ಇನ್ನೂ ಉಳಿಯುತ್ತವೆ! ಅಮೆರಿಕಾ, ಇಟಲಿ, ಜಪಾನ್, ಫ್ರಾನ್ಸ್, ಜರ್ಮನಿ ಮತ್ತು ಕೆನಡಾ ದೇಶಗಳೂ ಸಹ ಸುಮಾರಾಗಿ ಇದೇ ರೀತಿಯಲ್ಲಿ ಲಸಿಕೆಗಳನ್ನು ಕೂಡಿಟ್ಟುಕೊಂಡಿವೆ.

ಜಿ–7 ದೇಶಗಳು ದಾನ ಕೊಡುವುದಾಗಿ ಹೇಳಿರುವ ಲಸಿಕೆಗಳು ಉದ್ದೇಶಿತ ದೇಶಗಳಿಗೆ ತಲುಪುವ ಹೊತ್ತಿಗೆ, ಕಡಿಮೆ ಎಂದರೂ, ಮುಂದಿನ ವರ್ಷದ ಮಧ್ಯಭಾಗದವರೆಗೂ ಸಮಯ ಹಿಡಿಯುತ್ತದೆ. ಕೊರೊನಾ ಎರಡನೇ ಅಲೆಯ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ಜನರಿಗೆ ಈ ಲಸಿಕೆಗಳು ಸದ್ಯಕ್ಕಂತೂ ಲಭ್ಯವಾಗುವುದಿಲ್ಲ. ಲಸಿಕೆಗಳು ಈ ದೇಶಗಳನ್ನು ತಲುಪಿ ಅವು ಜನರಿಗೆ ಲಭ್ಯವಾಗುವ ಹೊತ್ತಿಗೆ ಲಕ್ಷಾಂತರ ಜನರು ಕೊರೊನಾಗೆ ಬಲಿಯಾಗಿರುತ್ತಾರೆ.

ಅಭಿವೃದ್ಧಿಶೀಲ ದೇಶಗಳ ಅಗತ್ಯಕ್ಕೆ ಹೋಲಿಸಿದರೆ, ಜಿ–7 ದೇಶಗಳ ಉದ್ದೇಶಿತ ಲಸಿಕೆಗಳ ದೇಣಿಗೆಯು ಚಿಕ್ಕದೇ ಇರಬಹುದು, ಆದರೆ, ಅದರ ಹಣ–ಮೌಲ್ಯವು ಸಾಕಷ್ಟು ಗಣನೀಯವೇ ಎಂಬ ಒಂದು ಅಭಿಪ್ರಾಯವಿದೆ. ಈ ಅಭಿಪ್ರಾಯವು ಆಧಾರರಹಿತವಾದದ್ದೇ ಸರಿ. ಲಸಿಕೆಗಳ ಬೆಲೆಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಜಿ–7 ದೇಶಗಳು ಯಾವ ಲಸಿಕೆಗಳನ್ನು ದೇಣಿಗೆಯಾಗಿ ಕೊಡುತ್ತವೆ ಎಂಬುದು ಇನ್ನೂ ಸ್ಪಷ್ಟವಿಲ್ಲ. ಆಕ್ಸ್‌ಫರ್ಡ್–ಆಸ್ಟ್ರಾಜೆನೆಕಾ ಕಂಪೆನಿಯು ಯೂರೋಪಿಯನ್ ದೇಶಗಳಿಗೆ ಮಾರುವ ತನ್ನ ಲಸಿಕೆಗಳ ಬೆಲೆಯನ್ನು ಪ್ರತಿ ಡೋಸ್‌ಗೆ $3 ಎಂದು ನಿಗದಿಪಡಿಸಿದೆ. ಆದರೆ, ಇತರ ಲಸಿಕೆಗಳು ಅದಕ್ಕಿಂತಲೂ ಹೆಚ್ಚು ದುಬಾರಿಯಾಗಿವೆ. 50 ಕೋಟಿ ಡೋಸ್ ಫೈಜರ್ ಲಸಿಕೆಗಳನ್ನು ದಾನ ಮಾಡಲು ಅಮೆರಿಕಾ ಯೋಜಿಸುತ್ತಿದೆ ಎಂದು ವರದಿಯಾಗಿದೆ. ಈ ಲಸಿಕೆಯನ್ನು ಈ ಮೊದಲು ತನ್ನ ಜನರಿಗೆ ಒದಗಿಸಲು ಪ್ರತಿ ಡೋಸ್‌ಗೆ $19.5ರಂತೆ ಖರೀದಿಸಿರುವುದರಿಂದ, ಅದರ ಬೆಲೆಯನ್ನು $20 ಎಂದು ಭಾವಿಸಿದರೆ, ಅಮೆರಿಕಾದ ಒಟ್ಟು ಕೊಡುಗೆಯು $10 ಬಿಲಿಯನ್ ಮೌಲ್ಯದ್ದಾಗಿರುತ್ತದೆ, ಅಂದರೆ ಅದರ ಜಿಡಿಪಿಯ ಶೇಕಡಾ 0.05ಕ್ಕಿಂತಲೂ ಕಡಿಮೆ ಮೌಲ್ಯದ್ದಾಗಿರುತ್ತದೆ. ಹಾಗಾಗಿ, ಯಾವ ರೀತಿಯಲ್ಲಿ ನೋಡಿದರೂ, ಜಿ–7 ದೇಶಗಳ ದೇಣಿಗೆಯು ಅವರ ಭೋಜನದ ಮೇಜಿನಿಂದ ಎಸೆದ ರೊಟ್ಟಿಯ ಒಂದು ತುಣುಕು, ಅಷ್ಟೇ.

ಲಸಿಕೆಗಳ ಮೇಲಿನ ಪೇಟೆಂಟ್–ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವ ಪ್ರಶ್ನೆಯನ್ನು ಜಿ–7 ದೇಶಗಳು ಚರ್ಚಿಸಲಿಲ್ಲ ಎಂಬುದನ್ನು ಅವರ ಕೊಡುಗೆಯನ್ನು ಪ್ರಶಂಸಿಸುವ ಹಳಸಲು ಮಾತುಗಳ ಮೂಲಕ ಮರೆಮಾಚಲಾಗುತ್ತಿದೆ. ಪೇಟೆಂಟ್–ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡುವ ಕ್ರಮವನ್ನು ಅಮೆರಿಕಾ ಮತ್ತು ಫ್ರಾನ್ಸ್ ಮಾತ್ರ ಒಪ್ಪಿಕೊಂಡಿವೆ. ಪೇಟೆಂಟ್–ಮನ್ನಾ ವಿಷಯವನ್ನು ಜಿ–7 ದೇಶಗಳು ಚರ್ಚಿಸಿದ್ದರೆ ಮತ್ತು ಅನುಮೋದಿಸಿದ್ದರೆ, ಈ ವೇಳೆಗೆ ಅದು ಲಸಿಕೆಗಳ ಉತ್ಪಾದನೆಯನ್ನು ಬಹು ಮಟ್ಟಿಗೆ ಹೆಚ್ಚಿಸುತ್ತಿತ್ತು ಮತ್ತು ಈ ಕ್ರಮವು ಬಡ ದೇಶಗಳಿಗೆ ನೂರು ಕೋಟಿ (ಒಂದು ಬಿಲಿಯನ್) ಡೋಸ್‌ಗಳ ದೇಣಿಗೆಗಿಂತ ಹೆಚ್ಚು ಉಪಯುಕ್ತವಾಗುತ್ತಿತ್ತು.

ವಾಸ್ತವವಾಗಿ, ಪೇಟೆಂಟ್–ಹಕ್ಕುಗಳ ಬಗ್ಗೆ ಅಮೆರಿಕಾ ಮತ್ತು ಫ್ರಾನ್ಸ್ ದೇಶಗಳನ್ನು ಹೊರತುಪಡಿಸಿ ಉಳಿದ ದೇಶಗಳ ಮಾತಿರಲಿ, ಈ ಜಿ–7 ಶೃಂಗಸಭೆಯ ಆತಿಥ್ಯ ವಹಿಸಿದ್ದ ಮತ್ತು ಸಾರ್ವತ್ರಿಕ ಲಸಿಕೆಯ ಅಗತ್ಯದ ಬಗ್ಗೆ ಭಾರಿ ಸದ್ದು ಮಾಡಿದ್ದ ಬ್ರಿಟನ್ ಕೂಡ ಲಸಿಕೆಗಳ ಮೇಲೆ ತಾತ್ಕಾಲಿಕ ಪೇಟೆಂಟ್–ಮನ್ನಾ ಕ್ರಮವನ್ನು ಒಪ್ಪಿಲ್ಲ. ಈ ವಿದ್ಯಮಾನವು, ಬೂರ್ಜ್ವಾ ಹಿತಾಸಕ್ತಿಗಳ ರಕ್ಷಣೆಗಾಗಿ ಬೂರ್ಜ್ವಾ ಸರ್ಕಾರಗಳು ಎಷ್ಟು ಬಲವಾದ ಬದ್ಧತೆಯನ್ನು ಹೊಂದಿವೆ ಎಂಬುದನ್ನು ಮತ್ತು ಲಸಿಕೆಗಳ ಕೊರತೆಯನ್ನು ಶಾಶ್ವತಗೊಳಿಸುವಲ್ಲಿ ಮತ್ತು ಅದನ್ನು ಲಾಭದಾಯಕವಾಗಿ ಬಳಸಿಕೊಳ್ಳುವಂಥಹ ಹಿತಕರ ವಾತಾವರಣವನ್ನು ಸೃಷ್ಟಿಸುವಲ್ಲಿ ಬೂರ್ಜ್ವಾ ಹಿತಾಸಕ್ತಿಗಳು ಎಷ್ಟು ಸಕ್ರಿಯವಾಗಿವೆ ಎಂಬುದು ಈ ಸನ್ನಿವೇಶದಲ್ಲಿ ಕಾಣಸಿಗುತ್ತವೆ.


ಈ ಮಾತಿಗೆ ಉದಾಹರಣೆಯಾಗಿ ಮಾಡೆರ್ನಾ ಎಂಬ ಔಷಧ ಕಂಪೆನಿಯ ಒಂದೇ ಒಂದು ಪ್ರಕರಣವನ್ನು ಗಮನಿಸಿದರೆ ಸಾಕು. ಕೋವಿಡ್ ವಿರುದ್ಧ ಲಸಿಕೆಯ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಈ ಕಂಪೆನಿಯು ಅಮೆರಿಕಾ ಸರ್ಕಾರದಿಂದ $6 ಬಿಲಿಯನ್ ಹಣ ಪಡೆದಿದೆ. ಈ ಆರ್ಥಿಕ ಸಹಾಯಕ್ಕೆ ಪ್ರತಿಯಾಗಿ ಅದು ಅಮೆರಿಕಾ ಸರ್ಕಾರಕ್ಕೆ ಮಾರುವ ಪ್ರತಿ ಡೋಸ್ ಲಸಿಕೆಯ ಬೆಲೆಯನ್ನು $15 ಎಂದು ನಿಗದಿಪಡಿಸಿದೆ. ಮಾಡೆರ್ನಾ ಲಸಿಕೆಯ ಬೆಲೆಯು ಆಸ್ಟ್ರಾಜೆನೆಕಾ ಲಸಿಕೆಯ ಬೆಲೆ($3–4)ಗಿಂತ ಹೆಚ್ಚು ದುಬಾರಿಯಾಗಿದ್ದರೂ ಸಹ, ಫೈಜರ್ ನಿಗದಿಪಡಿಸಿರುವ $19.50ಕ್ಕಿಂತ ಅಗ್ಗವಾಗಿದೆ. ಕೇವಲ ವಾದದ ಸಲುವಾಗಿ, ಮಾಡೆರ್ನಾ ನಿಗದಿಪಡಿಸಿರುವ ಅದರ ಲಸಿಕೆಯ ಬೆಲೆಯನ್ನು ಪರಿಶೀಲಿಸೋಣ. ಲಸಿಕೆಯನ್ನು ಸಂಶೋಧಿಸಿ ಅದನ್ನು ಅಭಿವೃದ್ಧಿಪಡಿಸಲು ತಗುಲಿದ ವೆಚ್ಚವನ್ನು ಬದಿಗಿಟ್ಟು, ಅದರ ಉತ್ಪಾದನಾ ವೆಚ್ಚ ಮತ್ತು ಅದರೊಂದಿಗೆ ಒಂದು ಸಾಧಾರಣ ಮಟ್ಟದ ಲಾಭಾಂಶವೂ ಸೇರಿದಂತೆ ಲಸಿಕೆಯ ಬೆಲೆಯನ್ನು $15 ಎಂದು ಭಾವಿಸೋಣ, ಅಮೆರಿಕಾ ಸರ್ಕಾರವು ಲಸಿಕೆಯ ಸಂಶೋಧನೆಗಾಗಿ $6 ಬಿಲಿಯನ್ ಹಣವನ್ನು ಖರ್ಚು ಮಾಡಿರುವುದರಿಂದ ಅದನ್ನು ಲಸಿಕೆಯ ಬೆಲೆಯ ಮೂಲಕ ಪಡೆದುಕೊಳ್ಳುವ ಅವಶ್ಯಕತೆ ಇಲ್ಲಿ ಉದ್ಭವವಾಗುವುದಿಲ್ಲ. ಹಾಗಾಗಿ, ಮಾಡೆರ್ನಾ ಇತರ ಖರೀದಿದಾರರಿಗೆ $15ಕ್ಕಿಂತ ಹೆಚ್ಚು ಬೆಲೆ (ಅದಕ್ಕೆ ಇನ್ನೂ ಸ್ವಲ್ಪ ಲಾಭ ಸೇರಿಸಿದರೂ ಅಡ್ಡಿಯಿಲ್ಲ) ವಿಧಿಸಲು ಕಾರಣವೇ ಇಲ್ಲ. ಆದರೆ, ಲಸಿಕೆಗಳ ಬೆಲೆಯನ್ನು, ಮಾಡೆರ್ನಾ ಕಂಪೆನಿಯ ಸಿಇಒ ಸ್ಟಿಫಾನ್ ಬಾನ್ಸೆಲ್, ಲಸಿಕೆಗಳ ಆರ್ಡರ್ ಎಷ್ಟು ದೊಡ್ಡದು ಎಂಬುದನ್ನು ಅವಲಂಬಿಸಿ, $25 ಮತ್ತು $37 ರ ನಡುವೆ ನಿಗದಿಪಡಿಸುವ ಒಂದು ಸಂಖ್ಯೆಯು ಅದರ “ನ್ಯಾಯೋಚಿತ ಬೆಲೆ” ಎಂದು ಹೇಳಿದ್ದಾರೆ!

ಹಿಂದಿನ ವರ್ಷದ ಮಾರ್ಚ್‌ನಿಂದ ಈ ವರ್ಷದ ಏಪ್ರಿಲ್ ಅಂತ್ಯದ ನಡುವೆ ಮಾಡೆರ್ನಾ ಕಂಪೆನಿಯ ಷೇರುಗಳ ಬೆಲೆ ಆರು ಪಟ್ಟು ಹೆಚ್ಚಾಗಿದೆ ಮತ್ತು ಅದರ ಸಿಇಒ ಸರಿ ಸುಮಾರು ಇದೇ ಅವಧಿಯಲ್ಲಿ $5.5 ಬಿಲಿಯನ್ ಸಂಪತ್ತನ್ನು ಗಳಿಸಿಕೊಂಡಿದ್ದಾರೆ. ಲಸಿಕೆಗಳ ಕೊರತೆಯ ಲಾಭ ಪಡೆದಿರುವುದು ಮಾಡೆರ್ನಾ ಕಂಪೆನಿ ಒಂದೇ ಅಲ್ಲಾ. ಉಳಿದ ಕಂಪೆನಿಗಳೂ ಸಹ ಸೊಂಪಾಗಿ ಹಣ ಮಾಡಿಕೊಂಡಿವೆ.

ಈ ಕಂಪೆನಿಗಳು ಎಷ್ಟು ಅಗಾಧ ಪ್ರಮಾಣದ ಲಾಭ ಮಾಡಿಕೊಂಡಿವೆ ಎಂಬುದನ್ನು ಆಕ್ಸ್ ಫಾಮ್ ಸಂಸ್ಥೆಯು ಅಂದಾಜು ಮಾಡಿದೆ. ಅಂಕಿ–ಅಂಶಗಳ ಗೋಜಿಗೆ ಹೋಗುವ ಬದಲು, ಆಕ್ಸ್‌ಫಾಮ್ ಒದಗಿಸಿರುವ ವಿವರಣೆಯ ಒಂದು ತುಣುಕು ಈ ಕಂಪೆನಿಗಳ ಲಾಭದಾಯಕತೆಯ ಪ್ರಮಾಣವನ್ನು ತೋರಿಸುತ್ತದೆ. ಆಕ್ಸ್‌ಫಾಮ್ ಪ್ರಕಾರ, ಪೇಟೆಂಟ್–ಮನ್ನಾ ಮಾಡಿದರೆ, ಕೇವಲ $6.5 ಬಿಲಿಯನ್ ವೆಚ್ಚದಲ್ಲಿ ವಿಶ್ವದ “ಕೆಳ ಮತ್ತು ಮಧ್ಯಮ ಆದಾಯದ ದೇಶಗಳ” ಇಡೀ ಜನಸಂಖ್ಯೆಗೆ ಲಸಿಕೆ ಹಾಕಬಹುದು. ಮತ್ತೊಂದೆಡೆ, ಪೇಟೆಂಟ್–ಮನ್ನಾ ಮಾಡದಿದ್ದರೆ, ಸದರಿ ವೆಚ್ಚವು $80 ಬಿಲಿಯನ್ ವರೆಗೂ ತಗಲುತ್ತದೆ. ಅಂದರೆ, ಈ ದೇಶಗಳ ಇಡೀ ಜನಸಂಖ್ಯೆಗೆ ಲಸಿಕೆ ಹಾಕಲು ತಗಲುವ $80 ಬಿಲಿಯನ್ ವೆಚ್ಚದಲ್ಲಿ, $74ಬಿಲಿಯನ್ ಲಾಭವು ಲಸಿಕೆ ಉತ್ಪಾದಿಸುವ ಕಂಪನಿಗಳ ಜೇಬಿಗೆ ಸಲೀಸಾಗಿ ಇಳಿಯುತ್ತದೆ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪೇಟೆಂಟ್–ರಕ್ಷಣೆಯಡಿಯ ಬೆಲೆಗಳಲ್ಲಿ ಈ ದೇಶಗಳ ಜನಸಂಖ್ಯೆಗೆ ಲಸಿಕೆ ಹಾಕುವ ವೆಚ್ಚದ ಶೇಕಡಾ 90ಕ್ಕಿಂತ ಹೆಚ್ಚು ಭಾಗವು ಪೇಟೆಂಟ್ ಹೊಂದಿರುವವರ ಜೇಬಿಗೆ ಇಳಿಯುತ್ತದೆ.

ಇಂತಹ ಲಾಭಕೋರತನವನ್ನು ಬೂರ್ಜ್ವಾ ಸರ್ಕಾರಗಳು ರಕ್ಷಿಸುತ್ತಿವೆ. ತಾತ್ಕಾಲಿಕವಾಗಿ ಪೇಟೆಂಟ್–ಮನ್ನಾಗೆ ಒಪ್ಪಿದ ಸರ್ಕಾರಗಳು, ಕೆಲವು ತಿಂಗಳುಗಳ ನಂತರ ಈ ಲಾಭಕೋರತನ ಕೊನೆಗೊಳ್ಳಬೇಕೆಂದು ಬಯಸುತ್ತವೆ. ಈ ಅವಧಿಯು, ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಒಪ್ಪಂದಕ್ಕೆ ಬರಲು ಅಗತ್ಯವಿರುವ ಸಮಯವಾಗಿರುತ್ತದೆ. ಪೇಟೆಂಟ್–ಮನ್ನಾವನ್ನು ವಿರೋಧಿಸುವವರು ಈ ಲಾಭಕೋರತನ ಮುಂದುವರಿಯುವುದನ್ನು ಬಯಸುತ್ತಾರೆ. ಈ ಎರಡೂ ನಿಲುವುಗಳ ಬಗ್ಗೆ ಚರ್ಚಿಸಲು ಮತ್ತು ಇಂತಹ ಲಾಭಕೋರತನವನ್ನು ಎಷ್ಟು ಬೇಗ ಕೊನೆಗಾಣಿಸಬಹುದು ಎಂಬುದರ ಬಗ್ಗೆ ಒಂದು ಕನಿಷ್ಠ ಒಪ್ಪಂದಕ್ಕೆ ಬರಲು ಜಿ–7 ಸಭೆಯು ಪ್ರಯತ್ನಿಸಲಿಲ್ಲ. ಮತ್ತು, ಪೇಟೆಂಟ್–ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟುಕೊಡಲು ಒಪ್ಪಿದ ಅಮೆರಿಕಾ ಮತ್ತು ಫ್ರಾನ್ಸ್ ದೇಶಗಳೂ ಸಹ, ಪೇಟೆಂಟ್–ಮನ್ನಾ ವಿರೋಧವನ್ನು ಕೈಬಿಡುವಂತೆ ತಮ್ಮ ಮೊಂಡು ಸಹೋದ್ಯೋಗಿಗಳ ಮನವೊಲಿಸುವ ಪ್ರಯತ್ನ ಮಾಡಲಿಲ್ಲ ಎಂದು ವರದಿಗಳು ತಿಳಿಸುತ್ತವೆ.

ಪೇಟೆಂಟ್–ಮನ್ನಾ ಕ್ರಮವು ಕೇವಲ ಬೆಲೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಮಾತ್ರ ಮುಖ್ಯವಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ, ಲಸಿಕೆಗಳ ಉತ್ಪಾದನೆಯನ್ನು ಹೆಚ್ಚಿಸುವುದೇ ಅದರ ಪ್ರಾಮುಖ್ಯತೆ. ಆದರೆ, ಈ ನಿಟ್ಟಿನಲ್ಲಿ ಯಾವುದೇ ಪ್ರಗತಿ ಕಾಣುತ್ತಿಲ್ಲ. ಇತ್ತೀಚಿನ ಒಂದು ವಿದ್ಯಮಾನವೆಂದರೆ, ಜೂನ್ 9ರಂದು ನಡೆದ ವಿಶ್ವ ವ್ಯಾಪಾರ ಸಂಸ್ಥೆಯ ಸಭೆಯಲ್ಲಿ, ಸದಸ್ಯ ದೇಶಗಳು ಅಂತಿಮವಾಗಿ “ಒಪ್ಪಂದದ ಕರಡು ಸಿದ್ಧಪಡಿಸುವುದನ್ನು” ಬೆಂಬಲಿಸಿದವು ಮತ್ತು “ಈ ಚರ್ಚೆಯ ತುರ್ತಿನ ಬಗ್ಗೆ ಒಪ್ಪಿದವು”!



ಆಕ್ಸ್‌ಫಾಮ್ ಪ್ರಕಾರ, ಪೇಟೆಂಟ್–ಮನ್ನಾ ಮಾಡಿದರೆ, ಕೇವಲ $6.5 ಬಿಲಿಯನ್ ವೆಚ್ಚದಲ್ಲಿ ವಿಶ್ವದ “ಕೆಳ ಮತ್ತು ಮಧ್ಯಮ ಆದಾಯದ ದೇಶಗಳ” ಇಡೀ ಜನಸಂಖ್ಯೆಗೆ ಲಸಿಕೆ ಹಾಕಬಹುದು. ಮತ್ತೊಂದೆಡೆ, ಪೇಟೆಂಟ್–ಮನ್ನಾ ಮಾಡದಿದ್ದರೆ, ಈ ವೆಚ್ಚ $80 ಬಿಲಿಯನ್ ವರೆಗೂ ತಗಲುತ್ತದೆ. ಅಂದರೆ, $74ಬಿಲಿಯನ್ ಲಸಿಕೆ ಉತ್ಪಾದಿಸುವ ಕಂಪನಿಗಳ ಜೇಬಿಗೆ ಇಳಿಯುತ್ತದೆ. ಪೇಟೆಂಟ್–ರಕ್ಷಣೆಯಡಿಯ ಬೆಲೆಗಳಲ್ಲಿ ಶೇಕಡಾ 90ಕ್ಕಿಂತ ಹೆಚ್ಚು ಭಾಗವು ಪೇಟೆಂಟ್ ಹೊಂದಿರುವವರ ಜೇಬಿಗೆ ಇಳಿಯುತ್ತದೆ. ಇಂತಹ ಲಾಭಕೋರತನವನ್ನು ಬೂರ್ಜ್ವಾ ಸರ್ಕಾರಗಳು ರಕ್ಷಿಸುತ್ತಿವೆ.

ಪಶ್ಚಿಮ ಬಂಗಾಲ: ಜನಹೋರಾಟಗಳ ಮೂಲಕ ಹೊಸ ಆರಂಭ

ಜೂನ್ 19–20 ರಂದು ನಡೆದ ಸಿಪಿಐ(ಎಂ) ಪಶ್ಚಿಮ ಬಂಗಾಲ ರಾಜ್ಯ ಸಮಿತಿಯ ಸಭೆ ಇತ್ತೀಚಿನ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳ ಆಮೂಲಾಗ್ರ ಪರಾಮರ್ಶೆಯನ್ನು ನಡೆಸಿತು. ಪೊಲಿಟ್‌ಬ್ಯುರೊ ಸದಸ್ಯ ಬಿಮನ್ ಬಸು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಇತರ ಕೆಲವು ಪೊಲಿಟ್‌ಬ್ಯುರೊ ಸದಸ್ಯರೂ ಈ ಸಭೆಯಲ್ಲಿ ಹಾಜರಿದ್ದರು.

ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಚುನಾವಣಾ ಪರಾಭವದ ರಾಜಕೀಯ ಮತ್ತು ಸಂಘಟನಾ ಕಾರಣಗಳನ್ನು ವಿಶ್ಲೇಷಿಸಿದ ಕರಡು ಪರಾಮರ್ಶೆಯನ್ನು ಮಂಡಿಸಿದರು. ಸಿಪಿಐ(ಎಂ) ಮತ್ತು ಎಡರಂಗದ ಮತ ಪಾಲು ಇಳಿದಿದೆ, ವಿವಿಧ ವರ್ಗಗಳು ಮತ್ತು ವಿಭಾಗಗಳ ನಡುವೆ ಬೆಂಬಲ ಗಮನಾರ್ಹವಾಗಿ ಇಳಿದಿದೆ. ಬಿಜೆಪಿ ಮತ್ತು ಟಿಎಂಸಿ ನಡುವೆ ಒಂದು ತೀಕ್ಷ್ಣವಾದ ಧ್ರುವೀಕರಣ ನಡೆದಿದೆ.

ರಾಜ್ಯದ ಜನತೆ ಬಿಜೆಪಿಯ ವಿರುದ್ಧ ಟಿಎಂಸಿ ಪ್ರಮುಖ ಶಕ್ತಿ ಎಂಬುದನ್ನು ಒಪ್ಪಿಕೊಂಡಿತು. ಕಲ್ಯಾಣ ಸ್ಕೀಮುಗಳನ್ನು ತನ್ನ ಪರವಾಗಿ ಬಳಸಿಕೊಳ್ಳಲು ಟಿಎಂಸಿಗೆ ಸಾಧ್ಯವಾಯಿತು. ಧಾರ್ಮಿಕ ಧ್ರುವೀಕರಣವೂ ಒಂದು ಪಾತ್ರವನ್ನು ವಹಿಸಿತು. ಆದರೆ ಅದು ಮುಖ್ಯ ಅಂಶವಾಗಿರಲಿಲ್ಲ. ಬಿಜೆಪಿಯ ಆಕ್ರಮಣಕಾರಿ ಪ್ರಚಾರಕ್ಕೆ ಎದುರಾಗಿ ಟಿಎಂಸಿ 'ಬಂಗಾಲಿ' ಭಾವನೆಗಳನ್ನು ಬಳಸಿಕೊಂಡಿತು. ಟಿಎಂಸಿ ಮತ್ತು ಬಿಜೆಪಿ ಎರಡೂ ಐಡೆಂಟಿಟಿ ರಾಜಕಾರಣವನ್ನು ಬಳಸಿಕೊಂಡವು. ಇದನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗಲಿಲ್ಲ.

ಗರಿಷ್ಟ ಟಿಎಂಸಿ–ವಿರೋಧಿ, ಬಿಜೆಪಿ–ವಿರೋಧಿ ಮತಗಳನ್ನು ಸೆಳೆಯಲು ಸಾಧ್ಯವಾದಷ್ಟು ಹೆಚ್ಚು ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು ಅಣಿನೆರೆಸಬೇಕಾಗಿತ್ತು. ಈ ಅನಿವಾರ್ಯತೆಯಿಂದಾಗಿ ಸಂಯುಕ್ತ ಮೋರ್ಚಾ ರಚಿಸಲಾಯಿತು. ಆದರೆ ಇದನ್ನು ಜನರೆದುರು ಒಂದು ಪರ್ಯಾಯವಾಗಿ ಸ್ಥಾಪಿಸಲು ಸಾಧ್ಯವಾಗಲಿಲ್ಲ ಎಂದು ಕರಡು ವಿಶ್ಲೇಷಣೆ ಹೇಳಿದೆ.

ಸೀತಾರಾಮ್ ಯೆಚುರಿಯವರು ಮಾತಾಡುತ್ತ ಹಿನ್ನಡೆಯ ಸಾಮಾನ್ಯ ಅಂಶವೆಂದರೆ ನಮ್ಮ ಸಾಮೂಹಿಕ ನೆಲೆ ಸವೆದಿರುವುದು ಎಂದರು. ಈ ಕೊರತೆಯನ್ನು ಸರಿಪಡಿಸಲು ನಮಗಾಗಲಿಲ್ಲ. ಪಕ್ಷದಲ್ಲಿ ಈ ಹಿಂದೆ ಚರ್ಚಿಸಿದ ತಪ್ಪುಗಳನ್ನು ಸರಿಪಡಿಸಲಾಗಲಿಲ್ಲ. ತಪ್ಪುಗಳನ್ನು ಅರಿಯದಿರುವುದು ಇನ್ನೂ ದೊಡ್ಡ ತಪ್ಪುಗಳನ್ನು ಮಾಡಲು ನೆರವಾಗುತ್ತದೆ. ರಾಜ್ಯದಲ್ಲಿ ಅಧಿಕಾರಸ್ಥ–ವಿರೋಧಿ ಭಾವನೆ ಇತ್ತು. 2019ರಲ್ಲಿ ಬಿಜೆಪಿ ಗಳಿಕೆ ಇದರಿಂದಾಗಿಯೇ. ಆ ಅಸಂತೃಪ್ತಿಯನ್ನು ಕನಿಷ್ಟಗೊಳಿಸಲು ಟಿಎಂಸಿ ಕೆಲವು ಕ್ರಮಗಳನ್ನು ಕೈಗೊಂಡಿತು. ಇದಕ್ಕೆ ಅವರು ಕಲ್ಯಾಣ ಪರಿಯೋಜನೆಗಳನ್ನು ಬಳಸಿಕೊಂಡರು. ಬಿಜೆಪಿಯ ಹಿಂದುತ್ವವನ್ನು ಎದುರಿಸಲು ಬಂಗಾಲಿ ಸಂಕುಚಿತವಾದವನ್ನು ಬಳಸಿಕೊಂಡರು.

ಬಿಜೆಪಿಯನ್ನು ಸೋಲಿಸುವುದು ಪ್ರಮುಖ ಕಾರ್ಯಭಾರ ಎಂದು 22ನೇ ಮಹಾಧಿವೇಶನದಲ್ಲಿ ಹೇಳಲಾಗಿತ್ತು. ಅದನ್ನು ಸಾಧಿಸಲು ಜಾತ್ಯತೀತ ಶಕ್ತಿಗಳ ಐಕ್ಯತೆಯನ್ನು ಕಟ್ಟಲು ಶ್ರಮಿಸಬೇಕು. ಈ ಐಕ್ಯತೆ ಹೋರಾಟಗಳಿಗಾಗಿ. ಚುನಾವಣೆಗಳು ನಡೆವಾಗ ಒಂದು ಚುನಾವಣಾ ತಿಳುವಳಿಕೆಗೆ ಪ್ರಯತ್ನಿಸಲಾಗುತ್ತದೆ. ಆದರೆ ಯಾವುದೇ ಕಾರ್ಯತಂತ್ರ, ಜನಗಳು ಅದಕ್ಕೆ ಸಿದ್ಧವಾಗುವ ವರೆಗೆ ಯಶಸ್ವಿಯಾಗುವುದಿಲ್ಲ. ಪಶ್ಚಿಮ ಬಂಗಾಲದಲ್ಲಿ ಈ ಪ್ರಯತ್ನ ಮುಂದುವರೆಯಬೇಕು. ಆದರೆ ಅದು ಹೇಗೆ ನಡೆಯಬೇಕು ಎಂಬುದನ್ನು ಚರ್ಚಿಸಬೇಕಾಗಿದೆ ಎಂದು ಯೆಚುರಿ ಹೇಳಿದರು.

ಎಡರಂಗದ ಅವಧಿಯಲ್ಲಿ ಅಲ್ಪಸಂಖ್ಯಾತರ ನಡುವೆ ಅಭದ್ರತೆಯ ಭಾವನೆ ಇರಲಿಲ್ಲ. ಆದರೆ ಇತರ ಕೆಲವು ಸಾಮಾಜಿಕ–ಆರ್ಥಿಕ ಆಕಾಂಕ್ಷೆಗಳಿದ್ದವು. ನಮ್ಮ ಕಡೆಯಿಂದ ಕೆಲವು ಕೊರತೆಗಳಿದ್ದವು. ಅವನ್ನು ಸರಿಪಡಿಸುವ ಪ್ರಯತ್ನವಾಯಿತು. ಆದರೆ ಬಿಜೆಪಿ ಉದಯ ದೃಶ್ಯವನ್ನು ಬದಲಿಸಿತು. ನಾವು ಖಂಡಿತವಾಗಿಯೂ ಅಸ್ಮಿತೆಯ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತೇವೆ, ಆದರೆ ವರ್ಗಹೋರಾಟದ ಮೂಲಕ. ಐಡೆಂಟಿಟಿ ರಾಜಕೀಯದೊಳಕ್ಕೆ ವರ್ಗಹೋರಾಟವನ್ನು ಅಧೀನಗೊಳಿಸಲು ಸಾಧ್ಯವಿಲ್ಲ. ಇದು ನಮ್ಮ ದಿಕ್ಕು ಆಗಬೇಕು ಎಂದು ಯೆಚುರಿ ಹೇಳಿದರು.

ರಾಜಕೀಯ ಸಂಘಟನೆಗೆ ಅನುವು ಮಾಡಿಕೊಡುತ್ತದೆ. ರಾಜಕೀಯ ಮತ್ತು ಸಂಘಟನೆಯ ನಡುವೆ ಗತಿತಾರ್ಕಿಕ ಸಂಬಂಧವಿದೆ. ಜನಗಳ ಪ್ರಶ್ನೆಗಳನ್ನು ಎತ್ತಿಕೊಂಡು ಒಂದು ಪರ್ಯಾಯವನ್ನು ಮುಂದಿಡಲು ವಿಫಲವಾದರೆ, ಆಗ ಪಕ್ಷದ ಸಂಘಟನಾ ಸಂರಚನೆಯಷ್ಟೇ ಯಶಸ್ಸು ತರಲಾರದು.

ಇದೀಗ ಒಂದು ಹೊಸ ಆರಂಭದ ಸಮಯ ಎಂದು ಯೆಚುರಿ ಹೇಳಿದರು. ರಾಜಕೀಯ ಹೋರಾಟವನ್ನು ಪಕ್ಷ ಕಟ್ಟಬೇಕು. ಬಹಳಷ್ಟು ಯುವಜನರು ನಮ್ಮೆಡೆಗೆ ಬಂದಿದ್ದಾರೆ. ಅವರು ನಮ್ಮ ಸಂಪತ್ತು. ಅವರನ್ನು ಪೋಷಿಸಬೇಕು, ಪಕ್ಷದ ಸಂರಚನೆಯೊಳಗೆ ಸೇರಿಸಿಕೊಳ್ಳಬೇಕು. ಅವರಿಗೆ ಜವಾಬ್ದಾರಿಗಳನ್ನು ಕೊಡಬೇಕು. ಜನಗಳ ಮೂಲಭೂತ ಪ್ರಶ್ನೆಗಳನ್ನು ಸಿಪಿಐ(ಎಂ) ಮತ್ತು ಎಡಶಕ್ತಿಗಳಲ್ಲದೆ ಬೇರೆ ಯಾರೂ ಎತ್ತಲಾರರು. ಜನಗಳ ಮೆಲೆ ದಾಳಿ ನಡೆಯುತ್ತಿದೆ, ಅದು ಮುಂದಿನ ದಿನಗಳಲ್ಲಿ ತೀಕ್ಷ್ಣಗೊಳ್ಳಲಿದೆ. ಆ ದಾಳಿಗಳ ವಿರುದ್ಧ ಪ್ರತಿರೋಧವನ್ನು ಕಟ್ಟಬೇಕಾಗಿದೆ. ಕಾರ್ಮಿಕ ವರ್ಗ ಮತ್ತು ರೈತಾಪಿಗಳ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ. ಜನತೆಯೇ ನಮ್ಮ ನಿಜವಾದ ಶಕ್ತಿ. ಜನಗಳ ಹೋರಾಟಗಳನ್ನು ಕಟ್ಟಲು ಅವಕಾಶಗಳು ಬರುತ್ತವೆ. ಅವು ಒಂದು ಉಜ್ವಲ ಭವಿಷ್ಯವನ್ನು ತರುತ್ತವೆ ಎಂದು ಯೆಚುರಿ ಹೇಳಿದರು.

ಪಕ್ಷದ ಸ್ವತಂತ್ರ ಶಕ್ತಿಯನ್ನು ಬೆಳೆಸಬೇಕಾಗಿದೆ ಎಂದು ಸೂರ್ಯಕಾಂತ ಮಿಶ್ರ ಕರಡು ವಿಶ್ಲೇಷಣೆಯನ್ನು ಮಂಡಿಸುತ್ತ ಮತ್ತು ಚರ್ಚೆಯನ್ನು ಸಮಾರೋಪಗೊಳಿಸುತ್ತ ಹೇಳಿದರು. ಎಡರಂಗದ ಮತ್ತು ಇತರ ಎಡಶಕ್ತಿಗಳ ಐಕ್ಯತೆ ಇದರ ಮೇಲೆ ನಿಂತಿದೆ, ಮತ್ತು ಅದರ ಆಧಾರದಲ್ಲಿಯೇ ಜಾತ್ಯತೀತ ಶಕ್ತಿಗಳನ್ನು ಅಣಿನೆರೆಸಲು ಸಾಧ್ಯ. ವರ್ಗ ಅಣಿನೆರೆಸಿಕೆ ಮತ್ತು ಇತರ ಸಾಮಾಜಿಕ ಶಕ್ತಿಗಳನ್ನು ಅಣಿನೆರೆಸಲು ಕೂಡ ಇದು ಅತ್ಯಗತ್ಯ ಎಂದು ಅವರು ಹೇಳಿದರು.

ಪಕ್ಷದ ಪ್ಲೀನಂನಲ್ಲಿ ಗುರುತಿಸಿದ ದೌರ್ಬಲ್ಯಗಳನ್ನು ನಿವಾರಿಸಿಕೊಳ್ಳಬೇಕು, ಸಾಮೂಹಿಕ ರಂಗಗಳು ಹೊಸ ಹುಮ್ಮಸ್ಸಿನಿಂದ ಕೆಲಸ ಮಾಡಬೇಕು. ವರ್ಗಸಂಪರ್ಕಗಳನ್ನು ಮತ್ತು ಇತರ ಜನವಿಭಾಗಗಳೊಡನೆ ಸಂಪರ್ಕಗಳನ್ನು ಹೆಚ್ಚಿಸಬೇಕು. ಜನಗಳ ಪ್ರಶ್ನೆಗಳ ಮೇಲೆ ದೀರ್ಘಕಾಲದ ಹೋರಾಟಗಳನ್ನು ಕಟ್ಟಬೇಕು. ದಲಿತ ಮತ್ತು ಬುಡಕಟ್ಟು ಜನಗಳ ಬೆಂಬಲಕ್ಕೆ ನಿಲ್ಲಬೇಕು ಎಂದ ಅವರು ಸಾಮಾಜಿಕ ಪ್ರಶ್ನೆಗಳು ಮತ್ತು ವರ್ಗ ಆಂದೋಲನಗಳ ನಡುವೆ ಸಮಗ್ರ ಸಂಬಂಧವಿದೆ ಎಂದರು.

ಐಡೆಂಟಿಟಿ ರಾಜಕೀಯವನ್ನು ಜನಗಳನ್ನು ಒಡೆಯಲಿಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ನಾವು ಅವುಗಳ ಪ್ರಜಾಪ್ರಭುತ್ವ ಹೂರಣವನ್ನು ಜನಗಳನ್ನು ಒಟ್ಟುಗೂಡಿಸಲಿಕ್ಕಾಗಿ ಗುರುತಿಸುತ್ತೇವೆ. ಸೈದ್ಧಾಂತಿಕ ಚರ್ಚೆಗಳ ಮೇಲೆ ಒತ್ತು ಇರಬೇಕು. ಪಶ್ಚಿಮ ಬಂಗಾಲವನ್ನು ಒಡೆಯುವ ಯಾವುದೇ ಪ್ರಯತ್ನದ ವಿರುದ್ಧ ಎಡಶಕ್ತಿಗಳು ಹೋರಾಡುತ್ತವೆ ಎಂದು ಸೂರ್ಯಕಾಂತ ಮಿಶ್ರ ಹೇಳಿದರು.

ಪಕ್ಷದ ಎಲ್ಲ ಮಟ್ಟಗಳಲ್ಲಿ ಫಲಿತಾಂಶಗಳ ಪರಾಮರ್ಶೆಯನ್ನು ಮತ್ತು ಜನಸಮೂಹಗಳಿಂದ ಅಭಿಪ್ರಾಯಗಳನ್ನು ಪಡೆಯುವ ಕೆಲಸವನ್ನು ಮುಂದುವರೆಸಲು ರಾಜ್ಯ ಸಮಿತಿ ನಿರ್ಧರಿಸಿತು.

ಪುಟ 11 ರಿಂದ

ಸಾಮ್ರಾಜ್ಯಶಾಹಿ ಆಕ್ರಮಣಗಳ ದಾರಿಯಲ್ಲಿ 1996-2000

ನೇತೃತ್ವದ ರಾಜಕೀಯ ಪಕ್ಷವು ಮುಂಚೂಣಿಗೆ ಬಂದಿತು ಮತ್ತು ಅವರು ಇತ್ತೀಚೆಗೆ, ಇಂಡೋನೇಷ್ಯಾದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಆರ್ಥಿಕ ಬಿಕ್ಕಟ್ಟು ಮತ್ತು ಸಾಮೂಹಿಕ ರಾಜಕೀಯ ಕ್ರಿಯೆಯ ನಡುವೆ ಯಾಂತ್ರಿಕ ಸಂಬಂಧವಿಲ್ಲ

ಆಳವಾದ ಕುಸಿತ ಮತ್ತು ಅದರ ಮುಂದುವರಿಕೆ ಇತ್ತೀಚಿನ ವರ್ಷಗಳಲ್ಲಿ ಶ್ರದ್ಧೆಯಿಂದ ನಿರ್ಮಿಸಲ್ಪಟ್ಟ ಬಂಡವಾಳಶಾಹಿಯ ಭ್ರಮೆಯನ್ನು ಚೂರುಚೂರು ಮಾಡುತ್ತದೆ ಎನ್ನುವದು ನಿಶ್ಚಿತವಾಗುತ್ತಿದೆ. ಪ್ರಜ್ಞೆಯು ಕಾರ್ಮಿಕರನ್ನು ತ್ವರಿತವಾಗಿ ಸೆಳೆಯುತ್ತದೆ, ಆದರೆ ಸ್ವಯಂಚಾಲಿತವಾಗಿ ಅಲ್ಲ. ಬದಲಾಗಿ ಶ್ರಮಿಕರನ್ನು ಸಂಘಟಿಸಲು ಮತ್ತು ಭಾರಿ ಪ್ರತಿರೋಧವನ್ನು ಬೆಳೆಸಲು ಕ್ರಾಂತಿಕಾರಿ, ಪ್ರಗತಿಪರ ಮನಸ್ಸಿನ ಮತ್ತು ಎಡ ಕಾರ್ಮಿಕ ಸಂಘಗಳ ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಮಾತ್ರ ಅದು ಸಾಧ್ಯವಾಗುತ್ತದೆ. ಪ್ರಸ್ತುತ ಹೋರಾಟ ಮತ್ತು ಪ್ರತಿರೋಧವು ಬಂಡವಾಳಶಾಹಿ ಆರ್ಥಿಕತೆಯ ಸಂಕಟ ಮತ್ತು ಅದರ ಆಳವಾಗಿ ಬೇರೂರಿರುವ ಬಿಕ್ಕಟ್ಟಿನ ಅಭಿವ್ಯಕ್ತಿಗಳ ವಿರುದ್ಧದ ಹೋರಾಟವಾಗಿದೆ. ಬೇಕಾಗಿರುವುದು ಕಾರ್ಯಸಾಧ್ಯವಾದ ಆರ್ಥಿಕ ಮತ್ತು ಸಾಮಾಜಿಕ ಪರ್ಯಾಯವನ್ನು ಜನಸಾಮಾನ್ಯರ ಮುಂದೆ ಪ್ರಸ್ತುತಪಡಿಸುವುದು, ಮತ್ತು ಆ ಪರ್ಯಾಯವನ್ನು ವಾಸ್ತವಕ್ಕೆ ಪರಿವರ್ತಿಸಲು ಜನರಲ್ಲಿ ಅಗತ್ಯವಾದ ವಿಶ್ವಾಸ ಮತ್ತು ಪ್ರಜ್ಞೆಯನ್ನು ಸೃಷ್ಟಿಸುವುದು. ಇದನ್ನು ರಾಷ್ಟ್ರೀಯ ಗಡಿಯ ಒಳಗಡೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸರಿಯಾದ ಶ್ರದ್ಧೆಯಿಂದ ಕೈಗೊಳ್ಳಬೇಕು. ಬಂಡವಾಳಶಾಹಿಯ ಜಾಗತಿಕ ಆಕ್ರಮಣದ ವಿರುದ್ಧ ಹೋರಾಡಲು, ದುಡಿಯುವ ಜನರಲ್ಲಿ ಅಂತರರಾಷ್ಟ್ರೀಯ ಸೌಹಾರ್ದತೆ ಮತ್ತು ಐಕ್ಯತೆಯ ಹೊಸ ಪ್ರಜ್ಞೆ ಬೆಳೆಸುವದು ಇಂದಿನ ತುರ್ತು ಕರ್ತವ್ಯವಾಗಿದೆ.

ಸಿಯಾಟಲ್‌ನಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು – ನವೆಂಬರ್, 1999

ನವೆಂಬರ್ 30, 1999 ರಂದು ಅಮೇರಿಕಾದ ಸಿಯಾಟಲ್‌ನಲ್ಲಿ ಡಬ್ಲ್ಯು.ಟಿ.ಒ. ಸಭೆ ನಡೆಯುವ ಮೊದಲು ಡಬ್ಲ್ಯು.ಟಿ.ಒ. ನ ವಿಶ್ವ–ಸ್ವಾಧೀನದ ಪ್ರಯತ್ನವನ್ನು ಮತ್ತು ಬಂಡವಾಳದ ಕ್ರೂರ ಆಳ್ವಿಕೆಯನ್ನು ಖಂಡಿಸಿ, ಪ್ರಾರಂಭವಾದ ಬೃಹತ್ ಮತ್ತು ಹಿಂಸಾತ್ಮಕ ಪ್ರತಿಭಟನಾ ಪ್ರದರ್ಶನಗಳು ಈ ಸಾಮ್ರಾಜ್ಯಶಾಹಿ ಆರ್ಥಿಕ ಆಕ್ರಮಣಶೀಲತೆಯ ವಿರುದ್ಧ, ವಿಶ್ವದಾದ್ಯಂತ ವಿಶೇಷವಾಗಿ ಮೂರನೇ ವಿಶ್ವದ ರಾಷ್ಟ್ರಗಳಲ್ಲಿ ದುಡಿಯುವ ಜನರ ಹೆಚ್ಚುತ್ತಿದ್ದ ಅಸಮಾಧಾನದ ಅಭಿವ್ಯಕ್ತಿಗೆ ಒಂದು ಸೂಚಕವಾಗಿದೆ.

ಭಾರತದಲ್ಲಿ ಟಿ.ಯು.ಐ.ಪಿ.ಎ.ಇ. ಮುಖ್ಯಕಛೇರಿ ಸ್ಥಾಪನೆ, 1996

ಡಬ್ಲ್ಯು.ಎಫ್.ಟಿ.ಯು.ನ 13 ನೇ ಅಧಿವೇಶನದ ಅವಧಿಯಲ್ಲಿ, ಟ್ರೇಡ್ ಯೂನಿಯನ್ ಇಂಟರ್‌ನ್ಯಾಷನಲ್ ಆಫ್ ಪಬ್ಲಿಕ್ ಅಂಡ್ ಅಲೈಡ್ ಎಂಪ್ಲಾಯೀಸ್ (ಟಿ.ಯು.ಐ.ಪಿ.ಎ.ಇ.)ನ ಪ್ರಧಾನ ಕಛೇರಿಯನ್ನು ಭಾರತಕ್ಕೆ ಸ್ಥಳಾಂತರಿಸುವ ಪ್ರಸ್ತಾಪವನ್ನು ಮಾಡಲಾಯಿತು., ಸಾರ್ವಜನಿಕ ಮತ್ತು ಸಂಬಂಧಪಟ್ಟ ನೌಕರರ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘ(ಟಿಯುಐ)ವನ್ನು ಪುನಃ ಸಕ್ರಿಯಗೊಳಿಸುವ ಮತ್ತು ಮರುಸಂಘಟಿಸುವ ಪ್ರಯತ್ನದಲ್ಲಿ ಅಖಿಲ ಭಾರತ ರಾಜ್ಯ ಸರಕಾರೀ ನೌಲರರ ಒಕ್ಕೂಟ(ಎ.ಐ.ಎಸ್.ಜಿ.ಇ.ಎಫ್)ನ ಪ್ರಧಾನ ಕಾರ್ಯದರ್ಶಿ ಕಾಂ. ಸುಕೋಮಲ್ ಸೇನ್ ರನ್ನು ಟಿ.ಯು.ಐ. ನ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಸೈಪ್ರಸ್ ಸರ್ಕಾರೀ ಮತ್ತು ಮಿಲಿಟರಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಕ್ರಿಸ್ಟೋಸ್ ಎ ಕ್ರಿಸ್ಟೊ, ಅವರನ್ನು ಟಿ.ಯು.ಐ. ನ ಅಧ್ಯಕ್ಷರಾಗಿ ಚುನಾಯಿಸಲಾಯಿತು ಮತ್ತು ಮರುಸಂಘಟನೆಗಾಗಿ ಕೆಲವು ಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು.. ಎಐಬಿಇಎ ಪ್ರಧಾನ ಕಾರ್ಯದರ್ಶಿ ಕಾಂ. ತಾರಕೇಶ್ವರ ಚಕ್ರವರ್ತಿ ಅವರನ್ನು ಟಿಯುಐ ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಅದರ ನಂತರ ಟಿ.ಯು.ಐ. ನ ಪ್ರಧಾನ ಕಛೇರಿಯನ್ನು ನವದೆಹಲಿಗೆ ಸ್ಥಳಾಂತರಿಸಲಾಯಿತು ಮತ್ತು ಏಷ್ಯಾ–ಪೆಸಿಫಿಕ್ ಪ್ರದೇಶದ ಡಬ್ಲ್ಯು.ಎಫ್.ಟಿ.ಯು. ಕಚೇರಿಯಿಂದ ಅದು ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ನಂತರ ಇದು ಕೋಲ್ಕತ್ತಾದಿಂದ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಟಿ.ಯು.ಐ. ಅನ್ನು ಮರುಸಂಘಟಿಸಲು ಕೆಲವು ಆರಂಭಿಕ ಕ್ರಮಗಳನ್ನು ಅದಾಗಲೇ ತೆಗೆದುಕೊಳ್ಳಲಾಗಿತ್ತು. ಟಿ.ಯು.ಐ. ನ ಕಾರ್ಯಚಟುವಟಿಕೆಗಾಗಿ ಆ ಸಂಘಗಳ ಸಕ್ರಿಯ ಸಹಕಾರವನ್ನು ಹೊರಹೊಮ್ಮಿಸಲು ಸೆಪ್ಟೆಂಬರ್ 1996 ರಲ್ಲಿ ದೆಹಲಿಯಲ್ಲಿ ಭಾರತದ ಸಾರ್ವಜನಿಕ ಸೇವಾ ಕಾರ್ಮಿಕ ಸಂಘಗಳ ಸಭೆಯನ್ನು ಕರೆಯಲಾಯಿತು. ಕೇಂದ್ರ ಸರ್ಕಾರಿ ನೌಕರರ ಒಕ್ಕೂಟ, ಅಖಿಲ ಭಾರತ ವಿಮಾ ನೌಕರರ ಸಂಘ (ಎಐಐಇಎ), ಬ್ಯಾಂಕ್ ನೌಕರರ ಸಂಘಟನೆಗಳಾದ ಬಿಇಎಫ್ಐ, ಎಐಬಿಇಎ ಸೇರಿದಂತೆ ಇಂತಹ 12 ಸಂಘಗಳು ಸಭೆಯಲ್ಲಿ ಭಾಗವಹಿಸಿದವು.

ರಾಷ್ಟ್ರೀಯ ಪರಿಸ್ಥಿತಿ: ಉನ್ನತ ಹಂತಗಳಲ್ಲಿ ಭ್ರಷ್ಟಾಚಾರ

ಬ್ಯಾಂಕ್ ಹಗರಣದ ಬೆನ್ನಹಿಂದೇ, ಇತರ ಅವಮಾನಕಾರೀ ಹಗರಣಗಳು ಅಂದರೆ ಜೈನ್ ಹವಾಲಾ ಹಗರಣ, ವಸತಿ ಹಗರಣ, ಸಕ್ಕರೆ ಆಮದು ಹಗರಣ ಮತ್ತು ಪೆಟ್ರೋಲ್ ಪಂಪ್ ವಿತರಣೆಯ ಹಗರಣಗಳು ಪತ್ತೆಯಾದವು. ಈ ಹಗರಣಗಳಲ್ಲಿ ಹಲವಾರು ಕೇಂದ್ರ ಸಚಿವರು, ರಾಜ್ಯಪಾಲರು ಮತ್ತು ಕೆಲವು ಪ್ರಮುಖ ರಾಜಕೀಯ ಪಕ್ಷಗಳ ಮುಖ್ಯಸ್ಥರು ಸೇರಿದಂತೆ ಪ್ರಮುಖ ರಾಜಕೀಯ ವ್ಯಕ್ತಿಗಳು ಸೇರಿದ್ದಾರೆ. ಕೆಲವು ಕೇಂದ್ರ ಸಚಿವರು ಮತ್ತು ರಾಜ್ಯಪಾಲರು ರಾಜೀನಾಮೆ ನೀಡಬೇಕಾಯಿತು. ಅತಿದೊಡ್ಡ ವಿರೋಧ ಪಕ್ಷದ ಅಧ್ಯಕ್ಷರು ಮತ್ತು ಆಗಿನ ಪ್ರತಿಪಕ್ಷದ ಪಕ್ಷವೂ ಸಹ ಭಾಗಿಯಾಗಿತ್ತು. ಅವುಗಳಲ್ಲಿ ಹಲವರ ವಿರುದ್ಧ ಸಿಬಿಐ ಚಾರ್ಜ್‌ಶೀಟ್‌ಗಳನ್ನು ರೂಪಿಸಿತು. ಸಕ್ಕರೆ ಹಗರಣದಲ್ಲಿ ಭಾಗಿಯಾದ ಒಬ್ಬ ಮಂತ್ರಿಯನ್ನು ಬಂಧಿಸಲಾಗಿದ್ದು, ಮತ್ತೊಬ್ಬನನ್ನು ರಾಷ್ಟ್ರ ವಿರೋಧಿ ಅಪರಾಧಿಗಳಿಗೆ ಆಶ್ರಯ ನೀಡಿದ ಆರೋಪದ ಮೇಲೆ ಬಂಧಿಸಲಾಯಿತು. 1984 ರಲ್ಲಿ ಸಿಖ್ ವಿರೋಧಿ ನರಮೇಧದ ಪ್ರಮುಖ ಆರೋಪದ ಮೇಲೆ ಮತ್ತೊಬ್ಬ ಮಾಜಿ ಮಂತ್ರಿಯನ್ನು ಬಂಧಿಸಲಾಯಿತು. ಅದೇ ಸಮಯದಲ್ಲಿ ಪ್ರಧಾನಿ (ಈಗ ಮಾಜಿ) ಮೂರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದರು – ಜುಲೈ 1993 ರಲ್ಲಿ ಸಂಸತ್ತಿನಲ್ಲಿ ನಡೆದ ಅವಿಶ್ವಾಸ ನಿರ್ಣಯವನ್ನು ಸೋಲಿಸುವದಕ್ಕಾಗಿ ಜಾರ್ಖಂಡ್ ಮುಕ್ತಿ ಮೋರ್ಚಾ ಸಂಸದರಿಗೆ ಲಂಚನೀಡಿದ್ದು, ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಅವರ ಮಗನನ್ನು ಫೆರಾ ಪ್ರಕರಣದಲ್ಲಿ ಸುಳ್ಳು ಆರೋಪಕ್ಕಾಗಿ ಸೇಂಟ್ ಕಿಟ್ಸ್ ಖೋಟಾ ಪ್ರಕರಣ ಸಿಲುಕಿಸಿದ್ದು ಮತ್ತು ಮೂರನೆಯದು, ಲಖುಭಾಯ್ ಪಾಠಕ್ ಎನ್ನುವ ಉದ್ಯಮಿಯೊಬ್ಬರಿಗೆ ಮೋಸ ಮಾಡಿದ ಪ್ರಕರಣ –. ನಂತರದ ಎರಡು ಪಿತೂರಿ ಪ್ರಕರಣಗಳಲ್ಲಿ ಅಂದಿನ ಪ್ರಧಾನ ಮಂತ್ರಿಯವರ ಆಪ್ತ ತಥಾಕಥಿತ ದೇವಮಾನವ ಚಂದ್ರಸ್ವಾಮಿ, ಮತ್ತು ಅತನ ಸಹಯೋಗಿ ಮತ್ತು ಖಾಸಗಿ ಕಾರ್ಯದರ್ಶಿಯೊಂದಿಗೆ ಸಿಬಿಐ ಬಂಧಿಸಿತು.

ಪ್ರಧಾನಮಂತ್ರಿಯೂ ಸಹ ಭಾಗಿಯಾಗಿದ್ದ ಈ ಉನ್ನತ ಮಟ್ಟದ ರಾಜಕೀಯ ಭ್ರಷ್ಟಾಚಾರದಿಂದ ದೇಶವು ದಿಗ್ಭ್ರಮೆಗೊಂಡಿತು. ಈ ಭ್ರಷ್ಟಾಚಾರದ ಹಗರಣಗಳಿಂದ ಎಡಪಂಥೀಯರು ಮತ್ತು ಅವರ ನಾಯಕರು ಮಾತ್ರ ಮುಕ್ತರಾಗಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ. ರಾಜಕೀಯ ಭ್ರಷ್ಟಾಚಾರದ ಬಗ್ಗೆ ಎಂದೂ ಕೇಳದ ಈ ಕೆಟ್ಟ ಹಿನ್ನೆಲೆಯಲ್ಲಿಯೇ 1996 ರ ಏಪ್ರಿಲ್–ಮೇ ತಿಂಗಳಲ್ಲಿ ಹನ್ನೊಂದನೇ ಲೋಕಸಭೆಯ ಚುನಾವಣೆಗಳು ನಡೆದವು. ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಸೋಲು ಕಂಡಿತು ಮತ್ತು ತ್ರಿಶಂಕು ಸಂಸತ್ತು ಬಂತು, ಅಂದರೆ ಯಾವುದೇ ಪಕ್ಷ ಅಥವಾ ಮೈತ್ರಿ ಸಂಪೂರ್ಣ ಬಹುಮತ ಪಡೆಯದ ಅತಂತ್ರ ಸ್ಥಿತಿಗೆ ಅದು ಸಂಸತ್ತನ್ನು ದೂಡಿತು.


ಕಮ್ಯುನಿಸ್ಟ್ ಚಳುವಳಿ 100: ಎರಡು ಪುಸ್ತಕಗಳು


ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ 1920ರಲ್ಲಿ ಆರಂಭವಾಗಿದ್ದು 2020–21 ಅದರ ಶತಮಾನೋತ್ಸವದ ವರ್ಷ. ಕಮ್ಯುನಿಸ್ಟ್ ಚಳುವಳಿಯ ಸಾಧನೆಗಳು–ವೈಫಲ್ಯಗಳು, ಏಳು–ಬೀಳುಗಳು, ಕೊಡುಗೆಗಳನ್ನು ನೆನಪಿಸಿಕೊಳ್ಳುವ ವಿಶ್ಲೇಷಿಸುವ ಸಂದರ್ಭ. ಇದನ್ನು ವಿಚಾರ ಸಂಕಿರಣಗಳು, ಸಭೆ–ಸಮಾರಂಭಗಳು, ಉಪನ್ಯಾಸಗಳು, ಪ್ರಕಟಣೆಗಳೊಂದಿಗೆ ಸಂಭ್ರಮಿಸುವ ಆಚರಿಸುವ ಸಂದರ್ಭ. ಆದರೆ ಕೊರೊನಾದಿಂದಾಗಿ ಹೆಚ್ಚಿನ ಮಟ್ಟಿಗೆ ಇದು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ 'ಜನಶಕ್ತಿ ಪ್ರಕಾಶನ' ಎರಡು ಪುಸ್ತಕಗಳ ಪ್ರಕಟಣೆಯ ಮೂಲಕ ಈ ಕೊರತೆಯನ್ನು ಸ್ವಲ್ಪವಾದರೂ ನೀಗಿಸುತ್ತಿದೆ. "ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ : 1920–64 ಅವಧಿಯ ಇತಿಹಾಸ" ಮತ್ತು "ಭಾರತದ ಕಮ್ಯುನಿಸ್ಟ್ ಆಂದೋಲನ : ಹೋರಾಟದ ನೂರು ವರ್ಷಗಳು" – ಆ ಎರಡು ಪುಸ್ತಕಗಳು.

ಮೊದಲ ಪುಸ್ತಕವನ್ನು ಅರುಣ ಕುಮಾರ್ ಬರೆದಿದ್ದು, ಟಿ ಸುರೇಂದ್ರ ರಾವ್ ಅವರು ಮೂಲ ಇಂಗ್ಲೀಷಿನಿಂದ ಅನುವಾದಿಸಿದ್ದಾರೆ. ಇದು ಅದರ ಶೀರ್ಷಿಕೆಯೇ ಹೇಳುವಂತೆ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದ 1920–64 ಅವಧಿಯ 45 ಅಧ್ಯಾಯಗಳಿರುವ ಸುಮಾರು 300 ಪುಟಗಳ ವಿವರವಾದ ಇತಿಹಾಸ. ಪ್ರತಿಯೊಂದು ಅಧ್ಯಾಯದಲ್ಲಿ ಕಾಲಕ್ರಮದಲ್ಲಿ 1920ರಲ್ಲಿ ಸ್ಥಾಪನೆಯಾಗುತ್ತಲೇ ಕಮ್ಯುನಿಸ್ಟ್ ಪಕ್ಷ ಎದುರಿಸಿದ ಮೀರತ್ ಪಿತೂರಿ ಮೊಕದ್ದಮೆ ಮುಂತಾದ ದಮನಚಕ್ರಗಳು, ಅದರ ನಡುವೆ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟ ಮತ್ತು ಬಂಡವಾಳಶಾಹಿ–ಭೂಮಾಲಕರ ವಿರುದ್ಧ ರೈತ–ಕಾರ್ಮಿಕರ ಹೋರಾಟಗಳನ್ನು ಬೆಸೆಯುವ ಕುರಿತು ನಡೆಸಿದ ಚಿಂತನ–ಮಂಥನಗಳು, ರೂಪಿಸಿದ ಧೋರಣೆ–ಕಾರ್ಯತಂತ್ರಗಳು (ಕರಡು ಕಾರ್ಯಾಚರಣೆಯ ವೇದಿಕೆ–1931, ದತ್–ಬ್ರಾಡ್ಲಿ ಪ್ರಬಂಧ–1936, ಕಾರ್ಮಿಕ ಸಂಘಗಳಲ್ಲಿ ಕೆಲಸ ಕುರಿತು 1952ರ ಸಮಾವೇಶ, ರೈತರ ನಡುವೆ ಕೆಲಸದ ಕುರಿತು ದಸ್ತಾವೇಜು), ಸಂಘಟನಾ ಕ್ರಮಗಳು (ಅಖಿಲ ಭಾರತ ಕೇಂದ್ರದ ರಚನೆ, ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ಸ್ಥಾಪನೆ, 1ರಿಂದ 4 ನೆಯ ವರೆಗಿನ ಮಹಾಧಿವೇಶನಗಳು), ಜನಾಂದೋಲನಗಳ ಸಂಘಟನೆಯಲ್ಲಿ ಪಕ್ಷದ ಪಾತ್ರ (ರಿನ್ ಬಂಡಾಯ, ತೇಭಾಗ, ಪುನ್ನಪ್ರ–ವಯಲಾರ್, ವಾರಲೀ, ಸುರ್ಮಾ ಕಣಿವೆ, ತೆಲಂಗಾಣ ರೈತರ ಸಶಸ್ತ್ರ ಹೋರಾಟದ ಮೂರು ಹಂತಗಳು, 1959ರ ಬಂಗಾಳ ಆಹಾರ ಚಳುವಳಿ, ಪಂಜಾಬಿನ ಅಭಿವೃದ್ಧಿ ಕಂದಾಯದ ವಿರುದ್ಧ ಹೋರಾಟ) ಕೈಗೊಂಡ ಜನಸೇವೆ (ಬಂಗಾಳದ ಬರಗಾಲ) ರಾಜಕೀಯ ಮಧ್ಯಪ್ರವೇಶ (ಭಾಷಾವಾರು ರಾಜ್ಯಗಳ ರಚನೆ), ಕೇರಳದ ಮೊದಲ ಕಮ್ಯುನಿಸ್ಟ್ ಸರಕಾರದ ರಚನೆ – ಇವುಗಳ ಕುರಿತು ವಿವರವಾದ ಮಾಹಿತಿಯಿದೆ. ಇವಲ್ಲದೆ ಪಕ್ಷದ ಪ್ರಾತಸ್ಮರಣೀಯ ಸ್ಥಾಪಕ ಸದಸ್ಯರಾದ ಎಂ.ಎನ್.ರಾಯ್, ಅಮೀರ್ ಹೈದರ್ ಖಾನ್, ಮುಜಾಫರ್ ಅಹಮದ್ ಜೀವನದ ರೋಚಕ ಪರಿಚಯವಿದೆ. ತಾಷ್ಕೆಂಟಿನಲ್ಲಿ ಪಕ್ಷ ಸ್ಥಾಪಿತವಾದ 1920 ಅಥವಾ ಕಾನ್ಪುರದ ಕಮ್ಯುನಿಸ್ಟ್ ಸಮ್ಮೇಳನ ನಡೆದ 1925 – ಇವುಗಳಲ್ಲಿ ಸ್ಥಾಪನಾ ವರ್ಷ ಯಾವುದು ಎಂಬುದರ ಕುರಿತು ಸಿಪಿಐ ಮತ್ತು ಸಿಪಿಐ(ಎಂ) ಗಳ ನಡುವೆ ವಿವಾದದ ಕುರಿತು ಜಿಜ್ಞಾಸೆ ಇದೆ. ಇದು ಹೀಗೆ ಕಮ್ಯುನಿಸ್ಟ್ ಪಕ್ಷದ ಮೊದಲ ಅರ್ಧ ಶತಮಾನದ ವಿವರವಾದ ಇತಿಹಾಸ ತಿಳಿದುಕೊಳ್ಳಲು ಓದಲೇ ಬೇಕಾದ ಪುಸ್ತಕ. ಈ ಪುಸ್ತಕದ ಬೆಲೆ ರೂ. 250.

ಎರಡನೆಯ ಪುಸ್ತಕ "ಭಾರತದ ಕಮ್ಯುನಿಸ್ಟ್ ಆಂದೋಲನ : ಹೋರಾಟದ ನೂರು ವರ್ಷಗಳು" ಸುಮಾರು 80 ಪುಟಗಳದ್ದಾಗಿದ್ದು, ಕಳೆದ ನೂರು ವರ್ಷಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಆಯಾಮಗಳಲ್ಲಿ ಕಮ್ಯುನಿಸ್ಟ್ ಚಳುವಳಿಯ ವಿಶಿಷ್ಟ ಕೊಡುಗೆಗಳ ಕುರಿತು ಪ್ರಮುಖ ಕಮ್ಯುನಿಸ್ಟ್ ನಾಯಕರು ಬರೆದ ಲೇಖನಗಳ ಸಂಗ್ರಹ. ಪ್ರಜಾಪ್ರಭುತ್ವಕ್ಕೆ ಹೋರಾಟದಲ್ಲಿ ಕಮ್ಯುನಿಸ್ಟರ ವಿಶಿಷ್ಟ ಕೊಡುಗೆಗಳ ಕುರಿತು ಪ್ರಕಾಶ್ ಕಾರಟ್, ಜಾತ್ಯತೀತತೆಯ ರಕ್ಷಣೆಗೆ ಕೊಡುಗೆಗಳ ಕುರಿತು ಸೀತಾರಾಂ ಯೆಚುರಿ ಬರೆದಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ವಿಶಿಷ್ಟ ಪಾತ್ರದ ಕುರಿತು ನೀಲೋತ್ಪಲ ಬಸು ವಿಶ್ಲೇಷಿಸಿದ್ದಾರೆ. ಕಾರ್ಮಿಕ ವರ್ಗದ ಚಳುವಳಿಯ ಸಂಘಟನೆಯಲ್ಲಿ ಕಮ್ಯುನಿಸ್ಟರ ಮುಂದಾಳ್ತನದ ಕುರಿತು ಡಾ.ಹೇಮಲತಾ ವಿವರಿಸಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದಲ್ಲಿ ಕಮ್ಯುನಿಸ್ಟರ ಕೊಡುಗೆ ಕುರಿತು ಬಿ.ವಿ.ರಾಘವುಲು, ಮಹಿಳಾ ವಿಮೋಚನಾ ಹೋರಾಟದಲ್ಲಿ ಕಮ್ಯುನಿಸ್ಟರ ವಿಶಿಷ್ಟ ಪಾತ್ರದ ಕುರಿತು ಬೃಂದಾ ಕಾರಟ್ ವಿಶ್ಲೇಷಿಸಿದ್ದಾರೆ. ಶತಮಾನೋತ್ಸವದ ಸಂದರ್ಭದಲ್ಲಿ ಹೊಸ ಸವಾಲು ಗಳ ಕುರಿತು ಪ್ರೊ. ಪ್ರಭಾತ್ ಪಟ್ನಾಯಕ್, ಭಾರತದ ವಿಜ್ಞಾನದಲ್ಲಿ ಎಡಪಂಥೀಯರು ಕುರಿತು ಪ್ರಬೀರ್ ಮುರಕಾಯಸ್ಥ, ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದ ಕುರಿತು ಡಾ. ಕೆ.ಪ್ರಕಾಶ್ ತಮ್ಮ ನಿರೂಪಣೆ ಹಂಚಿಕೊಂಡಿದ್ದಾರೆ. ಈ ವಿಶ್ಲೇಷಣಾತ್ಮಕ ಲೇಖನಗಳ ಸಂಗ್ರಹವಾದ ಸುಮಾರು 80 ಪುಟಗಳ ಕಿರುಪುಸ್ತಕ ನೂರು ವರ್ಷದ ಕಮ್ಯುನಿಸ್ಟ್ ಚಳುವಳಿಯ ವಿಶಿಷ್ಟ ಕೊಡುಗೆಗಳ ಕುರಿತು ಸಮಗ್ರ ಚಿತ್ರಣವನ್ನು ನೀಡುತ್ತದೆ. ಈ ಪುಸ್ತಕದ ಬೆಲೆ ರೂ.70.

ಇವೆರಡು ಪುಸ್ತಕಗಳು ಪ್ರಕಟವಾಗಿದ್ದು ಇದನ್ನು ಖರೀದಿ ಮಾಡಲು ಆಸಕ್ತಿ ಇರುವವರು, ಪುಸ್ತಕಪ್ರೀತಿಯ ಬೆಂಗಳೂರಿನ ಅಂಗಡಿಯಲ್ಲಿ (4ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಬಡಾವಣೆ ಬೆಂಗಳೂರು – 560 086) ಲಭ್ಯವಿರುತ್ತದೆ. ಅಂಚೆ ಮೂಲಕ ತರಿಸಿಕೊಳ್ಳುವ ಆಸಕ್ತಿ ಇರುವವರು – 80–23494488, 9036082005– ಈ ಫೋನ್ ನಂಬರುಗಳನ್ನು ಸಂಪರ್ಕಿಸಬಹುದು.





ಶ್ರಮ ಜೀವಿಗಳು ತುರ್ತು ಪರಿಸ್ಥಿತಿಯ ಅನುಭವಗಳಿಂದ ಪಾಠ ...... ಪುಟ 8 ರಿಂದ

ಭಾರತದ ಪ್ರಜಾಪ್ರಭುತ್ವವನ್ನು ಉಳಿಸಬೇಕು.

ಜನಶಕ್ತಿ: ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟದಲ್ಲಿ ಆರೆಸ್ಸೆಸ್/ಬಿಜೆಪಿ ಪಾತ್ರವೇನು?

ಈಗ ಬಿಜೆಪಿಯ ಬೆಂಬಲಿಗರಾಗಿರುವ ಸುಬ್ರಮಣಿಯನ್ ಸ್ವಾಮಿಯವರು ಜೂನ್ 13, 2000ದ 'ದಿ ಹಿಂದು' ಪತ್ರಿಕೆಯಲ್ಲಿ ತುರ್ತು ಪರಿಸ್ಥಿತಿಯ 25ನೇ ವಾರ್ಷಿಕದ ಸಂದರ್ಭದಲ್ಲಿ ಬರೆದ ಲೇಖನ "Unlearnt lessons of the Emergency" (ತುರ್ತು ಪರಿಸ್ಥಿತಿಯ ಕಲಿಯದ ಪಾಠಗಳು)ದಲ್ಲಿ ಏನು ಹೇಳಿದ್ದರು ನೋಡಿ:

"1975–77ರಲ್ಲಿ ಹೆಚ್ಚಿನ ಬಿಜೆಪಿ/ಆರೆಸ್ಸೆಸ್ ಮುಖಂಡರು ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟಕ್ಕೆ ವಿಶ್ವಾಸಘಾತ ಬಗೆದರು. ಆಗಿನ ಆರೆಸ್ಸೆಸ್ ಮುಖ್ಯಸ್ಥ ಬಾಳಾಸಾಹೇಬ್ ದೇವರಸ್ ಪುಣೆಯಲ್ಲಿನ ಯರವಡಾ ಜೈಲಿನಿಂದ ಇಂದಿರಾ ಗಾಂಧಿಯವರಿಗೆ, ಜೆಪಿ ನೇತೃತ್ವದ ಆಂದೋಲನದಲ್ಲಿ ಆರೆಸ್ಸೆಸ್ ನ ಸಹಯೋಗ ಇಲ್ಲ ಎನ್ನುವ ಮತ್ತು ಕುಖ್ಯಾತ 20 ಅಂಶಗಳ ಕಾರ್ಯಕ್ರಮಕ್ಕೆ ಕೆಲಸ ಮಾಡುವುದಾಗಿ ಹೇಳುವ ಹಲವು ಕ್ಷಮಾಪಣೆ ಪತ್ರಗಳನ್ನು ಬರೆದರು ಎಂಬುದು ಮಹಾರಾಷ್ಟ್ರ ವಿಧಾನಸಭೆಯ ಕಲಾಪಗಳ ದಾಖಲೆಗಳಲ್ಲಿ ಇದೆ. ಅವರು ಈ ಯಾವ ಪತ್ರಗಳಿಗೂ ಉತ್ತರಿಸಲಿಲ್ಲ. ಶ್ರೀ ಅಟಲ ಬಿಹಾರಿ ವಾಜಪೇಯಿ ಕೂಡ ಇಂದಿರಾ ಗಾಂಧಿಯವರಿಗೆ ಕ್ಷಮಾಪಣಾ ಪತ್ರಗಳನ್ನು ಬರೆದರು, ಅವನ್ನು ಗಮನಕ್ಕೆ ತಗೊಂಡರು. 20 ತಿಂಗಳ ತುರ್ತು ಪರಿಸ್ಥಿತಿಯ ಕಾಲದಲ್ಲಿ ಹೆಚ್ಚಿನ ಅವಧಿಯಲ್ಲಿ ಶ್ರೀ ವಾಜಪೇಯಿ ಸರಕಾರದ ವಿರುದ್ಧ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಎಂಬ ಲಿಖಿತ ಭರವಸೆ ಕೊಟ್ಟು ಪೆರೋಲ್ ನಲ್ಲಿ ಹೊರಗೇ ಇದ್ದರು. ಒಳ್ಳೆಯ ವರ್ತನೆಯ ಭರವಸೆ ನೀಡಿ ಜೈಲುಗಳಿಂದ ಹೊರನಡೆದ ಆಗಿನ ಜನಸಂಘದ ಇತರ ಸುಯೋಗ್ಯರ ವಿಶದವಾದ ವರ್ಣನೆ ಅಕಾಲಿ ಮುಖಂಡ ಶ್ರೀ ಸುರ್ಜಿತ್ ಸಿಂಗ್ ಬರ್ನಾಲಾ ರವರು ಬರೆದ ಒಂದು ಪುಸ್ತಕದಲ್ಲಿ ಇದೆ."

JANASHAKTHI KANNADA VARA PATRIKE June 28- July 04, 2021 Price: Rs. 10/- Date of Publication: 25 June 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಾರರಿಗೆ ಜಾತಿ ಆಧಾರದಲ್ಲಿ ತಾರತಮ್ಯ ಮಾಡುವುದನ್ನು ವಿರೋಧಿಸಿ ರಾಜ್ಯದಾದ್ಯಂತ ಪ್ರತಿಭಟನೆ

ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ವೇತನ ನೀಡುವಾಗ ತಾರತಮ್ಯ ಮಾಡುವ ಸರ್ಕಾರದ ಉದ್ದೇಶವನ್ನು ನಾವು ಬಲವಾಗಿ ಖಂಡಿಸುತ್ತೇವೆ ಹಾಗೂ ಇಂದು ದೇಶಾದ್ಯಂತ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಮತ್ತು ದಲಿತ ಶೋಷಣ್ ಮುಕ್ತಿ ಮೊರ್ಚಾದ ನೇತೃತ್ವದಲ್ಲಿ ಇಂದು ಪ್ರತಿಭಟಿಸಿ ನಮ್ಮ ಆಕ್ಷೇಪಣೆಯನ್ನು ಸಲ್ಲಿಸಬಯಸುತ್ತೇವೆ. ಉದ್ಯೋಗ ಖಾತ್ರಿ ವೇತನವನ್ನು ಜಾತಿ ಆಧಾರದಲ್ಲಿ ವಿಭಜಿಸುವುದು ಮತ್ತು ಅವರಲ್ಲಿ ಎಸ್.ಸಿ., ಎಸ್.ಟಿ. ಮುಂತಾದ ತಾರತಮ್ಯ ಮಾಡುವುದು ಎಂದಿಗೂ ಸಮರ್ಥನೀಯವಲ್ಲ.

ಇದರಿಂದಾಗಿ ಸಮಾನ ವೇತನ ಪಡೆಯಬೇಕಾದ ಕೆಲಸಗಾರರಿಗೆ ತಾರತಮ್ಯ ಮಾಡಿದಂತಾಗುವುದು. ವೇತನ ಪಾವತಿಯಲ್ಲಿ ಅನಗತ್ಯ ವಿಳಂಬ ಆಗುವುದು. ವೇತನ ಪಾವತಿಯ ಪ್ರಕ್ರಿಯೆಯಲ್ಲಿ ಯಾವ ಸದುದ್ದೇಶವಿಲ್ಲದ ಗೊಂದಲಕ್ಕೆ ಆಸ್ಪದ ಮಾಡಿದಂತಾಗುವುದು. ಇದರಿಂದ ಸಮಾನ ವೇತನ ಪಾವತಿಯ ಸಿದ್ಧಾಂತಕ್ಕೆ ಧಕ್ಕೆಯಾಗುವುದು. ಎಸ್.ಸಿ., ಎಸ್.ಟಿ., ಕೆಲಸಗಾರರ ಹಕ್ಕುಗಳಿಗೆ ಅನ್ಯಾಯವಾಗುವುದು.

ಆದ್ದರಿಂದ ನಾವು ಇಲಾಖೆಯ ಈ ಅನಗತ್ಯ ಶಿಫಾರಸನ್ನು ಹಿಂಪಡೆಯಬೇಕೆಂದು ನಾವು ಈ ಮೂಲಕ ಒತ್ತಾಯಿಸುತ್ತೇವೆ. ಬದಲಾಗಿ ನಾವು ಪ್ರತಿಯೊಂದು ಕೆಲಸ ಬಯಸುವ ಕುಟುಂಬಕ್ಕೆ ವರ್ಷದಲ್ಲಿ 200 ದಿನಗಳ ಕೆಲಸ ನೀಡಬೇಕೆಂದೂ ದಿನದ ವೇತನವನ್ನು ರೂ. 600 ಕ್ಕೆ ಏರಿಸಬೇಕೆಂದು ಆಗ್ರಹಿಸುತ್ತೇವೆ ಅಲ್ಲದೆ ಕೆಲಸಗಾರರಿಗೆ ಬಾಕಿ ಇರುವ ವೇತನವನ್ನು ಕೂಡಲೆ ಪಾವತಿ ಮಾಡಬೇಕೆಂದೂ ವೇತನ ಪಾವತಿ ಮಾಡುವುದನ್ನು ತಪ್ಪದೆ ವಿಳಂಬಮಾಡದೆ ಸಂದಾಯ ಮಾಡಬೇಕೆಂದು ಒತ್ತಾಯಿಸಿದೆ.

ಕಾರ್ಮಿಕರು ಅಗತ್ಯ ದೈಹಿಕ ಅಂತರ ಕಾಪಾಡಿ ಕೋವಿಡ್–19 ಕ್ಕೆ ಸಂಬಂಧಪಟ್ಟ ನಿಯಮಗಳನ್ನು ತಪ್ಪದೆ ಪಾಲಿಸಬೇಕೆಂದು ಒತ್ತಾಯಿಸಿದೆ.











ಏಪ್ರೀಲ್– ಮೇ ತಿಂಗಳ ವೇತನ ಬಿಡುಗಡೆಗೆ ಒತ್ತಾಯಿಸಿ ಬಿಸಿಯೂಟ ನೌಕರರ ಪ್ರತಿಭಟನೆ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**